ದುಡಿಯುವ ಜನರ ಪ್ರಾಣ ಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ

ಸಂಪುಟ 15 | ಸಂಚಿಕೆ 45 | ನವೆಂಬರ್ 1-7, 2021 | ಪುಟ 16 | ರೂ. 10

https://janashakthi.wordpress.com e-mail : js_weekly@yahoo.com

ಅನೈತಿಕ ಪೊಲೀಸ್ ಗಿರಿ



'ಕ್ರಿಯೆ-ಪ್ರತಿಕ್ರಿಯೆ' ಬಣ್ಣ ಬಯಲು

ಕೇವಲ ಜನಗಣತಿ ನಡೆಯಲಿ ಎನ್‌ಪಿ ಆರ್ ಪ್ರಕ್ರಿಯೆ ಬೇಡ





ಹಿಂದುತ್ವ ಸರ್ವಾಧಿಕಾರಶಾಹಿಗೆ ಹಕ್ಕುಗಳ ಆಯೋಗವೂ ಬಲಿ



ಸ್ವಾತಂತ್ರ್ಯ-75 ಕರ್ನಾಟಕದಲ್ಲಿ ಶಾಲಾ ಶಿಕ್ಷಣ

ಬೆಲೆ ಏರಿಕೆ ವಿರುದ್ಧ ಗ್ರಾಮಗಳಿಂದ ನಗರಗಳವರೆಗೆ ವ್ಯಾಪಕ ಪ್ರತಿಭಟನೆಗೆ ಸಿಪಿಐ(ಎಂ) ಕೇಂದ್ರ ಸಮಿತಿ ಕರೆ

ಪೆಗಾಸಸ್ ಬಗ್ಗೆ ಸರ್ಕಾರ ಈಗ ಖಚಿತ ಉತ್ತರ ಕೊಡಬೇಕಾಗಿದೆ

ಯಾವುದೇ ಮೂರ್ತ ಸ್ಪಂದನೆ ನೀಡಲು ರಾಷ್ಟ್ರೀಯ ಭದ್ರತೆಯ ಮರೆಯಲ್ಲಿ ನಿರಾಕರಿಸಲಾಗದು ಎಂದು ನ್ಯಾಯಾಲಯವು ಗಮನಿಸಿರುವುದರಿಂದ, ಪೆಗಾಸಸ್ ತಂತ್ರಾಂಶ ಬಳಕೆಯ ಬಗ್ಗೆ ಒಂದು ಖಚಿತ ಉತ್ತರವನ್ನು ನೀಡಲು ಸರ್ಕಾರವು ಬಾಧ್ಯವಾಗಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಪ್ರಭುತ್ವದ ಯಾವುದಾದರೂ ಸಂಸ್ಥೆ ಪೆಗಾಸಸ್ ಗೂಢಚರ್ಯೆ ತಂತ್ರಾಂಶವನ್ನು ಬಳಸಿದೆಯೇ ಅಥವಾ ಇಲ್ಲವೇ ಎಂಬುದರ ಬಗ್ಗೆ ಸುಪ್ರೀಂ ಕೋರ್ಟ್‌ಗೆ ಒಂದು ಖಚಿತವಾದ ಉತ್ತರವನ್ನು ನೀಡಲು ಸರ್ಕಾರ ನಿರಾಕರಿಸಿತ್ತು. ಈ ತಪ್ಪಿಸಿಕೊಳ್ಳುವ ನಿಲುವಿನ ಮೂಲಕವೇ ಈ ವಿಷಯದಲ್ಲಿ ಅದು ತನ್ನ ಶಾಮೀಲನ್ನು ಒಪ್ಪಿಕೊಂಡಂತಾಗಿತ್ತು. ಇದೇ ಹಟಮಾರಿತನ ದಿಂದಾಗಿಯೇ ಸಂಸತ್ತಿನ ಸಂಪೂರ್ಣ ಮುಂಗಾರು ಅಧಿವೇಶನ ಸ್ಥಗಿತಗೊಳ್ಳುವಂತಾಗಿದ್ದು ಎಂದು ಪೊಲಿಟ್ ಬ್ಯುರೊ ನೆನಪಿಸಿದೆ.

ಸುಪ್ರೀಂ ಕೋರ್ಟ್ ಈ ವಿಷಯದ ತನಿಖೆ ನಡೆಸಲು ಸುಪ್ರೀಂ ಕೋರ್ಟ್‌ನ ಒಬ್ಬ ನಿವೃತ್ತ ನ್ಯಾಯಮೂರ್ತಿಗಳ ನೇತೃತ್ವದಲ್ಲಿ ತಜ್ಞರ ಸಮಿತಿಯನ್ನು ರಚಿಸುವ ಮೂಲಕ ಒಂದು ಮಹತ್ವದ ಹೆಜ್ಜೆ ಇಟ್ಟಿದೆ. ಸಮಿತಿಯು ಸಂಬಂಧಪಟ್ಟ ಸಾರ್ವಜನಿಕರಿಂದ ಅಭಿಪ್ರಾಯಗಳನ್ನು ಆಹ್ವಾನಿಸಬೇಕು. ಈ ಗೂಢಚರ್ಯೆ ತಂತ್ರಾಂಶ ಅಂತರಾಷ್ಟ್ರೀಯ ಹರಹನ್ನೂ ಹೊಂದಿರುವುದರಿಂದಾಗಿ ವಿದೇಶಿ ತಜ್ಞರನ್ನು ಕೂಡ ಸಾಕ್ಷ್ಯ ನೀಡಲು ಆಹ್ವಾನಿಸಬೇಕು ಎಂದು ಸೂಚಿಸಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಸಮಿತಿಯು ವಿಚಾರಣೆಯನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು ಎಂದು ಹೇಳಿದೆ.

ಜನನ–ಮರಣಗಳ ಮಾಹಿತಿಗಳ ಕೇಂದ್ರೀಕರಣ ಸಲ್ಲದು

ರಾಷ್ಟ್ರೀಯ ಮಟ್ಟದಲ್ಲಿ ನೋಂದಾಯಿತ ಜನನ ಮತ್ತು ಮರಣಗಳ ದತ್ತಾಂಶ ಸಂಚಯುವನ್ನು (ಡೇಟಾಬೇಸ್) ಕೇಂದ್ರ ಸರಕಾರವು ನಿರ್ವಹಿಸಲು ಅನುವು ಮಾಡಿಕೊಡಲಿಕ್ಕಾಗಿ ಕಾನೂನಿಗೆ ಪ್ರಸ್ತಾವಿತ ತಿದ್ದುಪಡಿಯು ಕೇಂದ್ರೀಕರಣದ ಒಂದು ಅನಗತ್ಯ ಹೆಜ್ಜೆ ಎಂದು ಸಿಪಿಐ(ಎಂ) ಪೊಲಿಟ್ ಬ್ಯೂರೋ ಹೇಳಿದೆ.

ಸದ್ಯ, ಜನನ ಮತ್ತು ಮರಣಗಳ ನೋಂದಣಿ ರಾಜ್ಯ ಸರ್ಕಾರಗಳ ವ್ಯಾಪ್ತಿಯಲ್ಲಿದೆ.

ದತ್ತಸಂಚಯುವನ್ನು ನಿರ್ವಹಿಸಲು ಕೇಂದ್ರಕ್ಕೆ ಅವಕಾಶ ಕಲ್ಪಿಸಲು 'ಜನನ ಮತ್ತು ಮರಣಗಳ ನೋಂದಣಿ ಕಾಯಿದೆ, 1969' ಗೆ ಪ್ರಸ್ತಾಪಿಸಲಾಗಿರುವ ತಿದ್ದುಪಡಿಯು ರಾಷ್ಟ್ರೀಯ ಜನಸಂಖ್ಯಾ ನೋಂದಣಿ(ಎನ್.ಪಿ.ಆರ್) ಅನ್ನು ಸಮಕಾಲಿಕಗೊಳಿಸಲು ಅನುವು ಮಾಡಿ ಕೊಡಲಿಕ್ಕಾಗಿ, ಮತ್ತು ಇದು ಮುಂದೆ ಸಿದ್ಧಪಡಿಸಬೇಕೆಂದಿರುವ 'ನಾಗರಿಕರ ರಾಷ್ಟ್ರೀಯ ದಾಖಲೆ' (ಎನ್.ಆರ್.ಸಿ.)ಗೆ ಆಧಾರವಾಗಿದೆ. ಈ ಎನ್‌ಪಿಆರ್–ಎನ್‌ಆರ್‌ಸಿ, ಪೌರತ್ವ ತಿದ್ದುಪಡಿ ಕಾಯ್ದೆಯ ಜೊತೆಗೆ, ಕೆಲವರನ್ನು ಹೊರತುಪಡಿಸುವ ಮತ್ತು ವಿಭಜನಕಾರಿಯಾದ ಹೆಜ್ಜೆಯಾಗಲಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ನೆನಪಿಸಿದೆ.

ಈ ದತ್ತಾಂಶ ಸಂಚಯದ ಕೇಂದ್ರೀಕರಣವು ಈಗಾಗಲೇ ಜಾರಿಯಲ್ಲಿರುವ ಕಣ್ಗಾವಲು ಆಳ್ವಿಕೆಯನ್ನು ಬಲಪಡಿಸುವ ಉದ್ದೇಶವನ್ನು ಹೊಂದಿದೆ ಎಂದಿರುವ ಪೊಲಿಟ್‌ಬ್ಯುರೊ, ಜನನ ಮತ್ತು ಮರಣಗಳ ನೋಂದಣಿಯನ್ನು ರಾಜ್ಯಗಳ ಅಧಿಕಾರ ವ್ಯಾಪ್ತಿಯಲ್ಲಿ ಮುಂದುವರಿಸಬೇಕೆಂದು ಆಗ್ರಹಿಸಿದೆ.

ಬಿಎಸ್‌ಎಫ್ ವ್ಯಾಪ್ತಿ ವಿಸ್ತರಣೆ ಒಕ್ಕೂಟ ತತ್ವದ ಉಲ್ಲಂಘನೆ

ಬಿ.ಎಸ್.ಎಫ್.(ಗಡಿ ಭದ್ರತಾ ಪಡೆ)ನ ವ್ಯಾಪ್ತಿ ಪ್ರದೇಶವನ್ನು ಪಂಜಾಬ್, ಪಶ್ಚಿಮ ಬಂಗಾಲ ಮತ್ತು ಅಸ್ಸಾಂ ನಲ್ಲಿ ಅಂತರ್ರಾಷ್ಟ್ರೀಯ ಗಡಿಗಳೊಳಗೆ ಈಗಿರುವ 15 ಕಿ.ಮೀ. ನಿಂದ 50 ಕಿ.ಮೀ. ವರೆಗೆ ವಿಸ್ತರಿಸುವ ಕೇಂದ್ರ ಸರಕಾರದ ನಿರ್ಧಾರ ರಾಜ್ಯಗಳ ಹಕ್ಕುಗಳ ಮತ್ತು ಒಕ್ಕೂಟ ನೀತಿಯೊಳಕ್ಕೆ ಮಾಡಿರುವ ಅತಿಕ್ರಮಣ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಅಭಿಪ್ರಾಯ ಪಟ್ಟಿದೆ.

ರಾಜ್ಯಗಳೊಡನೆ ಸಮಾಲೋಚನೆ ನಡೆಸದೆಯೇ ಕೇಂದ್ರ ಸರಕಾರ ಈ ನಿರ್ಧಾರವನ್ನು ಕೈಗೊಂಡಿದೆ. ಪೋಲೀಸ್ ವ್ಯವಹಾರ ಮತ್ತು ಕಾನೂನು–ವ್ಯವಸ್ಥೆ ರಾಜ್ಯ ಪಟ್ಟಿಯಲ್ಲಿರುವ ಒಂದು ವಿಷಯವಾಗಿದ್ದು ಈ ನಿರ್ಧಾರ ನಮ್ಮ ಸಂವಿಧಾನದ ಒಂದು ಮೂಲ ಲಕ್ಷಣವಾದ ಒಕ್ಕೂಟ ತತ್ವವನ್ನು ಉಲ್ಲಂಘಿಸುತ್ತದೆ ಎಂದಿರುವ ಸಿಪಿಐ(ಎಂ) ಇದನ್ನು ಹಿಂದಕ್ಕೆ ಪಡೆಯಬೇಕು ಎಂದು ಆಗ್ರಹಿಸಿದೆ.

ಬಾಂಗ್ಲಾದೇಶದಲ್ಲಿ ಕೋಮು ಹಿಂಸಾಚಾರ ಬಹಳ ಆತಂಕಕಾರಿ

ಬಾಂಗ್ಲಾದೇಶದಲ್ಲಿ ದುರ್ಗಾ ಪೂಜೆಯ ಸಮಯದಲ್ಲಿ ಕೋಮು ಹಿಂಸಾಚಾರ ಮತ್ತು ಸಂಘರ್ಷಗಳು ಭುಗಿಲೆದ್ದಿರುವ ಬಗ್ಗೆ ಸಿಪಿಐ(ಎಂ) ಪೊಲಿಟ್‌ಬ್ಯುರೊ ಗಂಭೀರ ಆತಂಕ ವ್ಯಕ್ತಪಡಿಸಿದೆ.

ಬಾಂಗ್ಲಾದೇಶ ಸರಕಾರ ಹಿಂಸಾಚಾರವನ್ನು ಅಡಗಿಸಲು ಪಡೆಗಳನ್ನು ನಿಯೋಜಿಸಿದೆ ಮತ್ತು ಈ ಕೋಮು ಹಿಂಸಾಚಾರದ ಕಿಡಿ ಹಚ್ಚಲು ಹೊಣೆಗಾರರಾದವರನ್ನು ಶಿಕ್ಷಿಸಿ ನ್ಯಾಯ ಒದಗಿಸಲಾಗುವುದು ಎಂಬ ಆಶ್ವಾಸನೆ ನೀಡಿದೆ. ಪೋಲೀಸ್ ಗೋಲಿಬಾರಿನಲ್ಲಿ ಕನಿಷ್ಟ ನಾಲ್ಕು ಮಂದಿ ಪ್ರಾಣ ಕಳಕೊಂಡಿದ್ದಾರೆ ಮತ್ತು ದೇಶಾದ್ಯಂತ ನಡೆಸಿದ ಕಾರ್ಯಾಚರಣೆಯಲ್ಲಿ ಹಲವರನ್ನು ಬಂಧಿಸಲಾಗಿದೆ.

ಬಂಗಾಲಿಗಳು ಶತಮಾನಗಳಿಂದ ಪೂಜಾ ಉತ್ಸವಗಳನ್ನು ಧಾರ್ಮಿಕ ನಂಬಿಕೆಗಳ ಬೇಧಭಾವಗಳಿಲ್ಲದೆ ಸಾಮರಸ್ಯದಿಂದ ಆಚರಿಸಿಕೊಂಡು ಬಂದಿದ್ದಾರೆ. ಬಾಂಗ್ಲಾದೇಶ ಈ ಪರಂಪರೆಯನ್ನು ಆಚರಿಸಿಕೊಂಡೇ ಬಂದಿದೆ. ಈ ಪರಂಪರೆಯನ್ನು ಅದು ಕಾಯ್ದುಕೊಳ್ಳುತ್ತದೆ ಮತ್ತು ಬಲಗೊಳಿಸುತ್ತದೆ ಎಂದು ಪೊಲಿಟ್‌ಬ್ಯುರೊ ಆಶಿಸಿದೆ.

ಧಾರ್ಮಿಕ ಮೂಲಭೂತವಾದದ ಚಟುವಟಿಕೆಗಳು ಏರುತ್ತಿರುವುದು ನಮ್ಮ ಪ್ರದೇಶದ ಎಲ್ಲ ದೇಶಗಳ ಕಾಳಜಿ. ಬಾಂಗ್ಲಾದೇಶದ ಸರಕಾರ ಶಾಂತಿ, ಸಾಮಾನ್ಯ ಸ್ಥಿತಿ ಮತ್ತು ನೆಮ್ಮದಿಯನ್ನು ಮತ್ತೆ ನೆಲೆಗೊಳಿಸಲು ಎಲ್ಲ ಪ್ರಯತ್ನಗಳನ್ನು ಮಾಡಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಅಬಕಾರಿ ಸುಂಕಗಳ ಏರಿಕೆ ಲಸಿಕೀಕರಣಕ್ಕೆ, ಕೇಂದ್ರೀಯ ಸ್ಕೀಮುಗಳಿಗೆ ಎಂಬ ಅಸಂಬದ್ಧ ಹಾಸ್ಯಾಸ್ಪದ ಸಮರ್ಥನೆ! ಬೆಲೆ ಏರಿಕೆ ವಿರುದ್ಧ ಗ್ರಾಮಗಳಿಂದ ನಗರಗಳ ವರೆಗೆ ವ್ಯಾಪಕ ಪ್ರತಿಭಟನೆಗೆ ಸಿಪಿಐ(ಎಂ) ಕೇಂದ್ರ ಸಮಿತಿ ಕರೆ

ಪೆಟ್ರೋಲಿಯಂ ಉತ್ಪನ್ನಗಳ ಮೇಲೆ ಕೇಂದ್ರೀಯ ಅಬಕಾರಿ ಸುಂಕಗಳ ಹೆಚ್ಚಳವು ಉಚಿತ ಲಸಿಕೆಗಳು ಮತ್ತು ಮೋದಿ ಸರ್ಕಾರವು ಜಾರಿಗೊಳಸುತ್ತಿರುವ ವಿವಿಧ ಸಾಮಾಜಿಕ ವಲಯದ ಯೋಜನೆಗಳಿಗೆ ಹಣಕಾಸು ಒದಗಿಸುತ್ತಿದೆ ಎಂಬ ಕೇಂದ್ರ ಸಂಪುಟದ ಮಂತ್ರಿಗಳು ಅಸಂಬದ್ಧ ದಾವೆಗಳನ್ನು ಮುಂದಿಡುತ್ತಿದ್ದಾರೆ. ಇದು ಹಾಸ್ಯಾಸ್ಪದ. ಹಾಗಿದ್ದರೆ **ಲಸಿಕೀಕರಣ ಉಚಿತವಲ್ಲ, ಜನರು ತಾವೇ ಬೆಲೆ ತೆತ್ತು ಲಸಿಕೆ ಹಾಕಿಸಿಕೊಳ್ಳುತ್ತಿದ್ದಾರೆ ಎಂದೇ ಆಗುತ್ತದೆ. ಲಸಿಕೀಕರಣಕ್ಕೆ ರೂ. 35,000 ಕೋಟಿ ಬಜೆಟ್ ಹಂಚಿಕೆ ಏನಾಯಿತು? ವಿವಿಧ ಕೇಂದ್ರ ಪ್ರಾಯೋಜಿತ ಯೋಜನೆಗಳು ಮತ್ತು ಸಬ್ಸಿಡಿಗಳಿಗಾಗಿ ಈಗಾಗಲೇ ಕೊಟ್ಟಿರುವ ಸುಮಾರು ರೂ. 4 ಲಕ್ಷ ಕೋಟಿ ರೂ.– ಈ ಎಲ್ಲ ಹಣವೆಲ್ಲಿ ಹೋಯಿತು ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಮೋದಿ ಸರಕಾರವನ್ನು ಪ್ರಶ್ನಿಸಿದೆ. ಮೋದಿ ಸರಕಾರ ತನ್ನ ದೈನಂದಿನ ದುಂದುವೆಚ್ಚಗಳಿಗೆ ಆದಾಯ ಗಳಸಲು ಜನರನ್ನು ಲೂಟಿ ಮಾಡುತ್ತಿದೆಯಷ್ಟೇ ಎಂದು** ಆಪಾದಿಸಿರುವ ಸಿಪಿಐ(ಎಂ) ಕೇಂದ್ರ ಸಮಿತಿ ಈ ಬೆಲೆ ಏರಿಕೆಯ ವಿರುದ್ಧ ಅಖಿಲ ಭಾರತ ಪ್ರತಿಭಟನಾ ಕಾರ್ಯಾಚರಣೆಗಳಿಗೆ ಕರೆ ನೀಡಿದೆ. ಈ ಕಾರ್ಯಾಚರಣೆಗಳನ್ನು ಗ್ರಾಮ/ತಾಲೂಕು ಮಟ್ಟದಲ್ಲ ಮತ್ತು ನಗರಗಳಲ್ಲಿ ದೇಶದಾದ್ಯಂತ ನಡೆಸಬೇಕು ಎಂದು ಅದು ಹೇಳದೆ.



ಅಕ್ಟೋಬರ್ 22ರಿಂದ 24 ರವರೆಗೆ ನವದೆಹಲಿಯ ಹರ್ಕಿಷನ್ ಸಿಂಗ್ ಸುರ್ಜಿತ್ ಭವನದಲ್ಲ ಸಭೆ ಸೇರಿದ ಕೇಂದ್ರ ಸಮಿತಿ ಬೆಲೆಯೇರಿಕೆಯ ಪ್ರಶ್ನೆಯಲ್ಲದೆ, ಐತಿಹಾಸಿಕ ರೈತ ಹೋರಾಟ, ರಾಷ್ಟ್ರೀಯ ಸೊತ್ತುಗಳ ಲೂಟಿ, ನೂರು ಕೋಟಿ ಲಸಿಕೆಗಳ 'ಆಚರಣೆ', ಜಮ್ಮು ಮತ್ತು ಕಾಶ್ಮೀರದಲ್ಲಿ ಆತಂಕಕಾರಿ ಪರಿಸ್ಥಿತಿ, ತೀವ್ರ ವಿದ್ಯುತ್ ಕೊರತೆ ಮತ್ತು ಜಾತಿಗಣತಿಯ ಅಗತ್ಯ ಮುಂತಾದ ವಿಷಯಗಳನ್ನು ಚರ್ಚಿಸಿತು. ಸಭೆಯ ನಂತರ ಪ್ರಕಟಿಸಿರುವ ಸಿಪಿಐ(ಎಂ) ಕೇಂದ್ರ ಸಮಿತಿಯ ಪತ್ರಿಕಾ ಹೇಳಿಕೆ ಈ ಕೆಳಗಿನಂತಿದೆ.

ಬೆಲೆಯೇರಿಕೆ ವಿರುದ್ಧ ಅಖಿಲಭಾರತ ಪ್ರತಿಭಟನೆ

ಜನರ ಮೇಲೆ ಅಭೂತಪೂರ್ವ ಸಂಕಷ್ಟಗಳನ್ನು ಹೇರುತ್ತಿರುವ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳಲ್ಲಿ ದಿನನಿತ್ಯದ ಏರಿಕೆಗಳನ್ನು ಕೇಂದ್ರ ಸಮಿತಿ ಬಲವಾಗಿ ಖಂಡಿಸಿದೆ. ಇದರೊಂದಿಗೆ ಅಡುಗೆ ಅನಿಲದ ಬೆಲೆಯಲ್ಲಿ ಭೀಕರ ಏರಿಕೆಯಾಗಿದೆ. ಇದು ಆರ್ಥಿಕ ವ್ಯವಸ್ಥೆಯಲ್ಲಿ ಒಟ್ಟಾರೆ ಹಣದುಬ್ಬರದ ಸುರುಳಿಯನ್ನು ಪ್ರಚೋದಿಸಿದೆ. ಹೆಚ್ಚುತ್ತಿರುವ ಸಾರಿಗೆ ವೆಚ್ಚಗಳು ಆಹಾರ, ತರಕಾರಿಗಳು, ಹಾಲು ಮತ್ತು ದೈನಂದಿನ ಬಳಕೆಯ ಇತರ ವಸ್ತುಗಳು ಸೇರಿದಂತೆ ಎಲ್ಲಾ ಅಗತ್ಯ ವಸ್ತುಗಳ ಬೆಲೆಗಳಲ್ಲಿ ಏರಿಕೆಗೆ ಕಾರಣವಾಗುತ್ತವೆ.

ಕೇಂದ್ರ ಸಂಪುಟದ ಮಂತ್ರಿಗಳು ಪೆಟ್ರೋಲಿಯಂ ಉತ್ಪನ್ನಗಳ ಮೇಲೆ ಕೇಂದ್ರೀಯ ಅಬಕಾರಿ ಸುಂಕಗಳ ಹೆಚ್ಚಳವು ಉಚಿತ ಲಸಿಕೆಗಳು ಮತ್ತು ಮೋದಿ ಸರ್ಕಾರವು ಜಾರಿಗೊಳಿಸುತ್ತಿರುವ ವಿವಿಧ ಸಾಮಾಜಿಕ ವಲಯದ ಯೋಜನೆಗಳಿಗೆ ಹಣಕಾಸು ಒದಗಿಸುತ್ತಿದೆ ಎಂಬ ಅಸಂಬದ್ಧ ದಾವೆಗಳನ್ನು ಮುಂದಿಡುತ್ತಿದ್ದಾರೆ. ಇದು ಹಾಸ್ಯಾಸ್ಪದ. ಜನರು ದುಬಾರಿ ಬೆಲೆಗಳನ್ನು ಪಾವತಿಸುತ್ತಿದ್ದರೆ, ಲಸಿಕೀಕರಣ ಉಚಿತವಲ್ಲ ಎಂದೇ ಆಗುತ್ತದೆ.. ಜನರು ತಾವೇ ಬೆಲೆ ತೆತ್ತು ಲಸಿಕೆ ಹಾಕಿಸಿಕೊಳ್ಳುತ್ತಿದ್ದಾರೆ.

ಹಾಗಿದ್ದರೆ, ಲಸಿಕೀಕರಣಕ್ಕೆ ರೂ. 35,000 ಕೋಟಿ ಬಜೆಟ್ ಹಂಚಿಕೆಗೆ ಏನಾಯಿತು ? ಬಜೆಟ್ ಲೆಕ್ಕಾಚಾರದಲ್ಲಿ ಈಗಾಗಲೇ ಸುಮಾರು ರೂ. 4 ಲಕ್ಷ ಕೋಟಿಗಳನ್ನು ವಿವಿಧ ಕೇಂದ್ರ ಪ್ರಾಯೋಜಿತ ಯೋಜನೆಗಳು ಮತ್ತು ಸಬ್ಸಿಡಿಗಳಿಗಾಗಿ ಕೊಡಲಾಗಿದೆ. ಈ ಎಲ್ಲ ಹಣ ಎಲ್ಲಿ ಹೋಯಿತು?

ಮೋದಿ ಸರಕಾರ ತನ್ನ ದೈನಂದಿನ ದುಂದುವೆಚ್ಚಗಳಿಗೆ ಆದಾಯ ಗಳಿಸಲು ಜನರನ್ನು ಲೂಟಿ ಮಾಡುತ್ತಿದೆಯಷ್ಟೇ.

ಈ ಬೆಲೆ ಏರಿಕೆಯ ವಿರುದ್ಧ ಅಖಿಲ ಭಾರತ ಪ್ರತಿಭಟನಾ ಕಾರ್ಯಾಚರಣೆಗಳಿಗೆ ಕೇಂದ್ರ ಸಮಿತಿಯು ಕರೆ ನೀಡುತ್ತದೆ. ಈ ಕಾರ್ಯಾಚರಣೆಗಳನ್ನು ಗ್ರಾಮ/ತಾಲೂಕು ಮಟ್ಟದಲ್ಲಿ ಮತ್ತು ನಗರಗಳಲ್ಲಿ ದೇಶದಾದ್ಯಂತ ನಡೆಸಬೇಕು.

ಐತಿಹಾಸಿಕ ರೈತ ಹೋರಾಟ

ಕೃಷಿ ಕಾನೂನುಗಳನ್ನು ರದ್ದುಗೊಳಿಸಿ

ಮೂರು ಕೃಷಿ ಕಾನೂನುಗಳನ್ನು ಹಿಂಪಡೆಯಲು ಮತ್ತು ಎಂಎಸ್‌ಪಿಗೆ ಕಾನೂನು ಬದ್ಧತೆಯನ್ನು ಒತ್ತಾಯಿಸಿ ನಮ್ಮ ರೈತರು ನಡೆಸಿರುವ ವೀರೋಚಿತ ಹೋರಾಟಕ್ಕೆ ಕೇಂದ್ರ ಸಮಿತಿಯು ನಮನಗಳನ್ನು ಸಲ್ಲಿಸುತ್ತದೆ.

ಸ್ವತಂತ್ರ ಭಾರತ ಕಂಡ ಅತ್ಯಂತ ಸುದೀರ್ಘ ಅವಿರತ ಹೋರಾಟ ಇದು. ಹೋರಾಟವನ್ನು ಅಡ್ಡಿಪಡಿಸುವ ಎಲ್ಲಾ ಪ್ರಯತ್ನಗಳು ಮತ್ತು ಪ್ರಚೋದನೆಗಳ ಹೊರತಾಗಿಯೂ,ರೈತರು ಸಂಯುಕ್ತ ಕಿಸಾನ್ ಮೋರ್ಚಾ(ಎಸ್.ಕೆ.ಎಂ.) ನೇತೃತ್ವದಲ್ಲಿ ಈ ಹೋರಾಟವನ್ನು ಶಾಂತಿಯುತವಾಗಿ ಒಂದು ಮಾದರಿಯಾಗುವ ರೀತಿಯಲ್ಲಿ ನಡೆಸುತ್ತಿದ್ದಾರೆ.

ಲಖಿಂಪುರ್ ಖೇರಿಯ ಆಘಾತಕಾರಿ ಘಟನೆಯಂತಹ ಹಿಂಸಾಚಾರವನ್ನು ಹರಿಯ ಬಿಡುವ ಮೂಲಕ ಈ ಹೋರಾಟವನ್ನು ಛಿದ್ರಗೊಳಿಸುವ ಬಿಜೆಪಿಯ ಪ್ರಯತ್ನಗಳು ಸಹ ಯಶಸ್ವಿಯಾಗಲಿಲ್ಲ. ತದ್ವಿರುದ್ಧವಾಗಿ, ಈ ಭೀಕರ ಘಟನೆ ಜನರಲ್ಲಿ ಹೆಚ್ಚು ವ್ಯಾಪಕವಾದ ಕೋಪವನ್ನು ಬಡಿದೆಬ್ಬಿಸಿದೆ. ಕೇಂದ್ರ ಗೃಹ ರಾಜ್ಯ ಸಚಿವರ ಪುತ್ರ ಇದರಲ್ಲಿ ಪ್ರಮುಖ ಆರೋಪಿಯಾಗಿದ್ದರೂ, ಅವರನ್ನು ಪ್ರಧಾನಿ ಮೋದಿ ಕೇಂದ್ರ ಸಚಿವ ಸಂಪುಟದಿಂದ ತೆಗೆದುಹಾಕಿಲ್ಲ. ಹಾಗೆ ಮಾಡಲು ನಿರಾಕರಿಸುವುದು ಈ ಬರ್ಬರತೆಯಲ್ಲಿ ಮೋದಿ ಸರ್ಕಾರವೂ ಶಾಮೀಲಾದಂತಾಗುತ್ತದೆ. ಸುಪ್ರೀಂ ಕೋರ್ಟ್ ಸಚಿವರ ಮಗ ಮತ್ತು ಇತರ ಆರೋಪಿಗಳ ವಿರುದ್ಧ ಉತ್ತರಪ್ರದೇಶ ಸರ್ಕಾರವು ಈ ಪ್ರಕರಣವನ್ನು ಮುಂದುವರಿಸಲು ವಿಳಂಬ ಮಾಡುತ್ತಿರುವುದನ್ನು ಟೀಕಿಸಿದೆ. ನ್ಯಾಯವೂ ಶೀಘ್ರವೇ ಸಿಗುವಂತಾಗಬೇಕು.

ರೈತರ ಹೋರಾಟವು ಎಲ್ಲಾ ವಿಭಾಗಗಳಿಂದ, ವಿಶೇಷವಾಗಿ ಸಂಘಟಿತ ಕಾರ್ಮಿಕ ಚಳವಳಿ ಮತ್ತು ಕೃಷಿ ಕಾರ್ಮಿಕರಿಂದ ಪಡೆಯುತ್ತಿರುವ ಸೌಹಾರ್ದತೆ ನಮ್ಮ ರೈತರುಗಳ ನ್ಯಾಯಯುತ ಬೇಡಿಕೆಗಳಿಗೆ ವ್ಯಾಪಕ ಬೆಂಬಲವನ್ನು ಬಿಂಬಿಸುತ್ತದೆ.

ನವೆಂಬರ್ 26 ರಂದು ಈ ಹೋರಾಟದ ವಾರ್ಷಿಕೋತ್ಸವವನ್ನು ಆಚರಿಸಲು ಎಸ್.ಕೆ.ಎಂ. ಮತ್ತು ಕೇಂದ್ರ ಕಾರ್ಮಿಕ ಸಂಘಟನೆಗಳ ಎಲ್ಲಾ ಕರೆಗಳು ಮತ್ತು ಪ್ರತಿಭಟನೆಗಳಿಗೆ ತನ್ನ ಸಂಪೂರ್ಣ ಸೌಹಾರ್ದ ಮತ್ತು ಬೆಂಬಲವನ್ನು ಕೇಂದ್ರ ಸಮಿತಿಯು ನೀಡುತ್ತದೆ. ಈ ಪ್ರತಿಭಟನಾ ಕಾರ್ಯಾಚರಣೆಗಳಿಗೆ ಸಕ್ರಿಯ ಬೆಂಬಲ ನೀಡುವಂತೆ ಸಿಪಿಐ(ಎಂ) ತನ್ನ ಘಟಕಗಳಿಗೆ ಕರೆ ನೀಡುತ್ತದೆ.

ಪುಟ 15 ನೋಡಿ

ಸಂಪಾದಕೀಯ

ಬೊಮ್ಮಾಯಿ ಬಣ್ಣ ಬಯಲು

ಯಡಿಯೂರಪ್ಪರವರ ನಂತರ ಬಸವರಾಜ ಬೊಮ್ಮಾಯಿರವರು ಮುಖ್ಯ ಮಂತ್ರಿ ಸ್ಥಾನವನ್ನು ವಹಿಸಿಕೊಂಡಾಗ ರಾಜ್ಯದ ಜನ ಅನೇಕ ನಿರೀಕ್ಷೆಗಳನ್ನು ಇಟ್ಟುಕೊಂಡಿದ್ದರು. ಒಬ್ಬ ಸಮಾಜವಾದಿ (ರಾಯಿಸ್ಟ್) ತಂದೆಯ ಮಗನಾಗಿ ತಂದೆ ತೋರಿದ ದಾರಿಯಲ್ಲಿ ಸಾಗಿ ಜನರ ನಡುವಿನ ಆರ್ಥಿಕ ಅಂತರವನ್ನು ತಗ್ಗಿಸಿ ಜಾತೀಯ ಮತ್ತು ಮತೀಯ ಸಾಮರಸ್ಯಕ್ಕಾಗಿ ಶ್ರಮಿಸುತ್ತಾರೆ ಎಂಬ ವಿಶ್ವಾಸವನ್ನು ಮೂಡಿಸಿದ್ದರು. ಬಿಜೆಪಿಯಲ್ಲಿ ಇದ್ದಾರೆ ಎಂದು ಮಾತ್ರಕ್ಕೆ ಅವರು ಸಂಕುಚಿತ ಮತೀಯವಾದಿ ಆಗಲಾರರು ಎಂಬ ನಂಬಿಕೆಯನ್ನು ಹುಟ್ಟು ಹಾಕಿದ್ದರು. ಆದರೆ ಬಸವರಾಜ ಬೊಮ್ಮಾಯಿರವರು ರಾಜ್ಯದ ಜನರ ನಿರೀಕ್ಷೆಗಳನ್ನೆಲ್ಲ ಹುಸಿಗೊಳಿಸಿದ್ದಾರೆ. ಮುಖ್ಯ ಮಂತ್ರಿಯಾಗಿದ್ದು ಕೊಂಡೇ ಮತೀಯವಾದದ ವಿಷ ಸರ್ಪವನ್ನು ಬಡಿದೆಬ್ಬಿಸಿದ್ದಾರೆ. ಅದರ ಮೂಲಕ ಅವರ ಗೌರವಾನ್ವಿತ ತಂದೆ ಎಸ್.ಆರ್. ಬೊಮ್ಮಾಯಿ ರವರಿಗೆ ದ್ರೋಹ ಮಾಡಿದ್ದಾರೆ.

ಮುಖ್ಯಮಂತ್ರಿ ಬೊಮ್ಮಾಯಿರವರು ಇತ್ತೀಚೆಗೆ ಮಂಗಳೂರಿನಲ್ಲಿ ನೀಡಿದ ಹೇಳಿಕೆ ಮುಖ್ಯಮಂತ್ರಿರವರ ಮನಸ್ಸಿನಲ್ಲಿ ಇರುವುದನ್ನು ಬಯಲು ಮಾಡಿದೆ. ಅದನ್ನು ಇನ್ನು ಹೆಚ್ಚು ಕಾಲ ಮುಚ್ಚಿಟ್ಟುಕೊಳ್ಳಲು ಸಾಧ್ಯವಾಗುವುದಿಲ್ಲ ಎಂದು ಸ್ಪಷ್ಟವಾಗಿದೆ. ಅದು ಅಪಾಯಕಾರಿಯಾಗಿದೆ. ಮಂಗಳೂರು ನಮ್ಮ ಹೆಮ್ಮೆಯ ಕರಾವಳಿ ನಾಡು. ಇಲ್ಲಿ ಅನೇಕ ಮತಧರ್ಮಗಳ ಜನ ಶತಶತಮಾನಗಳಿಂದ ಪರಸ್ಪರ ಅನ್ಯೋನ್ಯವಾಗಿ ಬಾಳಿದ್ದಾರೆ. ಆದರೆ ಇತ್ತೀಚಿನ ವರ್ಷಗಳಲ್ಲಿ ಇಲ್ಲಿ ಮತೀಯ ಸಾಮರಸ್ಯಕ್ಕೆ ಭಾರೀ ಧಕ್ಕೆಯಾಗತೊಡಗಿದೆ. ಕೋಮು ದ್ವೇಷಕ್ಕೆ ಇಲ್ಲಿ ಹಿಂದೆ ಇಲ್ಲದ ಕುಮ್ಮಕ್ಕು ಸಿಗತೊಡಗಿದೆ. ಸ್ವತಃ ಮುಖ್ಯಮಂತ್ರಿಯವರು ಇಂತಹ ಶಕ್ತಿಗಳನ್ನು ಬೆಂಬಲಿಸಿದರೆ ಇನ್ನುಳಿದವರಿಂದ ಇನ್ನೇನನ್ನು ನಿರೀಕ್ಷಿಸಬಹುದು.

ಅಂದು, ಹೆಚ್ಚುತ್ತಿರುವ ಅನೈತಿಕ ಪೊಲೀಸ್‌ಗಿರಿ ಘಟನೆಗಳ ಕುರಿತು ಅಲ್ಲಿನ ವಿಮಾನ ನಿಲ್ದಾಣದಲ್ಲಿ ಪತ್ರಕರ್ತರೊಂದಿಗೆ ಪ್ರತಿಕ್ರಿಯೆ ನೀಡುತ್ತಿದ್ದಾಗ ಮುಖ್ಯ ಮಂತ್ರಿಗಳು ತಮ್ಮ ಅಭಿಪ್ರಾಯ ಯಾವ ಅಳಕು ಇಲ್ಲದೆ ಹೇಳಿದರು. "ಸಮಾಜದಲ್ಲಿ ಜನರ ಭಾವನೆಗಳಿಗೆ ಧಕ್ಕೆ ಬರದಂತೆ ನೋಡಿಕೊಳ್ಳಬೇಕಾಗುತ್ತದೆ. ಪರಸ್ಪರ ಭಾವನೆಗಳಿಗೆ ಧಕ್ಕೆ ಉಂಟಾದಾಗ ಸಹಜವಾಗಿ ಕ್ರಿಯೆ ಪ್ರಕ್ರಿಯೆಗಳು ಇದ್ದೇ ಇರುತ್ತವೆ." ಮುಖ್ಯ ಮಂತ್ರಿಗಳ ಈ ಮಾತುಗಳನ್ನು ಅರ್ಥಮಾಡಿಕೊಳ್ಳಲು ವಿವರಣೆ ಬೇಕಾಗಿಲ್ಲ.

ಮತೀಯ ಗೂಂಡಾಗಿರಿ ಆಗಾಗ ಸಂಭವಿಸುತ್ತಿರುತ್ತದೆ. ಎರಡು ವಿಭಿನ್ನ ಮತೀಯರ ನಡೆವೆ ಅದು ಹೆಡೆ ಎತ್ತುತ್ತಿರುತ್ತದೆ. ಇತ್ತೀಚಿನ ವರ್ಷಗಳಲ್ಲಿ ಅದು ಹೆಚ್ಚುತ್ತಿದೆ. ಮುಖ್ಯವಾಗಿ ದೇಶದಲ್ಲಿ ಮತ್ತು ರಾಜ್ಯದಲ್ಲಿ ಬಿಜೆಪಿ ಸರ್ಕಾರ ಬಂದಾಗಿನಿಂದ ಕೋಮು ಗಲಭೆಗಳು ಹೆಚ್ಚುತ್ತಿವೆ. ಇದು ಸಹಜವಾಗಿದೆ ಎಂದು ಬೊಮ್ಮಾಯಿ ಅಭಿಪ್ರಾಯ. ಇಂತಹ ಅಭಿಪ್ರಾಯ ವ್ಯಕ್ತಪಡಿಸುವ ಮೂಲಕ ಮುಖ್ಯಮಂತ್ರಿ ಬೊಮ್ಮಾಯಿರವರು ಮತೀಯ ಗೂಂಡಾಗಿರಿಯನ್ನು ಬೆಂಬಲಿಸಿದ್ದಾರೆ. ಅನೈತಿಕ ಪೊಲೀಸ್‌ಗಿರಿ ಸಹಜವಾದದ್ದು ಎನ್ನುವ ಅವರ ಹೇಳಿಕೆಯ ಮೂಲಕ ಮತೀಯ ಗಲಭೆಕೋರರಿಗೆ ನೇರವಾದ ಬೆಂಬಲ ಕೊಟ್ಟಂತೆ ಆಗಿದೆ.


ಆರ್‌ಎಸ್‌ಎಸ್ ಅನ್ನು ಮೆಚ್ಚಿಸಲು ಮುಖ್ಯ ಮಂತ್ರಿ ಈ ಹೇಳಿಕೆ ನೀಡಿರಬಹುದು. ಆದರೆ ರಾಜ್ಯದ ಮುಖ್ಯ ಮಂತ್ರಿಯಾಗಿ ರಾಜ್ಯದಲ್ಲಿ ಕೋಮು ಸಾಮರಸ್ಯವನ್ನು ಕಾಪಾಡಲು ತಮ್ಮ ಸರ್ಕಾರ ಬದ್ಧವಾಗಿದೆ ಎಂದು ಸ್ಪಷ್ಟಪಡಿಸುವ ಬದಲು ಕೋಮು ದ್ವೇಷವನ್ನು ಬಲಪಡಿಸಲು ಹೊರಟಿದ್ದಾರೆ. ಬೊಮ್ಮಾಯಿರವರ ಈ ಹೇಳಿಕೆ ನೈತಿಕತೆಯ ಹೆಸರಿನಲ್ಲಿ ಹಿಂಸೆಗೆ ಪ್ರಚೋದನೆ ನೀಡುವ ಹೇಳಿಕೆಯಾಗಿದೆ. ಇದು ಮುಖ್ಯ ಮಂತ್ರಿ ಎಸಗಿರುವ ಅಕ್ಷಮ್ಯ ಅಪರಾಧ. ಇಂತಹ ಮನಸ್ಸನ್ನು ಹೊಂದಿದವರು ಯಾರೂ ಸರ್ವ ಧರ್ಮಗಳ ಶಾಂತಿಯ ತೋಟವಾಗಿರುವ ಕರ್ನಾಟಕ ರಾಜ್ಯದಲ್ಲಿ ಮುಖ್ಯ ಮಂತ್ರಿಯಾಗಿರಲು ಸಾಧ್ಯವಿಲ್ಲ. ಬೊಮ್ಮಾಯಿ ತಮ್ಮ ತಪ್ಪನ್ನು ಒಪ್ಪಿಕೊಂಡು ತಮ್ಮ ಮುಖ್ಯ ಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿ ಕೆಳಗಿಳಿಯಬೇಕು.

ಬೊಮ್ಮಾಯಿಯವರು ಬಸವಣ್ಣನವರ ನಾಡನ್ನು ದ್ವೇಷದ ನೆಲವಾಗಿ ಪರಿವರ್ತಿಸಲು ಹೊರಟಂತೆ ಕಾಣುತ್ತದೆ. ಮಂಗಳೂರು ಪ್ರದೇಶದಲ್ಲಿ ಹಿಂದುತ್ವವಾದಿ ಶಕ್ತಿಗಳ ಗುಂಡಾಗಿರಿ ಹೆಚ್ಚಾಗುತ್ತಿರುವ ಈ ಸಮಯದಲ್ಲಿ ಅವರು ಅನೈತಿಕ ಪೊಲೀಸ್ ಗಿರಿಯನ್ನು ಖಂಡಿಸುವಲ್ಲಿ ಮುಖ್ಯ ಮಂತ್ರಿ ವಿಫಲರಾಗಿದ್ದಾರೆ. ಸಂವಿಧಾನ ಪ್ರತಿಪಾದಿಸುವ ನೈತಿಕತೆಯನ್ನು ಎತ್ತಿ ಹಿಡಿಯುವ ತಮ್ಮ ಹೊಣೆಗಾರಿಕೆಯನ್ನು ಮರೆತ್ತಿದ್ದಾರೆ. ಸಂವಿಧಾನದ ಹೆಸರಿನಲ್ಲಿ ಪ್ರಮಾಣ ಮಾಡಿ ಮುಖ್ಯ ಮಂತ್ರಿಯಾಗಿರುವ ಬೊಮ್ಮಾಯಿರವರ ಅಕ್ಷಮ್ಯ ಅಪರಾಧ ಮಾಡಿದ್ದಾರೆ. ಬೊಮ್ಮಾಯಿರವರ ಈ ಬೇಜವಾಬ್ದಾರಿಯುತ ಹೇಳಿಕೆಯಿಂದಾಗಿ ಕರಾವಳಿಯಲ್ಲಿ ಮಾತ್ರವಲ್ಲ, ಇಡೀ ರಾಜ್ಯದಲ್ಲಿ ಕೋಮುವಾದಿ ಅರಾಜಕತೆ ಹೆಚ್ಚಾಗುವ ಅಪಾಯವಿದೆ.

ಒಂದು ನಿರ್ದಿಷ್ಟ ಕೋಮಿನವರನ್ನು ಗುರಿಯಾಗಿಸಿ ಮುಖ್ಯ ಮಂತ್ರಿಗಳು ಈ ಪ್ರಚೋದನಾಕಾರಿ ಹೇಳಿಕೆ ನೀಡಿದ್ದಾರೆ ಅನ್ನುವುದರಲ್ಲಿ ಸಂದೇಹವಿಲ್ಲ. ಸಮಾಜದಲ್ಲಿ ಹಲವು ರೀತಿಯ ಭಾವನೆಗಳಿರುತ್ತದೆ. ಯಾವ ಸಮುದಾಯದವರು ಇನ್ನೊಂದು ಸಮುದಾಯದ ಭಾವನೆಗಳಿಗೆ ನೋವುಂಟು ಮಾಡಬಾರದು. ಆದರೆ ಭಾವನೆಗಳಿಗೆ ಧಕ್ಕೆಯಾಗಿದೆ ಎಂಬ ಆರೋಪ ಹೊರಿಸಿ ಯಾರೂ ಕಾನೂನನ್ನು ಕೈಗೆತ್ತಿಕೊಳ್ಳಬಾರದು. ಮುಖ್ಯ ಮಂತ್ರಿಗಳು ಇದಕ್ಕೆ ವ್ಯತಿರಿಕ್ತವಾಗಿ ಹೇಳಿಕೆ ನೀಡಿ ಅನೈತಿಕ ಪೊಲೀಸ್‌ಗಿರಿಗೆ ಅವಕಾಶ ನೀಡಬಾರದು. ಬೊಮ್ಮಾಯಿ ರವರ ಹೇಳಿಕೆಯಿಂದ ಸ್ವಯಂ ಘೋಷಿತ ಸಮಾಜಘಾತಕರಿಗೆ ಬಲಬಂದಂತಾಗಿದೆ. ಸಮಾಜದಲ್ಲಿ ನೈತಿಕತೆಯನ್ನು ಕಾಪಾಡುವುದು ಸರ್ಕಾರದ ಜವಾಬ್ದಾರಿ. ಅದರಂತೆಯೇ ಅನೈತಿಕ ಪೊಲೀಸ್‌ಗಿರಿಯನ್ನು ತಡೆಗಟ್ಟುವುದೂ ಸಹ ಸರ್ಕಾರದ ಜವಾಬ್ದಾರಿ.

ನೈತಿಕತೆಯನ್ನು ಕಾಪಾಡುವ ಹೆಸರಿನಲ್ಲಿ ಮತೀಯ ಗುಂಡಾಗಿರಿಯನ್ನು ಬೆಂಬಲಿಸಲಾಗದು. ಯಾರೂ ಸ್ವಯಂ ಘೋಷಿತ ಪೊಲೀಸರಾಗಲು ಬರುವುದಿಲ್ಲ. ಬೊಮ್ಮಾಯಿರವರು ತಮ್ಮ ಹೇಳಿಕೆಯ ಮೂಲಕ ಸಮಾಜಕ್ಕೆ ಅಪಾಯಕಾರಿ ಸಂದೇಶವನ್ನು ನೀಡಿದ್ದಾರೆ. ಯಾರೋ ಕೆಲವು ಪುಂಡರು ನೈತಿಕತೆ ಎಂದು ಪ್ರತಿಪಾದಿಸುವ ವಿಚಾರಗಳು ಸಮಾಜದಲ್ಲಿ ಶಾಂತಿಯನ್ನು ಕದಡುವ ಪ್ರಯತ್ನ ಆಗಬಹುದು. ಎಲ್ಲಾ ವಿಧದ ಅನೈತಿಕತೆಯನ್ನು ತಡೆಗಟ್ಟಲು ನಮಗೆ ಕಾನೂನುಗಳಿವೆ, ನ್ಯಾಯಾಲಯವಿದೆ. ಶಿಕ್ಷಿಸಲು ಜೈಲುಗಳಿವೆ. ಈ ಕಾನೂನಾತ್ಮಕ ಜವಾಬ್ದಾರಿಯನ್ನು ಯಾರು ವಹಿಸಿಕೊಳ್ಳುವಂತಿಲ್ಲ.

ಪ್ರತಿಯೊಂದು ಕ್ರಿಯೆಗೆ ಪ್ರತಿಕ್ರಿಯೆ ಇರುತ್ತದೆ ಎಂಬುದು ಯಾರಿಗೆ ತಿಳಿದಿಲ್ಲ? ಆದರೆ ಬೊಮ್ಮಾಯಿ ಹೇಳಬಯಸುವುದೇನು? ಅಲ್ಪಸಂಖ್ಯಾತರ ಮೇಲೆ ಬಹುಸಂಖ್ಯಾತರಿಂದ ದಾಳಿ ನಡೆಯುತ್ತಿರುತ್ತದೆ.



ಇದು ಬಹುಸಂಖ್ಯಾತರ ಸಹಜವಾದ ಪ್ರತಿಕ್ರಿಯೆ ಎಂಬುದು ಬೊಮ್ಮಾಯಿ ಹೇಳಿಕೆಯ ತಾತ್ಪರ್ಯ. ಹೀಗೆ ಹೇಳುವ ಮೂಲಕ ಧಾರ್ಮಿಕ ಅಲ್ಪಸಂಖ್ಯಾತರ ಮೇಲೆ ಬಹುಸಂಖ್ಯಾತರ ದಾಳಿ ದೌರ್ಜನ್ಯವನ್ನು ಮುಖ್ಯ ಮಂತ್ರಿಗಳು ಸಮರ್ಥಿಸಿದ್ದಾರೆ. ಮುಂಬರುವ ಚುನಾವಣೆಯಲ್ಲಿ ಈ ಪ್ರವೃತ್ತಿಗೆ ತಕ್ಕ ಉತ್ತರ ನೀಡುವುದು ಸಾಧ್ಯವಾಗಬೇಕು.

ಹಿಂದು ಮತಾಂಧ ಶಕ್ತಿಗಳಿಗೆ ಕುಮ್ಮಕ್ಕು ನೀಡುವ ಮುಖ್ಯಮಂತ್ರಿಗಳ ವಜಾಕ್ಕೆ ಕ್ರಮವಹಿಸುವಂತೆ ರಾಜ್ಯಪಾಲರಿಗೆ ಸಿಪಿಐ(ಎಂ) ಒತ್ತಾಯ

ಹಿಂದೂ ಮತಾಂಧ ಶಕ್ತಿಗಳು ಅಂತರ್ಜಾತೀಯ ವಿವಾಹಿತರ ಹಾಗೂ ಅಂತರ್ಧರ್ಮೀಯ ಯುವಕ ಯುವತಿಯರು ಒಂದೆಡೆ ಸೇರುತ್ತಿರುವುದನ್ನು ವಿರೋಧಿಸಿ ಧಾಳಿ ನಡೆಸುತ್ತಿರುವುದು ಮತ್ತು ಕಗ್ಗೊಲೆಗೆ ಮುಂದಾಗುತ್ತಿರುವುದನ್ನು ರಾಜ್ಯದ ಮುಖ್ಯಮಂತ್ರಿ ಬಲವಾಗಿ ಖಂಡಿಸಿ, ಕಾನೂನಾತ್ಮಕ ಕ್ರಮವಹಿಸಿ ಅಂತಹ ಶಕ್ತಿಗಳನ್ನು ನಿಗ್ರಹಿಸುವ ಬದಲು, ಅಂತಹ ಶಕ್ತಿಗಳ ಕೆಲಸವನ್ನು ಕ್ರಿಯೆಗೆ–ಪ್ರತಿಕ್ರಿಯೆ ಮತ್ತು ಭಾವನಾತ್ಮಕ ವಿಚಾರವಾಗಿದೆಯೆಂದು ಬಹಿರಂಗವಾಗಿ ಸಮರ್ಥಿಸುತ್ತಿರುವುದು ತೀವ್ರ ಖಂಡನೀಯವಾಗಿದೆ. ಅವರ ಈ ಬಹಿರಂಗ ಹೇಳಿಕೆಗಳು ಭಾರತದ ಸಂವಿಧಾನದ ವಿರೋಧಿ ಹೇಳಿಕೆಗಳಾಗಿವೆ. ಈ ಕೂಡಲೆ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಲು ಅಗತ್ಯ ಕ್ರಮಕ್ಕೈಗೊಳ್ಳಬೇಕೆಂದು ಮಾನ್ಯ ರಾಜ್ಯಪಾಲರನ್ನು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)– ಸಿಪಿಐ(ಎಂ) ಬಲವಾಗಿ ಒತ್ತಾಯಿಸುತ್ತದೆ. ಇದೇ ಮುಖ್ಯಮಂತ್ರಿಗಳು ರೈತ ವಿರೋಧಿಯಾದ ಕೃಷಿ ಕಾಯ್ದೆಗಳ ವಿರುದ್ಧ ಹೋರಾಟ ನಡೆಸುತ್ತಿರುವ ರೈತರನ್ನು ನಕಲಿ ರೈತರೆಂದು ಜರೆಯುವ ಉದ್ಧಟತನವನ್ನು ಮೆರೆದಿದ್ದರು.

ಸಂವಿಧಾನ ಜನತೆಗೆ ನೀಡಿದ ಪ್ರಜಾಸತ್ತಾತ್ಮಕ ಹಕ್ಕುಗಳಾದ, ಯುವಜನರು ಪರಸ್ಪರ ಒಪ್ಪಿ ಪ್ರೀತಿಸುವ ಮತ್ತು ವಿವಾಹವಾಗುವ ಹಕ್ಕು, ಮತಾಂತರದ ಹಕ್ಕು, ಆಹಾರದ ಹಕ್ಕು, ಬದುಕುವ ಹಕ್ಕುಗಳು ಮತ್ತು ದೇಶದ ಜಾತ್ಯಾತೀತ ಸ್ವರೂಪ ಹಾಗೂ ಸಾಮಾಜಿಕ ನ್ಯಾಯದ ಮೇಲೆ ಕೋಮುವಾದಿಗಳ ಮತ್ತು ಜಾತಿವಾದಿಗಳ ಧಾಳಿಗಳನ್ನು ಸಮರ್ಥಿಸುವ ಇಂತಹ ಸಂಚಿನ ಹೇಳಿಕೆಗಳು ಕೋಮುವಾದಿ ಹಾಗೂ ಜಾತಿವಾದಿ ಪುಂಡರ ಪುಂಡಾಟಿಕೆಗಳಿಗೆ ಉತ್ತೇಜನ ನೀಡಿದಂತಾಗಿದೆಯೆಂದು ಎಚ್ಚರಿಸಿದೆ.

ಹೈನುಗಾರರು, ಸಾರ್ವಜನಿಕ ಹೈನೋದ್ಯಮದ, ಅಲ್ಪಸಂಖ್ಯಾತರು ಹಾಗೂ ದಲಿತರ ಆಹಾರದ ಮತ್ತು ಬದುಕುವ ಹಕ್ಕಿನ ವಿರುದ್ಧ, ಈಗಾಗಲೇ ಸಂವಿಧಾನ ಬಾಹಿರವಾಗಿ, ಜಾನುವಾರು ಹತ್ಯಾ ನಿಷೇಧ ಕಾಯ್ದೆ–2020ನ್ನು ಅಂಗೀಕರಿಸಲಾಗಿದೆ. ಮತಾಂತರ ನಿಷೇದ ಕಾಯ್ದೆಗೆ ಕ್ರಮವಹಿಸಲಾಗಿದೆ. ರಾಜ್ಯದ ರೈತಾಪಿ ಜನತೆ ಹಾಗೂ ಎಲ್ಲಾ ಬಾಧಿತರು ಪ್ರಗತಿಪರ ಶಕ್ತಿಗಳು ಇವುಗಳವಿರುದ್ದ ಹೋರಾಟದಲ್ಲಿ ತೊಡಗಿದ್ದಾರೆ.

ಇಂತಹ ಸಂದರ್ಭದಲ್ಲಿ ಮುಖ್ಯಮಂತ್ರಿಗಳ ಇಂತಹ ಸಂವಿದಾನ ವಿರೋಧಿ ಮತ್ತು ಕೋಮು ಹಾಗೂ ಜಾತಿ ದ್ವೇಷದ ಪರವಾದ ಹೇಳಿಕೆಯಿಂದ ಉತ್ತೇಜಿತರಾದ ಹಿಂದೂ ಮತಾಂಧರು ಯುವಜನರಿಗೆ ಸ್ವರಕ್ಷಣೆಯ ಹೆಸರಿನಲ್ಲಿ ತಲವಾರುಗಳನ್ನು ಹಂಚಲು ಮುಂದಾದ ದುಷ್ಕೃತ್ಯವು ನಡೆದಿದೆ.

ವಿಜಯದಶಮಿ ದಿನದಂದು ಕಾನೂನು ಹಾಗು ಸುವ್ಯವಸ್ಥೆಯನ್ನು ಕಾಪಾಡಬೇಕಾದ ಪೊಲೀಸ್ ಠಾಣೆಗಳು, ಪೊಲೀಸರು ಕೇಸರಿ ಶಾಲುಗಳನ್ನು ಸಾಮೂಹಿಕವಾಗಿ ಹೊದ್ದು ಜಿಲ್ಲೆಯ ಉನ್ನತ ಪೊಲೀಸ್ ಅಧಿಕಾರಿಗಳ ಪುಟ 4 ನೋಡಿ

ಪವರ್ ಸ್ಟಾರ್ ಪುನೀತ್ ರಾಜಕುಮಾರರ ಅಗಲಿಕೆಗೆ–ಸಿಪಿಐಎಂ ಕಂಬನಿ



ಕನ್ನಡ ಚಿತ್ರ ರಂಗದ ಮೇರು ನಟ, ಪವರ್ ಸ್ಟಾರ್ ಪುನಿತ್ ರಾಜಕುಮಾರ್ ಅ ಕ ಾ ಲಿ ಕ ' ನಿಧನಕ್ಕೆ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸವಾದಿ) ದ ಕರ್ನಾಟಕ ರಾಜ್ಯ ಸಮಿತಿ ಭಾವ ಪೂರ್ಣ ಶ್ರದ್ಧಾಂಜಲಿಯನ್ನು ಸಲ್ಲಿಸಿದೆ. ಪ್ರತಿಭಾವಂತ ಯುವ ನಟನ ಅಗಲಿಕೆಯಿಂದ ಕನ್ನಡ ಚಿತ್ರ ರಂಗ ಬಡವಾದಂತಾಗಿದೆ. ಬಾಲ್ಯದಲ್ಲಿಯೇ ಬಾಲ ಕಲಾವಿಧನಾಗಿ ಚಿತ್ರರಂಗವನ್ನು ಪ್ರವೇಶಿಸಿದ ಅಪ್ಪು, ಬಾಲ ಕಲಾವಿಧನಾಗಿ 14 ಯಶಸ್ವಿ ಚಲನ ಚಿತ್ರಗಳನ್ನು ಮತ್ತು 2002 ರಿಂದ ಈ ದಿನದ ವರೆಗೆ ನಾಯಕನಟನಾಗಿ ಸದಭಿರುಚಿಯ 28 ಚಲನಚಿತ್ರಗಳನ್ನು ನೀಡಿದ್ದಾರೆ. ಹಲವಾರು ಚಲನ ಚಿತ್ರಗಳಲ್ಲಿ ಚಿತ್ರಗೀತೆಗಳನ್ನು ಹಾಡಿದ್ದಾರೆ. ಬಾಲ ಕಲಾವಿಧನಾಗಿಯೂ,ನಾಯಕ ನಟನಾಗಿಯೂ ಅನೇಕ ರಾಜ್ಯ ಮತ್ತು ರಾಷ್ಟ್ರ ಮಟ್ಟದ ಪ್ರಶಸ್ತಿಗಳನ್ನು ಪಡೆದಿದ್ದಾರೆ. ಸಾವಿನಲ್ಲೂ ನೇತ್ರದಾನ ಮಾಡುವ ಮೂಲಕ ಅಪ್ಪು ಸಾರ್ಥಕತೆ ಮೆರೆದಿದ್ದಾರೆ. ಪತ್ನಿ, ಇಬ್ಬರು ಮಕ್ಕಳು, ರಾಜ್ ಕುಟುಂಬ ಮತ್ತು ರಾಜ್ಯದ ಅಪಾರ ಅಭಿಮಾನಿ ಬಳಗವನ್ನು, ಸಹೋದ್ಯೋಗಿಗಳನ್ನು ಅಗಲಿದ್ದಾರೆ. ದುಃಖತಪ್ತ ಈ ಎಲ್ಲರಿಗೆ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸವಾದಿ) ತನ್ನ ಸಂತಾಪವನ್ನು ವ್ಯಕ್ತಪಡಿಸಿದೆ.

ಅಸಂಘಟಿತ ಕಾರ್ಮಿಕರ ಬದುಕಿಗೆ ಸುರಕ್ಷತೆಯಿಲ್ಲ: ಕರ್ತವ್ಯದಿಂದ ನುಣಿಚಿಕೊಂಡ ಸರ್ಕಾರ



ದುಡಿಮೆಗೋಸ್ಕರ ಸಾವಿರಾರು ಕಿ.ಮಿ ಗುಳೆ ಹೊಗುವ ಕಾರ್ಮಿಕರಿಗೆ ಭದ್ರತೆ ಹಾಗೂ ಸುರಕ್ಷತೆಯ ಕೊರತೆ ಎದ್ದು ಕಾಣುತ್ತಿದೆ. ಅವೈಜ್ಞಾನಿಕ ಲಾಕ್ಡನ್ ನಿಂದಾಗಿ ಕಾರ್ಮಿಕರ ಬದುಕು ಅತಂತ್ರ ಪರಿಸ್ಥಿತಿಯಲ್ಲಿ ಬೀಳುವಂತಾಯಿತು ಎಂದು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಷನ್ (ಸಿಐಟಿಯು) ರಾಜ್ಯ ಪ್ರಧಾನ ಕಾರ್ಯದರ್ಶಿ ಕೆ.ಮಹಾಂತೇಶ ಗಜೇಂದ್ರಗಡ ಸೇವಲಾಲ ಕಲ್ಯಾಣ ಮಂಟಪದಲ್ಲಿ ನಡೆದ ಕಾರ್ಮಿಕರ 2 ನೇ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು. ಲಾಕ್ಡೌನ್‌ನಲ್ಲಿ ಅದೆಷ್ಟೋ ಕಾರ್ಮಿಕರು ಬೀದಿಯಲ್ಲಿ ಸತ್ತಿದ್ದಾರೆ. ಹೊಟ್ಟೆ ಬಟ್ಟೆಗಾಗಿ, ಗುಳೆ ಹೋಗುವ ನಾವು ನಮ್ಮ ಬದುಕನ್ನು ರಕ್ಷಣೆ ಮಾಡಿಕೊಳ್ಳಲು, ಮಕ್ಕಳಿಗೆ ವಿದ್ಯಾಭ್ಯಾಸ ಕೊಡಿಸಲು ಸಾಧ್ಯವಾಗುತ್ತಿಲ್ಲ. ಜನರ ಸಮಸ್ಯೆಗೆ ಸ್ಪಂದಿಸದೇ ಧೀಡರನೇ ಲಾಕ್ಡನ್ ಘೋಷಣೆ ಮಾಡಿ ಸರ್ಕಾರ ತನ್ನ ಕರ್ತವ್ಯದಿಂದ ನುಣಿಚಿಕೊಂಡಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಕಟ್ಟಡ ನಿರ್ಮಾಣ ಕಾರ್ಮಿಕರೆಲ್ಲರೂ ಕಲ್ಯಾಣ ಮಂಡಳಿಯಯಲ್ಲಿ ನೋಂದಣಿ ಮಾಡಿಸಿಕೊಂಡು ಸೌಲಭ್ಯ ಪಡೆಯಬೇಕು ಎಂದರು.

ಸರ್ಕಾರ ವಲಸೆ ಹೋಗುವುದನ್ನು ತಡೆಗಟ್ಟಿ ಸ್ಥಳೀಯ ಮಟ್ಟದಲ್ಲಿಯೆ ಉದ್ಯೋಗಾವಕಾಶಗಳನ್ನು ಹೆಚ್ಚಿಸಿ ಕಾರ್ಮಿಕರ ಹಿತ ಕಾಯಬೇಕಿದೆ ಎಂದರು. ಪ್ರಾಸ್ತಾವಿಕವಾಗಿ ಕಟ್ಟಡ ನಿರ್ಮಾಣ ಕಾರ್ಮಿಕರ ಸಂಘದ ಜಿಲ್ಲಾ ಸಂಚಾಲಕ ಪೀರು ರಾಠೋಡ ಮಾತನಾಡಿ ಕಲ್ಯಾಣ ಮಂಡಳಿಯಲ್ಲಿ 19ಕ್ಕೂ ಹೆಚ್ಚು ಸೌಲಭ್ಯಗಳಿದ್ದು ಕಾರ್ಮಿಕರಿಗೆ ಕೇವಲ ಬೆರಳಿಕೆಯಷ್ಟು ಸೌಲಭ್ಯ ಸಿಗುತ್ತಿವೆ. ಲಾಕ್ಡನ್ ಸಮಯದಲ್ಲಿ ಕಾರ್ಮಿಕರು ಸಾಕಷ್ಟು ಸಮಸ್ಯೆಯಿಂದ ಬಳಲುತ್ತಿದ್ದ, ಕೋವಿಡ್ ಪರಿಹಾರ ತಲುಪಿಸುವಲ್ಲಿ ಮಂಡಳಿ ವಿಫಲವಾಗಿದೆ ಎಂದರು. ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಾರುತಿ ಚಿಟಗಿ, ಕೃಷಿ ಕೂಲಿಕಾರ ಸಂಘದ ಅಧ್ಯಕ್ಷ ಬಾಲು ರಾಠೋಡ ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡಿದರು.



ಸಮ್ಮೇಳನದ ಅಂಗವಾಗಿ ಕಾರ್ಮಿಕರು ತಹಶಿಲ್ದಾರರ ಕಚೇರಿಯಿಂದ ಮೆರವಣಿಗೆ ಮೂಲಕ ಸೇವಾಲಾಲ ಕಲ್ಯಾಣ ಮಂಟಪ ದವರೆಗೆ ಕಾರ್ಮಿಕರ ಮೆರವಣಿಗೆ ಜಾಥ ನಡೆಯಿತು.

ರಾಜ್ಯಪಾಲರಿಗೆ ಸಿಪಿಐ(ಎಂ) ಒತ್ತಾಯ....... ಪುಟ 3 ರಿಂದ

ಸಮ್ಮುಖದಲ್ಲಿ ಫೋಟೋ ತೆಗೆಸಿಕೊಂಡು ಮಾಧ್ಯಮಗಳಲ್ಲಿ, ಸಾಮಾಜಿಕ ಜಾಲತಾಣದಲ್ಲಿ ಹರಿಬಿಡುವ ಮೂಲಕ ಹಿಂದೂ ಮತಾಂಧತೆ ಪೋಲೀಸ್ ಇಲಾಖೆಯಲ್ಲಿ ನುಸುಳಿರುವುದನ್ನು ತೋರಿಸುತ್ತದೆ ಆ ಮೂಲಕ ಕಾನೂನು ಸುವ್ಯವಸ್ಥೆ ಕಾಪಾಡಬೇಕಾದ ಇಲಾಖೆ ಅದರ ವಿರುದ್ಧ ಮುಖ ಮಾಡಿರುವುದನ್ನು ತೋರುತ್ತಿದೆ. ಇದೊಂದು ಗಂಭೀರ ಅಪಾಯಕಾರಿ ಬೆಳವಣಿಗೆಯಾಗಿದೆ.

ಇಂತಹ ವಿಚಾರದಲ್ಲಿ ಗೃಹ ಇಲಾಖೆಯ ಉನ್ನತ ಅಧಿಕಾರಿಗಳು ಮೌನವಾಗಿರುವುದು ತೀವ್ರ ಖಂಡನೀಯವಾಗಿದೆ. ಇದನ್ನು ಯಾರು? ಹೇಗೆ ಬೇಕಾದರೂ ಸಮರ್ಥಿಸಿಕೊಳ್ಳಬಹುದು ಆದರೇ ವಾಸ್ತವ ಮಾತ್ರ ಅದುವೇ ಆಗಿದೆ.

ಈ ಎಲ್ಲ ಪ್ರಕರಣಗಳನ್ನು ಉಚ್ಚ ನ್ಯಾಯಾಲಯದ ಸುಪರ್ಧಿಯಲ್ಲಿ ನ್ಯಾಯಾಂಗ ತನಿಖೆಗೊಳಪಡಿಸಿ ಸಂವಿಧಾನ ರಕ್ಷಣೆಗೆ ಮತ್ತು ಕಾನೂನು ಸುವ್ಯವಸ್ಥೆಯ ಸಂರಕ್ಷಣೆಗೆ ಅಗತ್ಯ ಕ್ರಮವಹಿಸಬೇಕೆಂದು ಸಿಪಿಐ(ಎಂ) ಒತ್ತಾಯಿಸಿದೆ.

ಸರಣಿ ಕಟ್ಟಡ ಕುಸಿತ: ಆತಂಕದಲ್ಲಿ ಸಿಲಿಕಾನ್ ಸಿಟಿ ಜನ

ಬೆಂಗಳೂರು ನಗರದಲ್ಲಿ ಸತತವಾಗಿ ಸುರಿಯುತ್ತಿರುವ ಮಳೆಯಿಂದ ಕಟ್ಟಡಗಳು ಕುಸಿಯುತ್ತಿರುವ ಪ್ರಕರಣಗಳು ಹೆಚ್ಚಾಗಿದ್ದು, ಸಿಲಿಕಾನ್ ಸಿಟಿ ಮಂದಿ ಭಯದಲ್ಲಿ ಜೀವನ ಕಳೆಯುವಂತಾಗಿದೆ.

ನಗರದ ಕಮರ್ಷಿಯಲ್ ಸ್ಟ್ರೀಟ್ ಬಳಿಯ ಮುಖ್ಯರಸ್ತೆಯಲ್ಲೇ ಹಳೇ ಕಟ್ಟಡದ ಗೋಡೆ ಕುಸಿತವಾಗಿದ್ದು, ಅಕ್ಟೋಬರ್ 15 ರಿಂದ ಹಂತ ಹಂತವಾಗಿ ಕಟ್ಟಡ ಕುಸಿತ ಸಂಭವಿದೆ. ಕುಸಿತವಾಗಿರುವ ಬಿಲ್ಡಿಂಗ್? 100 ವರ್ಷದ ಹಳೆಯದಾಗಿದ್ದು, 2 ವರ್ಷದ ಹಿಂದೆಯೇ ಬಿಬಿಎಂಪಿ ನೋಟಿಸ್? ನೀಡಿ ಖಾಲಿ ಮಾಡಿ ಕಟ್ಟಡ ತೆರವು ಮಾಡಲು ಮಾಲೀಕರಿಗೆ ಸೂಚನೆ ನೀಡಲಾಗಿತ್ತು. ಆದರೆ ಕುಟುಂಬಿಕ ವ್ಯಾಜ್ಯವಿದ್ದ ಕಾರಣ ಕಟ್ಟಡವನ್ನು ಖಾಲಿ ಮಾಡಿರಲಿಲ್ಲ. ರಸ್ತೆ ತುಂಬಾ ಚಿಕ್ಕದಾಗಿರುವ ಕಾರಣ ಯಂತ್ರಗಳಿಂದ ಕಟ್ಟಡ ತೆರವು ಕಾರ್ಯ ಮಾಡಲು ಸಾಧ್ಯವಿಲ್ಲ. ಆದ್ದರಿಂದ ಮ್ಯಾನುವಲ್? ಆಗಿ ಕಟ್ಟಡ ತೆರವು ಮಾಡುವ ಕಾರ್ಯ ಮಾಡುತ್ತೇವೆ ಎಂದು ಬಿಬಿಎಂಪಿ ಅಧಿಕಾರಿ ತಿಳಿಸಿದ್ದಾರೆ.

5 ಅಂತಸ್ತಿನ ಕಟ್ಟಡ ಕುಸಿತ:

ಅಕ್ಟೋಬರ್ 07 ರಂದು ನಗರದ ಕಸ್ತೂರಿನಗರದಲ್ಲಿ 5 ಅಂತಸ್ತಿನ ಕಟ್ಟಡ ಕುಸಿದು ಬಿದ್ದಿತ್ತು. ಈ ಘಟನೆಯಲ್ಲಿ ಸೆಕ್ಯೂರಿಟಿ ಗಾರ್ಡ್ ಸಮಯಪ್ರಜ್ಞೆ ಮೆರೆದಿದ್ದು 15 ಜನರನ್ನು ಪಾರು ಮಾಡಿದ್ದಾರೆ. ಕಟ್ಟಡ ಕುಸಿಯುವ ಸೂಚನೆ ಸಿಗುತ್ತಿದ್ದಂತೆ ಸಮಯಪ್ರಜ್ಞೆ ಮೆರೆದ ಸೆಕ್ಯೂರಿಟಿ ಗಾರ್ಡ್ 15 ಜನರನ್ನು ಸೇಫ್ ಮಾಡಿದ್ದರು.

4 ಅಂತಸ್ತಿನ ಕಟ್ಟಡ ನೆಲಸಮ:

ಭಾರೀ ಮಳೆಯಿಂದಾಗಿ ಕುಸಿಯುತ್ತಿದ್ದ 4 ಅಂತಸ್ತಿನ ಮನೆಯನ್ನು ಬಿಬಿಎಂಪಿ ಅಧಿಕಾರಿಗಳೇ ಸ್ವತಃ ಧರೆಗುರುಳಿಸಿದ ಘಟನೆ ಬೆಂಗಳೂರಿನ ಕಮಲಾನಗರದ ವೃಷಭಾವತಿ ವಾರ್ಡ್ ನಲ್ಲಿ ನಡೆದಿದೆ. ಮಹಾಲಕ್ಷ್ಮಿಪುರಂ ವಿಧಾನಸಭಾ ಕ್ಷೇತ್ರದ ವೃಷಭವತಿ ವಾರ್ಡ್ ನ ಎನ್ ಜಿ.ಓ ಬಡಾವಣೆಯಲ್ಲಿ ರಾತ್ರಿಯಿಂದಲೇ ಮನೆಯ ತಳಭಾಗ ಕುಸಿಯಲು ಆರಂಭಿಸಿತ್ತು. ಕಟ್ಟಡದಲ್ಲಿ 5–6 ಕುಟುಂಬಗಳಿದ್ದು, ಸಮೀಪದ ಶಾಲೆಯಲ್ಲಿ ಎಲ್ಲರಿಗೂ ಊಟ, ವಸತಿ ವ್ಯವಸ್ಥೆ ಮಾಡಲಾಗಿದೆ

ಕುಸಿಯುವ ಭೀತಿಯಲ್ಲಿ ಪೊಲೀಸ್ ಕಟ್ಟಡ: ಎರಡು ವರ್ಷದ ಹಿಂದೆ ನಿರ್ಮಾಣ ವಾಗಿದ್ದ ಬಿನ್ನಿಪೇಟೆ ಪೊಲೀಸ್ ವಸತಿ ಸಂಕೀರ್ಣದ ಬಹುಮಟ್ಟಡ ಕಟ್ಟಡ ಬಿರುಕು ಬಿಟ್ಟಿದ್ದು, ಪೊಲೀಸ್ ಕುಟುಂಬಗಳಲ್ಲಿ ಆತಂಕ ಮನೆ ಮಾಡಿದೆ. ಬೆಂಗಳೂರಿನಲ್ಲಿ ಸರಣಿ ಕಟ್ಟಡಗಳು ಕುಸಿದು ಬಿದ್ದ ಬೆನ್ನಲ್ಲೇ ಇದೀಗ ಬಿನ್ನಿಪೇಟೆ ವಸತಿ ಸಂಕೀರ್ಣದಲ್ಲಿರುವ ಪೊಲೀಸ್ ಕುಟುಂಬಗಳು ಜೀವ ಕೈಯಲ್ಲಿಟ್ಟುಕೊಂಡು ಪರದಾಡುತ್ತಿವೆ.

ಎರಡು ವರ್ಷದ ಹಿಂದಷ್ಟೇ ನಿರ್ಮಾಣವಾಗಿದ್ದ ಕಟ್ಟಡ ಸಂಪೂರ್ಣ ಬಿರುಕು ಬಿಟ್ಟಿದೆ. ಏಳು ಅಂತಸ್ತಿನ ಕಟ್ಟಡ ಸುಮಾರು ಒಂದು ಅಡಿಯಷ್ಟು ಬಿರುಕು ಬಿಟ್ಟು ಸಂಪೂರ್ಣ ವಾಲಿಕೊಂಡಿದೆ. ಜಪಾನ್ ಟೆಕ್ನಾಲಜಿ ಬಳಸಿ ಕಟ್ಟಡ ನಿರ್ಮಾಣ ಮಾಡಲಾಗಿದೆ ಎಂದು ಹೇಳಿದ್ದ ಇಂಜಿನಿಯರ್ ಗಳ ಬಂಡವಾಳ ಈಗ ಬಯಲಾಗಿದೆ. ಕಳಪೆ ಕಾಮಗಾರಿಯಿಂದಾಗಿ ಏಳು ಹಂತಸ್ತಿನ ಪೊಲೀಸ್ ಕಟ್ಟಡ ಕುಸಿದು ಬೀಳುವ ಮುನ್ಸೂಚನೆ ನೀಡಿದೆ. ಈ ಕುರಿತು ಬೆಂಗಳೂರು ನಗರ ಪೊಲೀಸ್ ಆಯುಕ್ತ ಕಮಲಪಂತ್ ಅವರಿಗೆ ದೂರು ನೀಡಿದ್ದು, ಪರ್ಯಾಯ ವ್ಯವಸ್ಥೆ ಮಾಡುವುದಾಗಿ ಭರವಸೆ ನೀಡಿದ್ದಾರೆ.

ಇನ್ನು ಶಿಥಿಲಾವಸ್ಥೆಯಲ್ಲಿವೆ 175 ಕಟ್ಟಡಗಳು:

ನಗರದಲ್ಲಿ 2019ರಲ್ಲಿ ಮಾಡಿದ್ದ ಸಮೀಕ್ಷೆಯಲ್ಲಿ ಗುರುತಿಸಿದ್ದ 185 ಶಿಥಿಲಾವಸ್ಥೆಯ ಕಟ್ಟಡಗಳ ಪೈಕಿ ಈಗಾಗಲೇ 10 ಕಟ್ಟಡಗಳನ್ನು ನೆಲಸಮ ಮಾಡಿದೆ.

ಕೊರೊನಾ ಕಾರಣದಿಂದಾಗಿ ನೆಲಸಮ ಪ್ರಕ್ರಿಯೆ, ಅಗತ್ಯಕ್ರಮವನ್ನು ನಿಲ್ಲಿಸಲಾಗಿದೆ. ಇನ್ನು ಸಮೀಕ್ಷೆ ಎರಡು ವರ್ಷದ ಹಿಂದೆ ನಡೆದಿದ್ದು, ಕಳೆದ ವಾರ ಪುನಃ ಹೊಸ ಸಮೀಕ್ಷೆ ನಡೆಸಿ ಮತ್ತಷ್ಟು ಶಿಥಿಲಗೊಂಡ ಕಟ್ಟಡಗಳನ್ನು ಪತ್ತೆ ಮಾಡಲಾಗುತ್ತಿದೆ. ಇದಕ್ಕಾಗಿ ವಿವಿಧ ವಲಯಗಳ ಜಂಟಿ ಆಯುಕ್ತರನ್ನು ಒಳಗೊಂಡ ಸಮಿತಿಯನ್ನು ರಚಿಸಲಾಗುತ್ತದೆ.

30 ದಿನಗಳಲ್ಲಿ ಸಮೀಕ್ಷೆ ಪೂರ್ಣಗೊಳಿಸಿ ವರದಿ ನೀಡುವಂತೆ ಜಂಟಿ ಆಯುಕ್ತರುಗಳಿಗೆ ತಿಳಿಸಲಾಗಿದೆ. ಆ ವರದಿ ಆಧರಿಸಿ ಅಗತ್ಯ ಕ್ರಮಕೈಗೊಳ್ಳಲಾಗುತ್ತದೆ ಎಂದು ಪಾಲಿಕೆ ಮುಖ್ಯ ಆಯುಕ್ತರು ತಿಳಿಸಿದ್ದರು. ಕಟ್ಟಡ ಕುಸಿತ ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆ ಸಮೀಕ್ಷೆ ಬೇಗಪೂರ್ಣಗೊಳಿಸಿ ತುರ್ತು ಕ್ರಮ ಅಗತ್ಯವಿದೆ ಎಂಬ ಅಭಿಪ್ರಾಯ ಸಾರ್ವಜನಿಕರಿಂದ ವ್ಯಕ್ತವಾಗಿದೆ.

ಸಚಿವರು ಎಲ್ಲಿದ್ದಾರೆ?:

ಸಿಲಿಕಾನ್? ಸಿಟಿಯಲ್ಲಿ ಕಳೆದೊಂದು ವಾರದಿಂದ ಸುರಿಯುತ್ತಿರುವ ವರುಣಾರ್ಭಟಕ್ಕೆ ದಿನಕ್ಕೊಂದರಂತೆ ಕಟ್ಟಡಗಳು ನೆಲಕಚ್ಚುತ್ತಿವೆ. ಕಳೆದೊಂದು ತಿಂಗಳ ಅವಧಿಯಲ್ಲಿ ಬೆಂಗಳೂರಿನಲ್ಲಿ ನಾಲ್ಕೈದು ಕಟ್ಟಡಗಳು ಕುಸಿತ ಕಂಡು ಸಾಕಷ್ಟು ಅವಾಂತರಗಳು ನಡೆಯುತ್ತಿದ್ದರೂ ಕೂಡ ಬೆಂಗಳೂರು ನಗರ ಪ್ರತಿನಿಧಿಸುವ 7 ಸಚಿವರು ಮಾತ್ರ ಕಂಡು ಕಾಣದಂತೆ ಇದ್ದಂತೆ ಕಾಣುತ್ತಿದೆ. ಅಥವಾ ಈ ಗೋಜು ನಮಗ್ಯಾಕೆ ಎಂದು ಕಾಣೆಯಾದಂತೆ ಕಾಣುತ್ತಿದೆ.

ಇನ್ನು ಬೆಂಗಳೂರಿಗೆ ಪ್ರಸ್ತುತ ಉಸ್ತುವಾರಿ ಸಚಿವರು ಸಿಎಂ ಬಸವರಾಜ ಬೊಮ್ಮಾಯಿ ಅವರೇ ಆಗಿರುವುದರಿಂದ, ಸಚಿವರುಗಳು ಬೆಂಗಳೂರು ಬಗ್ಗೆ ಉತ್ಸಾಹ ಕಳೆದುಕೊಂಡಿದ್ದಾರೆ ಎಂಬ ಆರೋಪಗಳು ಇವೆ. ಉಪಚುನಾವಣೆ, ಸಚಿವ ಸ್ಥಾನದ ಲಾಭಿಗಾಗಿ ದೆಹಲಿ ಓಡಾಟ, ಸಂಪುಟ ವಿಸ್ತರಣೆ ಎಂದು ಮಂತ್ರಿ ಸಚಿವರು ಓಡಾಡುತ್ತಿದ್ದಾರೆ. ಆದರೆ ಬೆಂಗಳೂರು ಜನ ಮಾತ್ರ ಜೀವವನ್ನು ಕೈಯಲ್ಲಿಡಿದು ಕುಳಿತಿದ್ದಾರೆ. ಸರಕಾರ ಹಾಗೂ ಬಿಬಿಎಂಪಿ ನಿರ್ಲಕ್ಷ್ಯ ಬಿಟ್ಟು ಜನರ ರಕ್ಷಣೆಗೆ ಮುಂದಾಗಬೇಕಿದೆ.





ಪೆಟ್ರೋಲ್, ಡಿಸೇಲ್ ದರ ಹೆಚ್ಚಳಕ್ಕೆ ತೆರಿಗೆ ದರ ಕಾರಣವೇ?

ಗುರುರಾಜ ದೇಸಾಯಿ

ಪೆಟ್ರೋಲ್, ಡಿಸೇಲ್ ದರ ಹೆಚ್ಚಳಕ್ಕೆ ತೆರಿಗೆ ದರ ಕಾರಣವೇ? ಎಂಬ ಪ್ರಶ್ನೆ ಈಗ ಜೋರಾಗಿ ಚರ್ಚೆಯಾಗುತ್ತಿದೆ. ಹೌದು ಎನ್ನುವಂತೆ ಹಲವಾರು ಅಂಕಿಅಂಶಗಳು ಈಗ ಸಾಕ್ಷಿಯಾಗುತ್ತಿವೆ. ಸಾಮಾಜಿಕ ಜಾಲತಾಣದಲ್ಲಂತೂ ಪೆಟ್ರೋಲ್ ದರ ಹೆಚ್ಚಿಸಿದ್ದರ ಪರಿಣಾಮ ಕೇಂದ್ರ ಸರಕಾರವನ್ನು ಹಿಗ್ಗಾ ಮುಗ್ಗಾ ತರಾಟೆಗೆ ತೆಗೆದುಕೊಳ್ಳುತ್ತಿದ್ದಾರೆ. ಫುಲ್ ಟ್ಯಾಂಕ್ ಮಾಡಿಸಬೇಕಾದರೆ 1341 ರೂ ಕೊಡಬೇಕಿದೆ. ಕಳೆದ ವರ್ಷ ಫುಲ್ ಟ್ಯಾಂಕ್ ಮಾಡಿಸಬೇಕಂದರೆ 864 ರೂ. ಕೊಟ್ಟರೆ ಸಾಕಾಗುತ್ತಿತ್ತು. ಈಗ 432 ರೂ ಹೆಚ್ಚುವರಿ ಕೊಡಬೇಕಿದೆ. ಇನ್ನೂ ಹೀಗೆ ಇದ್ದರೆ ನಮ್ಮ ರಕ್ತ ಹೀರುತ್ತಾರೆ ಅಷ್ಟೆ, ಅಚ್ಚೆ ದಿನ್ ಅಂದ್ರೆ ಇದೇ ಅಲ್ವಾ? ಎಂದು ಟ್ರೋಲ್ ಮಾಡಲಾಗುತ್ತಿದೆ.

ಕಳೆದ ಕೆಲವು ತಿಂಗಳುಗಳಿಂದ ದೇಶದಲ್ಲಿ ಪೆಟ್ರೋಲ್, ಡೀಸೆಲ್ ಬೆಲೆಗಳು ವಿಪರೀತವಾಗಿ ಏರಿಕೆಯಾಗಿವೆ. ಗಗನಕ್ಕೇರಿರುವ ಇಂಧನ ಬೆಲೆಯಿಂದ ಜನರು ಸಂಕಷ್ಟಕ್ಕೀಡಾಗಿದ್ದಾರೆ. ಇತ್ತೀಚಿನ ದರ ಏರಿಕೆಯ ನಂತರ ಬೆಂಗಳೂರಿನಲ್ಲಿ ಪ್ರತಿ ಲೀಟರ್ ಪೆಟ್ರೋಲ್ ಬೆಲೆ ರೂ. 109.53 ಗಳಾದರೆ, ಪ್ರತಿ ಲೀಟರ್ ಡೀಸೆಲ್ ಬೆಲೆ ರೂ. 100.37 ಗಳಾಗಿದೆ. ಇದೇ ವೇಳೆ ದೇಶದ ವಾಣಿಜ್ಯ ರಾಜಧಾನಿ ಮುಂಬೈನಲ್ಲಿ ಪ್ರತಿ ಲೀಟರ್ ಪೆಟ್ರೋಲ್ ಬೆಲೆ ರೂ.111 ರ ಗಡಿ ದಾಟಿದೆ. ರಾಜಸ್ಥಾನದ ಶ್ರೀ ಗಂಗಾನಗರ ಅತ್ಯಂತ ದುಬಾರಿ ಆಟೋ ಇಂಧನ ಹೊಂದಿದ್ದು, ಪೆಟ್ರೋಲ್ ಬೆಲೆ ರೂ 117.86 ಮತ್ತು ಡೀಸೆಲ್ ರೂ 105.95 ಆಗಿದೆ. ಕರ್ನಾಟಕದಲ್ಲೂ ಇದೇ ರೀತಿ ದರ ಹೆಚ್ಚಳವಾಗುವ ಸಾಧ್ಯತೆಯೂ ಇದೆ.

ವಿಮಾನ ಇಂಧನಕ್ಕಿಂತ ಪೆಟ್ರೋಲ್ ಬೆಲೆ ದುಬಾರಿ!:

ಸರ್ಕಾರಿ ಸ್ವಾಮ್ಯದ ತೈಲ ಕಂಪನಿಗಳು ಪೆಟ್ರೋಲ್ ಮತ್ತು ಡೀಸೆಲ್ ದರವನ್ನು ಕಳೆದ ಭಾನುವಾರ ತಲಾ 35 ಪೈಸೆಯಷ್ಟು ಏರಿಕೆ ಮಾಡಿವೆ. ತನ್ಮೂಲಕ ವಿಮಾನಗಳ(ಇಂಧನವಾದ ಏವಿಯೇಷನ್ ಟರ್ಬೈನ್ ಇಂಧನ) ಇಂಧನಕ್ಕಿಂತಲೂ ಕಾರು ಮತ್ತು ದ್ವಿಚಕ್ರ ವಾಹನ ಸವಾರರು ಪೆಟ್ರೋಲ್‌ಗೆ ಶೇ.33ರಷ್ಟು ಹೆಚ್ಚು ದರ ತೆರಬೇಕಾದ ಅನಿವಾರ್ಯತೆ ಎದುರಾಗಿದೆ.

ವಿಮಾನದ ಇಂಧನ ಎಟಿಎಫ್‌ಗೆ(ATF) ಒಂದು ಲೀಟರ್‌ಗೆ 79 ರು. ಇದ್ದರೆ, ದೇಶಾದ್ಯಂತ ಪೆಟ್ರೋಲ್ ದರ 110 ರು. ಆಸುಪಾಸಿನಲ್ಲಿದೆ. ಅಂದರೆ ಪೆಟ್ರೋಲ್ ದರವು ವೈಮಾನಿಕ ಇಂಧನಕ್ಕಿಂತ ಶೇ.33ರಷ್ಟು ಹೆಚ್ಚು ದುಬಾರಿ. "ಆಕಾಶದಲ್ಲಿ ಹಾರಾಡುವ ವಾಹನಕ್ಕೆ ಇಂಧನ ದರ ಕಡಿಮೆ, ರಸ್ತೆಯ ಮೇಲೆ ಓಡಾಡುವ ವಾಹನಕ್ಕೆ ದುಪ್ಪಟ್ಟು ಹಣ" ಅಚ್ಚೇ ದಿನ್ ಅಂದ್ರೆ ಇದೆ ಅಲ್ವಾ ಅಂತಾ ಸಾಮಾಜಿಕ ಜಾಲತಣಾದಲ್ಲಿ ತೂಲ ಬೆಲೆ ಹೆಚ್ಚಳದ ವಿರುದ್ಧ ಜನಾಕ್ರೋಶ ವ್ಯಕ್ತವಾಗುತ್ತಿದೆ.

ತೆರಿಗೆ ಹೆಚ್ಚಳ ಮಾಡಿದ್ದೆ ಕಾರಣ:

ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ತೆರಿಗೆ ಹೆಚ್ಚಿಸಿದ್ದರ ಪರಿಣಾಮ ಇವತ್ತು ದರ ಹೆಚ್ಚಳವಾಗಲು ಪ್ರಮುಖ ಕಾರಣವಾಗಿದೆ. ಒಂದು ವೇಳೆ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ತೆರಿಗೆ ಹೆಚ್ಚಳವಾಗದೇ 2014ರ ತೆರಿಗೆ ದರವೇ ಇಂದೂ ಜಾರಿಯಲ್ಲಿದ್ದರೆ, ಈಗ ಪೆಟ್ರೋಲ್ ದರವು 66 ರೂ ಮತ್ತು ಡೀಸೆಲ್ ಬೆಲೆ 55 ರೂ ಇರುತ್ತಿತ್ತು ಎಂದು ಅಂಕಿ ಅಂಶಗಳಿಂದ ತಿಳಿದುಬಂದಿದೆ.

2014ರ ಜೂನ್‌ನಲ್ಲಿ ತೈಲ ಮಾರುಕಟ್ಟೆ ಕಂಪನಿಗಳು ಪೆಟ್ರೋಲ್ ಅನ್ನು ಲೀ.ಗೆ 49 ರೂ.ನಂತೆ ಡೀಲರ್‌ಗಳಿಗೆ ಮಾರಾಟ ಮಾಡುತ್ತಿದ್ದವು. ಕೇಂದ್ರ ಮತ್ತು ರಾಜ್ಯಗಳ ತೆರಿಗೆ ಹಾಗೂ ಡೀಲರ್‌ಗಳ ಕಮಿಷನ್ ಸೇರಿಸಿ ಲೀ. ಪೆಟ್ರೋಲ್ ಬೆಲೆ 74 ರು. ತಲುಪುತ್ತಿತ್ತು. ಇದರಲ್ಲಿ ತೈಲ ಮಾರುಕಟ್ಟೆಕಂಪನಿಗಳು ಶೇ.66ರಷ್ಟು ಹಾಗೂ ಉಳಿದ ಶೇ.34ರಲ್ಲಿ ಡೀಲರ್‌ಗಳು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪಾಲು ಪಡೆಯುತ್ತಿದ್ದವು.

ಆದರೆ ಇದೀಗ ತೈಲ ಕಂಪನಿಗಳ ಪಾಲು ಶೇ.42 ರಷ್ಟು ಇಳಿಕೆಯಾಗಿದ್ದು, ಕೇಂದ್ರ, ರಾಜ್ಯಗಳ ತೆರಿಗೆ ಮತ್ತು ಡೀಲರ್‌ಗಳ ಕಮಿಷನ್ ಪಾಲು ಶೇ.58ಕ್ಕೆ ಏರಿದೆ. ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಕೇಂದ್ರದ ತೆರಿಗೆ ಶೇ.14 ರಿಂದ 32ಕ್ಕೆ ಜಿಗಿದಿದ್ದರೆ, ರಾಜ್ಯಗಳ ತೆರಿಗೆ ಪಾಲು ಶೇ.17 ರಿಂದ ಶೇ.23ಕ್ಕೆ ಏರಿಕೆಯಾಗಿದೆ.

ಕೇಂದ್ರ, ರಾಜ್ಯ ಸರಕಾರಗಳಿಗೆ ಬಂಪರ್:

ಕೇಂದ್ರ ಮತ್ತು ರಾಜ್ಯ ಸರ್ಕಾರದ ತೆರಿಗೆಗಳು ಏರಿಕೆ ಕಂಡಿದ್ದರ ಪರಿಣಾಮವಾಗಿ ಸರಕಾರದ ಆದಾಯ ಮೂರು ಪಟ್ಟು ಹೆಚ್ಚಳವಾಗಿದೆ. ಸರ್ಕಾರವು ಈ ಎರಡೂ ಇಂಧನಗಳನ್ನು ಅಗತ್ಯವಸ್ತುಗಳ ಪಟ್ಟಿಯಲ್ಲಿ ಸೇರಿಸಿದೆ. ಈ ಇಂಧನಗಳು ದೇಶದ ಆರ್ಥಿಕತೆಯ ಚಾಲಕ ಶಕ್ತಿಗಳೂ ಆಗಿವೆ. ಸರ್ಕಾರಕ್ಕೆ ಇದರಿಂದ ಬರುವ ಆದಾಯದ ಪ್ರಮಾಣವೂ ಹೆಚ್ಚಾಗಿದೆ ಹಾಗಾಗಿ ತೈಲದ ಮೇಲಿನ ತೆರಿಗೆಯನ್ನು ವಾಪಸ್ ಪಡೆಯುತ್ತಿಲ್ಲ. ಕೇಂದ್ರ ಸರ್ಕಾರವು 2014 ಮತ್ತು 15 ನೇ ಆರ್ಥಿಕ ವರ್ಷದಲ್ಲಿ 1.7 ಲಕ್ಷ ಕೋಟಿ ರೂ ನಷ್ಟು ಇದ್ದರೆ. ರಾಜ್ಯದ ಆದಾಯ 1.6 ಲಕ್ಷ ಕೋಟಿಯಷ್ಟು ಇತ್ತು. 2020-21 ನೇ ಸಾಲಿನ ಆರ್ಥಿಕ ವರ್ಷದ ಆದಾಯವನ್ನು ಗಮನಿಸಿದರೆ ಕೇಂದ್ರ ಸರಕಾರ ಪೆಟ್ರೋಲಿಯಂನಿಂದ 4.6 ಲಕ್ಷ ಕೋಟಿ ರೂ ಸಂಗ್ರಹಿಸಿದೆ. ರಾಜ್ಯ ಸರಕಾರ 2.2 ಕೋಟಿಯಷ್ಟು ತೆರಿಗೆ ಸಂಗ್ರಹಿಸಿದೆ. ಇದು 164 ಶೇಕಡಾ ಹೆಚ್ಚಳವಾಗಿದೆ. ಆದಾಗ್ಯೂ, ರಾಜ್ಯಗಳಿಗೆ ಪೆಟ್ರೋಲಿಯಂನಿಂದ ತೆರಿಗೆ ಸಂಗ್ರಹವು ಕಳೆದ ನಾಲ್ಕು ವರ್ಷಗಳಿಂದ ಸುಮಾರು 2 ಲಕ್ಷ ಕೋಟಿ ರೂ. ಆಗಿದೆ. ಲಾಕ್ ಡೌನ್ ಸಮಯದಲ್ಲಿ ತೈಲ ಬಳಕೆ ಶೇ.10.6 ರಷ್ಟು ಕುಸಿತ ಕಂಡರೂ ಸರ್ಕಾರಕ್ಕೆ ತೈಲ ತೆರಿಗೆ ಏರಿಕೆಯಿಂದ ಬಂದಿರುವ ಆದಾಯ ಹೆಚ್ಚಾಗಿದೆ.

ಕಳೆದ ಎರಡು ವರ್ಷಗಳಿಂದ ಇಂಧನದ ಮೇಲಿನ ಅಬಕಾರಿ ಸುಂಕ ಗಮನಾರ್ಹವಾಗಿ ಹೆಚ್ಚಾಗಿದೆ. ಇದು ಸಹ ಇಂಧನಗಳ ಬೆಲೆ ನಿರಂತರ ಏರಿಕೆಗೆ ಕಾರಣವಾಗಿದೆ. ಈ ವರ್ಷದ ಆರಂಭದಲ್ಲಿ ಪೆಟ್ರೋಲ್ ಹಾಗೂ ಡೀಸೆಲ್ ಬೆಲೆಯಲ್ಲಿ ಭಾರೀ ಏರಿಕೆಯಾಗಿತ್ತು. ಪ್ರಸ್ತುತ ಕಚ್ಚಾ ತೈಲದರ ಪ್ರತಿ ಬ್ಯಾರೆಲ್‌ಗೆ 84.8 ಡಾಲರ್ (ಕಳೆದ ತಿಂಗಳು 73.51 ಡಾಲರ್ ಇತ್ತು) ಇದೆ. 2014 ರಲ್ಲೂ ಕಚ್ಚಾ ತೈಲದರ 74 ಡಾಲರ್ ಆಸುಪಾಸಿನಲ್ಲೇ ಇತ್ತು. ಇನ್ನು, 1975 ರಿಂದ 2010ರ ತನಕ ಪೆಟ್ರೋಲ್ ದರ ನಿಯಂತ್ರಿತವಾಗಿತ್ತು. 2014ರ ಅಕ್ಟೋಬರ್ ನಲ್ಲಿ ಬೆಲೆ ನಿಯಂತ್ರಣವನ್ನು ಸಡಿಲಗೊಳಿಸಿದ ನಂತರದಲ್ಲಿ ವಿಪರೀತ ಏರಿಕೆಯಾಗುತ್ತಿದೆ. ಅಂತಾರಾಷ್ಟ್ರೀಯ ಮಾರುಕಟ್ಟೆಯ ಕಚ್ಚಾ ತೈಲ ದರಕ್ಕೆ ಅನುಗುಣವಾಗಿ ದೇಶೀಯ ಮಾರುಕಟ್ಟೆಯಲ್ಲಿ ಅದನ್ನು ವಿಶೇಷವಾಗಿ ದರ ಇಳಿದಾಗ, ತೆರಿಗೆ ಏರಿದ ಪರಿಣಾಮ ಅದರ ಪ್ರಯೋಜನ ಗ್ರಾಹಕರಿಗೆ ವರ್ಗಾವಣೆ ಆಗಲಿಲ್ಲ ಎಂಬುದು ಗಮನಾರ್ಹ ಸಂಗತಿ.

ಸೆಪ್ಟೆಂಬರ್ 28 ರಿಂದೀಚೆಗೆ ಪೆಟ್ರೋಲ್ ದರ ಲೀಟರಿಗೆ 4.65 ರೂಪಾಯಿ, ಸೆಪ್ಟೆಂಬರ್ 24 ರಿಂದೀಚೆಗೆ ಡೀಸೆಲ್ ದರ ಲೀಟರಿಗೆ 5.95 ರೂಪಾಯಿ ಹೆಚ್ಚಳವಾಗಿದೆ. ಇದಕ್ಕೂ ಮುನ್ನ, ಮೇ 4 –ಜುಲೈ 17ರ ನಡುವೆ ಪೆಟ್ರೋಲ್ ದರ ಲೀಟರಿಗೆ 11.44 ರೂಪಾಯಿ, ಡೀಸೆಲ್ ದರ ಲೀಟರಿಗೆ 9.14 ರೂಪಾಯಿ ಏರಿತ್ತು.

8 ವರ್ಷಗಳ ಹಿಂದೆ ಒಳ್ಳೆಯ ದಿನಗಳು ಬರಲಿವೆ ಎಂದು ನಿರೀಕ್ಷೆ ಉಟ್ಟಿಸಿದ್ದು ಸುಳ್ಳು ಎಂಬುದು ಈಗ ಸಾಬೀತಾಗುತ್ತಿದೆ. ಎರಡನೇ ಅವಧಿಗೆ ಪ್ರಧಾನಿಯಾದಾಗ ಕಡಿಮೆ ದರದಲ್ಲಿ ತೈಲ ಸಿಗಲಿದೆ ಎಂದೆಲ್ಲ ಪ್ರಚಾರ ಮಾಡಲಾಗಿತ್ತು. ಪ್ರಚಾರ ಮಾಡಿದ್ದವರು ಈಗ ನಾಪತ್ತೆಯಾಗಿದ್ದಾರೆ. ಮೂಗಿಗೆ ತುಪ್ಪ ಸವರಿ ಪ್ರಧಾನಿ ಮೌನಕ್ಕೆ ಶರಣಾಗಿದ್ದಾರೆ. ದಿನ ನಿತ್ಯ ಬೈದು ಕೊಳ್ಳುತ್ತಲೆ ಪೆಟ್ರೋಲ್ ಬಂಕ್‌ನತ್ತ ಸಾಗುತ್ತಿರುವ ಜನತೆ ಜಾಗ್ರತವಾಗಬೇಕಿದೆ. ತೈಲ ತೆರಿಗೆಯಲ್ಲಿ ಲಾಭದ ಊಟ ಮಾಡುತ್ತಿರುವ ಸರಕಾರಕ್ಕೆ ಮೂಗುದಾರ ಹಾಕಬೇಕಿದೆ.

ಕೇಂದ್ರಕ್ಕೆ ಬಂಪರ್ ಆದಾಯ

ಆರ್ಥಿಕ ವರ್ಷ	ಕೇಂದ್ರ ತೆರಿಗೆ	ರಾಜ್ಯ ತೆರಿಗೆ
2014-15	1.7 ಲಕ್ಷ ಕೋಟಿ	1.6 ಲಕ್ಷ ಕೋಟಿ
2015-16	2.5 ಲಕ್ಷ ಕೋಟಿ	1.6 ಲಕ್ಷ ಕೋಟಿ
2016-17	3.4 ಲಕ್ಷ ಕೋಟಿ	1.9 ಲಕ್ಷ ಕೋಟಿ
2017-18	3.4 ಲಕ್ಷ ಕೋಟಿ	2.1 ಲಕ್ಷ ಕೋಟಿ
2018-19	3.5 ಲಕ್ಷ ಕೋಟಿ	2.3ಲಕ್ಷ ಕೋಟಿ
2019-20	3.3 ಲಕ್ಷ ಕೋಟಿ	2.2 ಲಕ್ಷ ಕೋಟಿ
2020-21	4.6 ಲಕ್ಷ ಕೋಟಿ	2.2 ಲಕ್ಷ ಕೋಟಿ

ಪೆಟ್ರೋಲ್ ದರ । ತೆರಿಗೆ । ಕಮಿಷನ್ ಲೆಕ್ಕ

ಅವಧಿ	ಚಿಲ್ಲರೆ ಮಾರಾಟ ದರ	ಮೂಲ ದರ	ಕೇಂದ್ರ ತೆರಿಗೆ	ರಾಜ್ಯ ತೆರಿಗೆ	ಡೀಲರ್ ಕಮಿಷನ್
2014 ಜೂನ್	74	49	10	12	02
2015 ಅಕ್ಟೋಬರ್	61	29	18	12	02
2016 ಅಕ್ಟೋಬರ್	66	28	22	14	02
2017 ಅಕ್ಟೋಬರ್	68	30	20	15	04
2018 ಅಕ್ಟೋಬರ್	83	43	18	18	04
2019 ಅಕ್ಟೋಬರ್	73	34	20	16	04
2020 ಅಕ್ಟೋಬರ್	81	26	33	19	04
2021 ಅಕ್ಟೋಬರ್	102	42	33	24	04

ಪ್ರವಾಹದಿಂದ ಮೃತ ಪಟ್ಟವರಿಗೆರಿಗೆ ರೂ 5 ಲಕ್ಷ, ಮನೆ ಕಳೆದುಕೊಂಡವರಿಗೆ ರೂ 10 ಲಕ್ಷ ಪರಿಹಾರ: ಕೇರಳ ಎಡರಂಗ ಸರ್ಕಾರ ಘೋಷಣೆ

ತಿರುವನಂತಪುರಂ: ಕೇರಳ ರಾಜ್ಯದ ವಿವಿದೆಡೆಗಳಲ್ಲಿ ಇತ್ತೀಚಿನ ಧಾರಾಕಾರ ಮಳೆ ಮತ್ತು ಭಾರೀ ಭೂಕುಸಿತದ ಪರಿಣಾಮವಾಗಿ ಸಾಕಷ್ಟು ಪ್ರಮಾಣದಲ್ಲಿ ಹಾನಿ ಸಂಭವಿಸಿತ್ತು. ಸಂಕಷ್ಟಕ್ಕೆ ಒಳಗಾದ ಜನತೆಯ ನೆರವಿಗೆ ಧಾವಿಸಿರುವ ಕೇರಳದ ಎಡರಂಗ ಸರ್ಕಾರವು ಪ್ರವಾಹದಿಂದ ಪ್ರಾಣ ಕಳೆದುಕೊಂಡ ಕುಟುಂಬಸ್ಥರಿಗೆ 5 ಲಕ್ಷ ರೂಪಾಯಿ ಮತ್ತು ಮಳೆ ಸಂಬಂಧಿತ ಅನಾಹುತಗಳಲ್ಲಿ ಅವರ ಮನೆ ಮತ್ತು ಭೂಮಿ ಕಳೆದುಕೊಂಡವರಿಗೆ 10 ಲಕ್ಷ ರೂಪಾಯಿಗಳ ಪರಿಹಾರವನ್ನು ಸರ್ಕಾರ ಘೋಷಿಸಿದೆ.

ಈ ಬಗ್ಗೆ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಸರ್ಕಾರದ ನಿರ್ಧಾರವನ್ನು ಪ್ರಕಟಿಸಿದ್ದಾರೆ. ಕೇರಳದಲ್ಲಿ ಇತ್ತೀಚಿನ ಪ್ರಕೃತಿ ವಿಕೋಪದಿಂದಾಗಿ ಸಾಕಷ್ಟು ಹಾನಿ ಸಂಭವಿಸಿತು. ಮೃತರ ಕುಟುಂಬಸ್ಥರಿಗೆ ರಾಜ್ಯ ವಿಕೋಪ ನಿಧಿಯಿಂದ 4 ಲಕ್ಷ ರೂ., ಉಳಿದ 1 ಲಕ್ಷ ರೂ.ಗಳನ್ನು ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಒಟ್ಟು ರೂ.5 ಲಕ್ಷ ನೀಡಲಾಗುವುದು ಎಂದು ಮುಖ್ಯಮಂತ್ರಿ ಹೇಳಿದರು.

ಅಲ್ಲದೆ, ಅಕ್ಟೋಬರ್ 11ರಂದು ಭಯೋತ್ಪಾದಕರೊಂದಿಗಿನ ಗುಂಡಿನ ಕಾಳಗದಲ್ಲಿ ಹುತಾತ್ಮರಾದ ವೈಶಾಖ್ ಎಚ್ ಅವರ ಕುಟುಂಬಕ್ಕೆ ಆರ್ಥಿಕ ನೆರವು ನೀಡಲು ಸಚಿವ ಸಂಪುಟ ಸಭೆಯಲ್ಲಿ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಇದೇ ಸಂದರ್ಭದಲ್ಲಿ ತಿಳಿಸಿದ್ದಾರೆ.

ಜಮ್ಮು ಮತ್ತು ಕಾಶ್ಮೀರದ ಪೂಂಚ್ ಜಿಲ್ಲೆಯಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಭಯೋತ್ಪಾದಕರೊಂದಿಗಿನ ಗುಂಡಿನ ಚಕಮಕಿಯಲ್ಲಿ ಸಾವನ್ನಪ್ಪಿದ ಕಿರಿಯ ಆಯೋಗದ ಅಧಿಕಾರಿ ಸೇರಿದಂತೆ ಐವರು ಸೇನಾ ಸಿಬ್ಬಂದಿಗಳಲ್ಲಿ ವೈಶಾಖ್ ಕೂಡ ಸೇರಿದ್ದಾರೆ.

ಅಲ್ಲದೆ, ಸೋಮವಾರ ವಿದ್ಯುತ್ ಸ್ಪರ್ಶದಿಂದ ಮೃತಪಟ್ಟ ಇಬ್ಬರ ಕುಟುಂಬಗಳಿಗೆ ಮುಖ್ಯಮಂತ್ರಿಗಳ ವಿಪತ್ತು ಪರಿಹಾರ ನಿಧಿಯಿಂದ ತಲಾ 5 ಲಕ್ಷ ರೂಪಾಯಿ ಪರಿಹಾರ ಘೋಷಿಸಲಾಗಿದೆ. ಒಂದು ಕುಟುಂಬಕ್ಕೆ, ಕುಟುಂಬ ಯೋಜನೆಯಡಿ ಮನೆ ನೀಡಲು ನಿರ್ಧರಿಸಲಾಗಿದೆ.

ಪ್ರವಾಹ ವಿಪತ್ತಿನಿಂದಾಗಿ ಮನೆ ಮತ್ತು ಭೂಮಿ ಕಳೆದುಕೊಂಡವರಿಗೆ ಆರ್ಥಿಕ ನೆರವು ನೀಡುವ ಸಂಬಂಧ, ಹಾನಿಗೊಳಪಟ್ಟ ಗ್ರಾಮಗಳ ಪಟ್ಟಿಯನ್ನು ಶೀಘ್ರದಲ್ಲಿಯೇ ಸಿದ್ಧಪಡಿಸಲು ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರಕ್ಕೆ (ಎಸ್‌ಡಿಎಂಎ) ಕೇರಳ ಎಡರಂಗ ಸರ್ಕಾರ ಸೂಚಿಸಿದೆ.


ವಿಪತ್ತುಗಳ ತೀವ್ರತೆ ಮತ್ತು ಅಲ್ಲಿನ ಜನರು ಎದುರಿಸುತ್ತಿರುವ ತೊಂದರೆಗಳ ಆಧಾರದ ಎಲ್ಲಾ ಮಾಹಿತಿಗಳನ್ನು ಸಂಗ್ರಹಿಸಲು ತಿಳಿಸಲಾಗಿದೆ ಎಂದು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ತಿಳಿಸಿದ್ದಾರೆ.

ವಿಪತ್ತುಗಳಲ್ಲಿ ಶೇ.15ಕ್ಕಿಂತ ಹೆಚ್ಚು ಹಾನಿಗೊಳಗಾದ ಮನೆಗಳಲ್ಲಿ ವಾಸಿಸುವ ಕುಟುಂಬಗಳನ್ನು ವಿಪತ್ತು ಪೀಡಿತ ಕುಟುಂಬ ಎಂದು ಪರಿಗಣಿಸಲಾಗುವುದು ಎಂದು ಹೇಳಿದರು.

2019 ರ ನೈಸರ್ಗಿಕ ವಿಕೋಪದ ಸಮಯದಲ್ಲಿ ಅಳವಡಿಸಿಕೊಂಡ ವಿಧಾನವನ್ನು ಈಗ ಮುಂದುವರಿಸಲಾಗುವುದು, ಮನೆಗಳು ಮತ್ತು ಭೂಮಿ ಭಾಗಶಃ ಅಥವಾ ಸಂಪೂರ್ಣವಾಗಿ ಹಾನಿಗೊಳಗಾದ ಜನತೆಯ ನೆರವಿಗೆ ಸರ್ಕಾರ ಮುಂದಾಗಲಿದೆ ಎಂದು ಅವರು ಹೇಳಿದರು.

ಅದೇ ರೀತಿಯಲ್ಲಿ ಆಗಸ್ಟ್ 2018, 2019 ಮತ್ತು 2021ರ ಪ್ರವಾಹದಲ್ಲಿ ದಾಖಲೆಗಳು ನಾಶವಾಗಿದ್ದು, ಅಂತಹ ದಾಖಲೆಪತ್ರಗಳ ಮರು ಸಿದ್ಧಪಡಿಸಿಕೊಳ್ಳಲು ತಗಲು ವೆಚ್ಚಗಳಾದ ಮುದ್ರಾಂಕ ಶುಲ್ಕ ಮತ್ತು ಇತರೆ ಶುಲ್ಕವನ್ನು ವಿನಾಯಿತಿ ನೀಡುವ ಆದೇಶವನ್ನು ಒಂದು ವರ್ಷಗಳಿಗೆ ವಿಸ್ತರಿಸಲು ಕೇರಳ ಎಡರಂಗ ಸರ್ಕಾರ ನಿರ್ಧರಿಸಿದೆ.

ಜಾತಿಗಣತಿ ಮತ್ತು ಅಭಿವೃದ್ಧಿಯ ಸಾರ್ವತ್ರೀಕರಣ



ಪ್ರೊ. ಟಿ.ಆರ್. ಚಂದ್ರಶೇಖರ

ಬ್ರಾಹ್ಮಣ ವರ್ಣದ ಮತ್ತು ಅತ್ಯಂತ ಉನ್ನತ ಜಾತಿಗಳಿಗೆ ತಮ್ಮ ಆರ್ಥಿಕ, ಸಾಮಾಜಿಕ, ರಾಜಕೀಯ ಪ್ರಾಬಲ್ಯ, ಸಂಪತ್ತಿನ ಕೇಂದ್ರೀಕರಣ ಎಲ್ಲಿ ಜಾತಿಗಣತಿಯಿಂದ ಬಹಿರಂಗವಾಗುತ್ತದೊ ಎನ್ನುವ ಭಯವಿದೆ. ಅದಕ್ಕಾಗಿ ಇವರು ಜಾತಿಗಣತಿಯನ್ನು ತಿರಸ್ಕರಿಸುತ್ತಿದ್ದಾರೆ. ಇದು ಎಲ್ಲಿ ಇವರ ಸಾಂಸ್ಕೃತಿಕ ಆಧಾರವಾದ ಸಂಸ್ಥೆಯು ಪ್ರಚುರಪಡಿಸುತ್ತಿರುವ 'ಅಖಂಡತೆ' ಸಿದ್ಧಾಂತಕ್ಕೆ ಪೆಟ್ಟು ಬೀಳುತ್ತದೋ ಎನ್ನುವ ಭಯವಿದೆ. ಸನಾತನ-ಸಾಂಸ್ಥಿಕ ಅಸಮಾನತೆಯನ್ನು ಹಾಗೂ ಪ್ರಸ್ತುತ ಆರ್ಥಿಕ ಅಸಮಾನತೆಯನ್ನು ಹೋಗಲಾಡಿಸಲು ನಮಗೆ ಈಗ ಗೊತ್ತಿರುವ ಒಂದು ಪರಿಹಾರ ಜಾತಿಗಣತಿ ಮತ್ತು ಅದರ ಆಧಾರದ ಮೇಲೆ ಅಭಿವೃದ್ಧಿಯ ಫಲಗಳ ಹಂಚಿಕೆ. ಜನರು ಅನುಭವಿಸುತ್ತಿರುವ ದುಸ್ಥಿತಿಗನುಗುಣವಾಗಿ ಅಭಿವೃದ್ಧಿಯ ಫಲಗಳನ್ನು ಹಂಚುವುದು ಎಂದರೆ ಅತ್ಯಂತ ಉನ್ನತ ಮತ್ತು ಉನ್ನತ ಜಾತಿಗಳಲ್ಲಿ ಕ್ರೋಢೀಕೃತಗೊಂಡಿರುವ ವರಮಾನದಲ್ಲಿನ-ಸಂಪತ್ತಿನ ಒಂದು ಭಾಗವನ್ನು ವರ್ಗಾಯಿಸಬೇಕಾಗುತ್ತದೆ (ಪ್ರತ್ಯಕ್ಷ ತೆರಿಗೆ ಮೂಲಕ). ಇಂತಹ ತ್ಯಾಗಕ್ಕೆ ದ್ವಿಜ ಜಾತಿಗಳು ಸಿದ್ಧವಿಲ್ಲ ಮತ್ತು ಅವರ ಮೇಲೆ ತೆರಿಗೆಗಳನ್ನು ವಿಧಿಸಲು ಸರ್ಕಾರಗಳು ಸಿದ್ಧವಿಲ್ಲ.

ಭಾರತದಲ್ಲಿ ಜನಗಣತಿಗೆ ನೂರು ವರ್ಷಕ್ಕೂ ಮೀರಿದ ಚರಿತ್ರೆಯಿದೆ. ಜನಗಣತಿಯ ಭಾಗವಾಗಿ ಜಾತಿಗಣತಿ ಕೊನೆಯದಾಗಿ 1931ರಲ್ಲಿ ನಡೆಯಿತು. ಸ್ವಾತಂತ್ರ್ಯಾನಂತರ ಜನಗಣತಿಯಲ್ಲಿ ಒಟ್ಟು ಜನಸಂಖ್ಯೆ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಗಣನೆ ನಡೆಯುತ್ತಿದೆ. ಜಾತಿಗಣತಿಯು ಇದುವರೆವಿಗೂ ನಡೆದಿಲ್ಲ. ಕಳೆದ 30-40 ವರ್ಷಗಳಿಂದ ಜಾತಿಗಣತಿಯನ್ನು ಇತರೆ ಹಿಂದುಳಿದ ವರ್ಗಗಳು (ಒಬಿಸಿ) ಒತ್ತಾಯಿಸುತ್ತಿವೆ. ಆದರೆ ಸರ್ಕಾರಗಳು ಇದನ್ನು ಒಂದೋ ತಿರಸ್ಕರಿಸುತ್ತಿವೆ(ಬಿಜೆಪಿ), ಇಲ್ಲವೇ ತೀರ್ಮಾನ ತೆಗೆದುಕೊಳ್ಳದೆ ಮುಂದೆ ಹಾಕುತ್ತಿವೆ. ಸಾಮಾನ್ಯವಾಗಿ ಜಾತಿಗಣತಿಯಿಂದ ಜಾತೀಯತೆಯು ಊರ್ಜಿತಗೊಳ್ಳುತ್ತದೆ ಎಂಬ ಕಾರಣದಿಂದ ಬಿಜೆಪಿ ಮತ್ತು ಅದರ ಅಡಿಪಾಯವಾಗಿರುವ ಉನ್ನತ ಜಾತಿ-ವರ್ಗಗಳು ಜಾತಿಗಣತಿಯನ್ನು ವಿರೋಧಿಸುತ್ತಿವೆ. ಜಾತೀಯತೆಯನ್ನು ಊರ್ಜಿತಗೊಳಿಸುವುದು ಜಾತಿಗಣತಿಯಲ್ಲ: ಅದು ಚಾತುರ್ವರ್ಣ ಪ್ರಣಾಳಿಕೆ.

ಜಾತಿಗಣತಿಯನ್ನು ನಡೆಸುವುದು ಸುಲಭದ ಕಾರ್ಯವಲ್ಲ. ಈಗಾಗಲೆ ಒಕ್ಕೂಟ ಸರ್ಕಾರವು 2011ರಲ್ಲಿ ನಡೆಸಿದ ಸಾಮಾಜಿಕ-ಆರ್ಥಿಕ ಮತ್ತು ಜಾತಿ ಗಣತಿ(ಎಸ್‌ಈಸಿಸಿ) ಅನೇಕ ತಾಂತ್ರಿಕ ಮತ್ತು ಸಾಂಖ್ಯಿಕ ಸಮಸ್ಯೆಗಳನ್ನು ಎದುರಿಸಬೇಕಾಯಿತು. ಸಾಮಾಜಿಕ-ಆರ್ಥಿಕ ಗಣತಿ 2011 ಮೂರು ಬೇರೆ ಬೇರೆ ಇಲಾಖೆಗಳಿಂದ ನಡೆಯಿತು. ಆದರಿಂದ ಅನೇಕ ಸಮಸ್ಯೆಗಳು ಉದ್ಭವವಾದವು.

ಜಾತಿಗಣತಿ ಬಗ್ಗೆ ಚರ್ಚೆ ಮಾಡುವಾಗ ನಾವು ಗಮನಿಸಬೇಕಾದ ಸಂಗತಿಯೆಂದರೆ ನಮ್ಮದು ಅಖಂಡ ಸಮಾಜವಲ್ಲ, ಇದು ಅಸಮಾನತೆಯ, ಶ್ರೇಣೀಕರಣದ ಮತ್ತು ಪುರುಷ ಪ್ರಧಾನ ಸಮಾಜ ಎಂಬುದಾಗಿದೆ. ನಮ್ಮಲ್ಲಿ ಸಾವಿರಾರು ಜಾತಿಗಳಿವೆ. ಅವುಗಳ ಸಾಮಾಜಿಕ-ಆರ್ಥಿಕ-ರಾಜಕೀಯ ಸ್ಥಾನಮಾನ ಸಮಾನವಾಗಿಲ್ಲ. ನಮ್ಮದು ಎಲ್ಲರನ್ನು ಒಳಗೊಳ್ಳುವ ಸಮಾಜವಲ್ಲ. ಸ್ವಾತಂತ್ರ್ಯಾನಂತರ ಸರ್ಕಾರದ ಸಕಾರಾತ್ಮಕ ತಾರತಮ್ಯ ನೀತಿಗಳಿಂದಾಗಿ ಮತ್ತು ನಮ್ಮ ಸಂವಿಧಾನಾತ್ಮಕ ಮೀಸಲಾತಿ ಅವಕಾಶಗಳಿಂದಾಗಿ, ಪ. ಜಾ.(ಪರಿಶಿಷ್ಠ ಜಾತಿ) ಪ. ಪಂ. (ಪರಿಶಿಷ್ಠ ಪಂಗಡ) ಮತ್ತು ಇತರೆ ಹಿಂದುಳಿದ ವರ್ಗಗಳು(ಒಬಿಸಿ) ಸಾಕಷ್ಟು ಅನುಕೂಲ ಪಡೆದುಕೊಂಡಿವೆ. ಆದರೆ ಅಸಮಾನತೆ-ಶ್ರೇಣೀಕರಣ ಮುಂದುವರಿದಿದೆ. ಅನೇಕ ಅಧ್ಯಯನಗಳು ಮತ್ತೆ ಮತ್ತೆ ಸ್ಪಷ್ಟಪಡಿಸುತ್ತಿರುವಂತೆ ಅತ್ಯಂತ ಉನ್ನತ ಜಾತಿ(ಬ್ರಾಹ್ಮಣರು) ಮತ್ತು ಉನ್ನತ ಜಾತಿಗಳು(ಲಿಂಗಾಯತರು, ಒಕ್ಕಲಿಗರು, ಕಮ್ಮಾಗಳು, ಮರಾಠರು, ಜಾಟರು – ಇತ್ಯಾದಿ)ಗಳ ಪ್ರಾಬಲ್ಯವು ಮುಂದುವರಿದಿದೆ ಮತ್ತು ಏರಿಕೆಯಾಗುತ್ತಿದೆ. ಅಭಿವೃದ್ಧಿಯ ಫಲಗಳು ಸಮಾಜದ ಎಲ್ಲ ವರ್ಗಗಳಿಗೂ ಸಮಾನವಾಗಿ ದೊರೆಯುತ್ತಿಲ್ಲ. ಸಮಾನವಾಗಿರಲಿ, ಕೆಲವು ಸಮುದಾಯಗಳಿಗೆ ಕನಿಷ್ಠ ಮಟ್ಟದಲ್ಲಿಯೂ ದೊರೆಯುತ್ತಿಲ್ಲ. ನಮ್ಮ ದೇಶದಲ್ಲಿ 2013ರ ನಂತರ ವಿಶೇಷವಾಗಿ ಅತ್ಯಂತ ಉನ್ನತ ಜಾತಿಯ ಮತ್ತು ಇತರೆ ಉನ್ನತ ಜಾತಿಗಳ ಪ್ರಾಬಲ್ಯ, ಅಧಿಕಾರ, ಅಹಂಕಾರ ಹದ್ದುಮೀರಿ ಬೆಳೆಯುತ್ತಿದೆ.

ಈ ಎಲ್ಲ ಕಾರಣಗಳಿಂದ ಜಾತಿಗಣತಿಯ ಬಗ್ಗೆ ಜನರು ಒತ್ತಾಯ ಮಾಡುತ್ತಿದ್ದಾರೆ. ಒಬಿಸಿಗಳಿಗೆ ಶೇ. 27 ರಷ್ಟು, ಪ.ಜಾ.ಗೆ ಶೇ. 15 ರಷ್ಟು ಮತ್ತು ಪ. ಪಂ.ಗಳಿಗೆ ಶೇ. 3 ರಷ್ಟು ಮೀಸಲಾತಿಯಿದೆ. ಈಡಬ್ಲುಎಸ್.ಗಳಿಗೆ ಶೇ. 10 ಮೀಸಲಾತಿಯಿದೆ. ಆದರೆ ಇದನ್ನು ಸಮರ್ಪಕವಾಗಿ ಸರ್ಕಾರಗಳು ಅನುಷ್ಠಾಗೊಳಿಸುತ್ತಿಲ್ಲ. ಉದಾ: ಪ.ಜಾ. ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಸಾಮಾನ್ಯ ವರ್ಗದಲ್ಲಿನ ಅಭ್ಯರ್ಥಿಗಳ ಜೊತೆ ಜೊತೆಗೆ ಉನ್ನತ ಅಂಕ ಪಡೆದು ಶೈಕ್ಷಣಿಕ ಪ್ರವೇಶ ಅಥವಾ ಉದ್ಯೋಗ ಪಡೆದುಕೊಂಡರೆ ಅವರನ್ನು 'ಸಾಮಾನ್ಯ' ವರ್ಗದಲ್ಲಿ ಲೆಕ್ಕಕ್ಕೆ ತೆಗೆದುಕೊಳ್ಳದೆ ಮೀಸಲಾತಿ ವರ್ಗದಲ್ಲಿ ಸೇರಿಸಲಾಗುತ್ತದೆ. ಒಂದು ವೇಳೆ ಅವರನ್ನು ಸಾಮಾನ್ಯ ವರ್ಗದಲ್ಲಿ ಸೇರಿಸಿದ್ದರೆ ಮೀಸಲಾತಿ ವಲಯದಲ್ಲಿ ಸ್ಥಾನಗಳು ಹೆಚ್ಚುವರಿಯಾಗುತ್ತಿದ್ದವು. ಇಂತಹ ಅನೇಕ ಸಮಸ್ಯೆಗಳನ್ನು ಉಂಟು ಮಾಡಿ ಮೀಸಲಾತಿ ತತ್ವಕ್ಕೆ ಅನ್ಯಾಯ ಮಾಡಲಾಗುತ್ತಿದೆ. ವರ್ಟಿಕಲ್ ಮೀಸಲಾತಿ ವಿಧಾನದಲ್ಲಿ ನ್ಯಾಯ ದೊರಕುತ್ತಿದ್ದರೂ ಹಾರಿಜಾಂಟಲ್ ಮೀಸಲಾತಿಯಲ್ಲಿ ಪ. ಜಾ. ಮತ್ತು ಪ. ಪಂ. ಹಾಗೂ ಒಬಿಸಿ ವರ್ಗಗಳು ಅನೇಕ ರೀತಿಯ ಅನ್ಯಾಯ ಎದುರಿಸುತ್ತಿವೆ.

ಸರ್ಕಾರಗಳು ಇಂದು ಇಲಾಖೆಗಳಲ್ಲಿ ಖಾಲಿಯಿರುವ ಹುದ್ದೆಗಳನ್ನು ತುಂಬುತ್ತಿಲ್ಲ. ಇದರಿಂದಾಗಿ ಸಂವಿಧಾನಾತ್ಮಕ ಹಕ್ಕುಗಳ ಉಲ್ಲಂಘನೆಯಾಗುತ್ತಿದೆ. ಸರ್ಕಾರಗಳು ಇಂದು ಗುತ್ತಿಗೆ-ಹೊರಗುತ್ತಿಗೆ ವಿಧಾನಗಳಲ್ಲಿ ನೇಮಕ ಮಾಡಿಕೊಳ್ಳುತ್ತಿವೆ. ಕರ್ನಾಟಕದಲ್ಲಿ ಖಾಲಿಯಿರುವ ಸರ್ಕಾರಿ ಹುದ್ದೆಗಳ ವಿವರ ಇಲ್ಲಿದೆ.

ಮೀಸಲಾತಿ ಹೇಗೆ ಅಪ್ರಸ್ತುತವಾಗುತ್ತದೆ ಎಂಬುದನ್ನು ಮೇಲಿನ ಕೋಷ್ಟಕ ಸಾಕ್ಷಿಯಾಗಿದೆ. ಇಲ್ಲಿ ಖಾಲಿಯಿರುವ ಹುದ್ದೆಗಳು 2.53 ಲಕ್ಷ. ಇವುಗಳನ್ನು ತುಂಬಿದರೆ 20830(ಶೇ.15) ಪ. ಜಾ. ಮತ್ತು 4166(ಶೇ3) ಪ. ಪಂ. ಯುವಕ-ಯುವತಿಯರಿಗೆ ಉದ್ಯೋಗಗಳು ದೊರೆಯುತ್ತವೆ. ಲಕ್ಷಾಂತರ ಹುದ್ದೆಗಳನ್ನು ಖಾಲಿಯಿಟ್ಟುಕೊಂಡು ಪ.ಜಾ ಮತ್ತು ಪ.ಪಂ. ಸಮುದಾಯಗಳಿಗೆ ಅನ್ಯಾಯ ಮಾಡಲಾಗಿದೆ. ಇದು ಒಂದು ರಾಜ್ಯದ ಸ್ಥಿತಿ. ದೇಶದ 28 ರಾಜ್ಯಗಳನ್ನು ಹಾಗೂ ಒಕ್ಕೂಟ ಸರ್ಕಾರದಲ್ಲಿನ ಹುದ್ದೆಗಳನ್ನು



ಲೆಕ್ಕ ಹಿಡಿದರೆ ಲಕ್ಷಾಂತರ ದಲಿತರಿಗೆ ಮತ್ತು ಆದಿವಾಸಿಗಳಿಗೆ ಹಾಗೂ ಒಬಿಸಿಗಳಿಗೆ ಜೀವನಾಧಾರ ಒದಗಿಸಬಹುದು. ಸರ್ಕಾರಗಳು ಇದಕ್ಕೆ ಸಿದ್ಧವಿಲ್ಲ. ಇದಕ್ಕೆ ಪ್ರತಿಯಾಗಿ ಸರ್ಕಾರಗಳು ಗುತ್ತಿಗೆ ಮೇಲೆ ಜನರನ್ನು ಕೆಲಸಕ್ಕೆ ನೇಮಿಸಿಕೊಳ್ಳುತ್ತಿವೆ. ಇಲ್ಲಿ ಮೀಸಲಾತಿಯನ್ನು ಅನುಸರಿಸುತ್ತಿಲ್ಲ.

ಈ ಹಿನ್ನೆಲೆಯಲ್ಲಿ ಜಾತಿಗಣತಿಯ ಅಗತ್ಯವನ್ನು ಪರಿಶೀಲಿಸಬೇಕಾಗಿದೆ. ಭಾರತವು ಸಾವಿರಾರು ಶ್ರೇಣೀಕೃತ ಜಾತಿಗಳಿಂದ ಕೂಡಿದ ಸಮಾಜ. ಅಧಿಕಾರ, ಅಂತಸ್ತು, ಭಾಷೆ, ಸ್ಪರ್ಶ-ಅಸ್ಪೃಶ್ಯ, ಪವಿತ್ರ-ಅಪವಿತ್ರ, ಪ್ರದೇಶ ಮುಂತಾದ ಶ್ರೇಣಿಗಳಿಗೆ ಅನುಗುಣವಾಗಿ ಅವುಗಳನ್ನು ಜೋಡಿಸಲಾಗಿದೆ. ಈ ಶ್ರೇಣಿ ವ್ಯವಸ್ಥೆಯಲ್ಲಿ ಬ್ರಾಹ್ಮಣರು ಅತ್ಯಂತ ಉನ್ನತ ಸ್ಥಾನದಲ್ಲಿ, ಕ್ಷತ್ರಿಯರು ನಂತರ ಮತ್ತು ತದನಂತರ ವೈಶ್ಯರು ಇದ್ದಾರೆ. ಶೂದ್ರರು ಹಾಗೂ ದಲಿತರು ಮತ್ತು ಆದಿವಾಸಿಗಳು ಸದರಿ ಶ್ರೇಣಿಯ ತಳಭಾಗದಲ್ಲಿದ್ದಾರೆ. ದ್ವಿಜ ಜಾತಿಗಳು ಮತ್ತು ದಲಿತರು ಹಾಗೂ ಆದಿವಾಸಿಗಳ ನಡುವೆ ಸಾವಿರಾರು ಹಿಂದುಳಿದ ಜಾತಿಗಳಿವೆ. ಈ ಶ್ರೇಣಿಕರಣದಲ್ಲಿ ಬಡತನವು ಮೇಲಿನಿಂದ ಕೆಳಗೆ ಆರೋಹಣ ಕ್ರಮದಲ್ಲಿದ್ದರೆ ಸಿರಿವಂತಿಕೆಯು ಕೆಳಗಿನಿಂದ ಮೇಲೆ ಅವರೋಹಣ ಕ್ರಮದಲ್ಲಿದೆ.

ಸಂವಿಧಾನಾತ್ಮಕ ಹಕ್ಕುಗಳನ್ನು ಪಡೆದಿರುವ ಪ. ಜಾ. ಮತ್ತು ಪ. ಪಂ.ಗಳೇ ಅಭಿವೃದ್ಧಿಯ ಫಲಗಳಿಂದ ವಂಚಿತರಾಗಿತ್ತಿದ್ದರೆ ಕೆಲವು ಒಬಿಸಿ ಜಾತಿಗಳ ಸ್ಥಿತಿಯು ಅತ್ಯಂತ ಹೀನಾಯ ಸ್ಥಿತಿಯಲ್ಲಿದೆ. ಈ ವರ್ಗವು ದೇಶದ ಜನಸಂಖ್ಯೆಯ ಶೇ. 60 ರಿಂದ ಶೇ. 70 ರಷ್ಟಾಗುತ್ತದೆ. ಅಂದರೆ ಕಳೆದ 71 ವರ್ಷಗಳಿಂದ ವಂಚಿತ ಸಮುದಾಯಗಳಿಗೆ ಸಂವಿಧಾನದತ್ತ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯವನ್ನು ದೊರಕಿಸಿಕೊಡುವುದು ನಮಗೆ ಸಾಧ್ಯವಾಗಿಲ್ಲ. ಈ ವರ್ಗಗಳು ಇಂದು ಜಾತಿಗಣತಿ ಬಗ್ಗೆ ಚಳುವಳಿ ನಡೆಸುತ್ತಿವೆ. ದ್ವಿಜ ವರ್ಣಗಳು ಮತ್ತು ಅವರ ಸಂಕೋಲೆಯಲ್ಲಿರುವ ಒಕ್ಕೂಟ ಸರ್ಕಾರವು ಇದಕ್ಕೆ ಸಿದ್ಧವಿಲ್ಲ. ಸಮಾಜದಲ್ಲಿ ಯಾವ ಯಾವ ಜಾತಿಗಳು ಕಳೆದ 70 ವರ್ಷಗಳ ಅಭಿವೃದ್ಧಿ ಪರ್ವದಲ್ಲಿನ ಬೆಳವಣಿಗೆಯಲ್ಲಿ ಯಾವ ಯಾವ ಸ್ಥಾನದಲ್ಲಿವೆ ಎಂಬುದನ್ನು ಖಚಿತಪಡಿಸಿಕೊಳ್ಳುವುದು ಜಾತಿಗಣತಿಯ ಒಂದು ಉದ್ದೇಶವಾಗಿದೆ. ದ್ವಿಜ ಜಾತಿಗಳು ಮತ್ತು ಒಕ್ಕೂಟ ಸರ್ಕಾರ ಒಕ್ಕೊರಲಿನಿಂದ ಜಾತಿಗಣತಿಯು ಜಾತಿ ವ್ಯವಸ್ಥೆಯನ್ನು ಊರ್ಜಿತಗೊಳಿಸುತ್ತದೆ ಎಂಬ ಕಾರಣದ ಮೇಲೆ ತಾತ್ವಿಕವಾಗಿ ಜನಗಣತಿಯನ್ನು ವಿರೋಧಿಸುತ್ತಿವೆ. ಇದೊಂದು ಭ್ರಮಾತ್ಮಕ ನಿಲುವು. ಜಾತಿ ಎಂಬುದು ಒಂದು ವಸ್ತುಸ್ಥಿತಿ. ಜಾತಿಗನುಗುಣವಾಗಿ ಅಭಿವೃದ್ಧಿ ಫಲಗಳು ಹರಿಯುತ್ತಿರುವುದು ಮತ್ತೊಂದು ವಸ್ತುಸ್ಥಿತಿ. ನಮಗೆ ಕಳೆದ 75 ವರ್ಷಗಳಲ್ಲಿ ಅಭಿವೃದ್ಧಿಯನ್ನು ಸಾರ್ವತ್ರೀಕರಣ ಮಾಡುವುದು (ಯೂನಿವರ್ಸಲೈಸ್) ಸಾಧ್ಯವಾಗಿಲ್ಲ. ಕರ್ನಾಟಕದ ವಿವಿಧ ಸಮುದಾಯಗಳ ಬಡತನದ ಪ್ರಮಾಣವನ್ನು ಪರಿಶೀಲಿಸಿದರೆ 'ಅಭಿವೃದ್ಧಿಯು ಜಾತಿಗನುಗುಣವಾಗಿ ಹರಿಯುತ್ತಿರುವುದು' ತಿಳಿಯುತ್ತದೆ.

ರಾಜ್ಯದಲ್ಲಿನ ಪ.ಜಾ. ಮತ್ತು ಪ.ಪಂ. ಸಮುದಾಯಗಳಲ್ಲಿ ಬಹುಮುಖಿ ಬಡತನ ಎದುರಿಸುತ್ತಿರುವವರ ಪ್ರಮಾಣ ಶೇ. 30 ಕ್ಕಿಂತ ಅಧಿಕವಿದ್ದರೆ ಉನ್ನತ ಜಾತಿಗಳಲ್ಲಿ ಇದು ಶೇ.13.5 ರಷ್ಟಿದೆ ಮತ್ತು ಒಬಿಸಿಗಳಲ್ಲಿ ಇದು ಶೇ. 18.7 ರಷ್ಟಿದೆ.

ಇಲ್ಲಿ ನೀಡಿರುವ ಸೂಚಿಗಳೆಲ್ಲವೂ 'ಅಖಂಡ' ಸೂಚಿಗಳು. ಅವುಗಳನ್ನು ಬಿಡಿಸಿ ಒಳರಚನೆಯನ್ನು ನೋಡಿದರೆ ನಮಗೆ ಇನ್ನೂ ಹೆಚ್ಚಿನ ದುಸ್ಥಿತಿಯ ನೆಲೆಗಳು ಕಂಡುಬರುತ್ತವೆ. ಉದಾ. 1941ರಲ್ಲಿ ರಾಜ್ಯದಲ್ಲಿನ ಬ್ರಾಹ್ಮಣರಲ್ಲಿನ ಸಾಕ್ಷರತಾ ಪ್ರಮಾಣ ಶೇ. 87.1 ರಷ್ಟಿದ್ದರೆ ಪ. ಜಾ. ಮತ್ತು ಪ. ಪಂ.ಗಳಲ್ಲಿನ ಸಾಕ್ಷರತೆಯು ಶೇ. 2 ಕ್ಕಿಂತ ಅಧಿಕವಿರಲಿಲ್ಲ(ವಿವರಗಳಿಗೆ ನೋಡಿ: ಜೇಮ್ಸ್ ಮೇನರ್. 1977. ಪೊಲಿಟಿಕಲ್ ಚೇಂಜ್ ಇನ್ ಅನ್ ಇಂಡಿಯನ್ ಸ್ಟೇಟ್. 1917-1955. ಪು.32).

ಬ್ರಾಹ್ಮಣ ವರ್ಣದ ಮತ್ತು ಅತ್ಯಂತ ಉನ್ನತ ಜಾತಿಗಳಿಗೆ ತಮ್ಮ ಆರ್ಥಿಕ, ಸಾಮಾಜಿಕ, ರಾಜಕೀಯ ಪ್ರಾಬಲ್ಯ, ಸಂಪತ್ತಿನ ಕೇಂದ್ರೀಕರಣ ಎಲ್ಲಿ ಜಾತಿಗಣತಿಯಿಂದ

ಪುಟ 11 ನೋಡಿ

ಕೋಷ್ಟಕ 1. ಕರ್ನಾಟಕ ಸರ್ಕಾರದಲ್ಲಿ ಖಾಲಿ ಹುದ್ದೆಗಳು (08.03.2021ರಲ್ಲಿದ್ದಂತೆ)

ವಲಯ	ಮಂಜೂರಾದ ಹುದ್ದೆ	ಖಾಲಿ ಹುದ್ದೆಗಳು	ಭರ್ತಿಯಾದ ಹುದ್ದೆ	ವೇತನ(ಕೋಟಿ ರೂ.ಗಳಲ್ಲಿ)
ರಾಜ್ಯ	374290	138867(ಶೇ.37.10)	235423	18284.47
ಜಿಲ್ಲಾ	394685	114035(ಶೇ.28.89)	280650	20341.57
ಒಟ್ಟು	768975	252902(ಶೇ.32.88)	516073	38626.04

ಮೂಲ: ಕರ್ನಾಟಕ ಸರ್ಕಾರ. 2021. ಬಜೆಟ್ ಸಂಪುಟಗಳು. 2021-22. ಅನುಬಂಧ-'ಬಿ'

ಕೋಷ್ಟಕ 2. ಸಾಮಾಜಿಕ ಗುಂಪುವಾರು ಬಹುಮುಖಿ ಬಡತನ ಸ್ಯೂಚ್ಯಂಕ 2012

ಸಾಮಾಜಿಕ ಗುಂಪುಗಳು	ತಲಾ ಎಣಿಕೆ	ಬಡತನದ ತೀವ್ರತೆ	ಬಹುಮುಖಿ ಬಡತನ ಸೂಚ್ಯಂಕ	ಬಡತನಕ್ಕೆ ಕಾಣಿಕೆ ಪ್ರಮಾಣ
ಪ. ಜಾ.	32.9	0.444	14.6	30.5
ಪ. ಪಂ.	34.7	0.447	15.5	16.3
ಒಬಿಸಿ	18.7	0.425	8.0	43.7
ಇತರರು	13.5	0.414	5.6	9.2
ಒಟ್ಟು	22.4	0.433	9.7	100.00

ಕರ್ನಾಟಕ ಸರ್ಕಾರ 2018. ಕರ್ನಾಟಕ ಮಾನವ ಅಭಿವೃದ್ಧಿ ವರದಿ 2015. ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ. ಬೆಂಗಳೂರು. ಪುಟ: 51.



ಎನ್.ಪಿ.ಆರ್. ಸಮಕಾಲಿಕಗೊಳಿಸುವುದು ಬೇಡವೇ ಬೇಡ



ಜನಗಣತಿಯ ಮೊದಲ ಹಂತ ನಡೆಯಲಿರುವಾಗ ಎನ್‌ಪಿಆರ್ ಅದ್ಯತನ (ಸಮಕಾಲಿಕಗೊಳಿಸುವ) ಕೆಲಸವೂ ಕೂಡ ನಡೆಯುತ್ತದೆ ಎಂದು ಸ್ಪಷ್ಟವಾಗಿದೆ. ಇದು ನಡೆಯಕೂಡದು. ಏಕೆಂದರೆ, ರಾಷ್ಟ್ರೀಯ ಪೌರತ್ವ ರಿಜಿಸ್ಟರ್‌ನ ಸಂಕಲನದ ಮೊದಲ ಹಂತವು ಒಂದು ವಿಭಜನಕಾರಿ ಹಾಗೂ ಹೊರಗಿಡುವ ಪ್ರಕ್ರಿಯೆಯಾಗಲಿದೆ. ಅಸ್ಸಾಂನಲ್ಲಿ ಎನ್‌ಆರ್‌ಸಿ ಸಿದ್ಧಪಡಿಸುವ ವೇಳೆ 19 ಲಕ್ಷ ಜನರನ್ನು ಕೈಬಿಟ್ಟಾಗ ಏನಾಯ್ತು ಎಂಬ ಅನುಭವ ಈಗಾಗಲೇ ನಮ್ಮ ಕಣ್ಣ ಮುಂದಿದೆ. ಅವರೆಲ್ಲರೂ ಎಲ್ಲ ಸಮುದಾಯಗಳಿಗೆ ಸೇರಿದ ಬಡವರಾಗಿದ್ದು ಸರ್ಕಾರ ಕೇಳಿದ ದಾಖಲೆ ಪತ್ರಗಳನ್ನು ಸಲ್ಲಿಸುವ ಸಾಮರ್ಥ್ಯ ಇಲ್ಲದವರಾಗಿದ್ದರು.



*** ಪ್ರಕಾಶ್ ಕಾರಟ್**

ರಾಷ್ಟ್ರೀಯ ಜನಸಂಖ್ಯಾ ನೋಂದಣಿ (ನ್ಯಾಷನಲ್ ಪಾಪ್ಯುಲೇಶನ್ ರಿಜಿಸ್ಟರ್–ಎನ್‌ಪಿಆರ್)ಯು ಅದ್ಯತನ(ಸಮಕಾಲಿಕಗೊಳಿಸುವ) ವಿಚಾರ ಮತ್ತೆ 2021ರ ಜನಗಣತಿಯ ಕಾರ್ಯಸೂಚಿಗೆ ಮರಳಿದೆ. ಜನಗಣತಿ ಅಧಿಕಾರಿಗಳಿಗೆ ನೀಡುವ ಕೈಪಿಡಿಯ ಭಾಗವಾಗಿ ಸಮಕಾಲಿಕಗೊಳಿಸುವ ನಮೂನೆ ಪತ್ರವನ್ನು (ಅಪ್‌ಡೇಷನ್ ಫಾರ್ಮ್) ಜನಗಣತಿ ಅಧಿಕಾರಿಗಳಿಗೆ ನೀಡಲಾಗಿದೆ ಎಂದು ಮಾಧ್ಯಮ ವರದಿಯೊಂದು ತಿಳಿಸಿದೆ. ಈ ಕೈಪಿಡಿಯನ್ನು ಆಗಸ್ಟ್ 18ರಂದು ಆನ್‌ಲೈನ್ ವ್ಯವಸ್ಥೆ ಮೂಲಕ ರಚಿಸಿ ಎಲ್ಲ ರಾಜ್ಯಗಳಿಗೆ ಕೊಡಲಾಗಿತ್ತು.

ಮಾಧ್ಯಮ ವರದಿಯ ಪ್ರಕಾರ, ಭಾರತದ ಮಹಾ ನೋಂದಣಾಧಿಕಾರಿ (ಆರ್‌ಜಿಐ) ಜಿಲ್ಲಾ ಜನಗಣತಿ ಅಧಿಕಾರಿಗಳಿಗೆ ನೀಡಿರುವ ಈ ದಸ್ತಾವೇಜಿನಲ್ಲಿ ಕುಟುಂಬದ ಎಲ್ಲ ಸದಸ್ಯರಿಗೆ ಸಂಬಂಧಿಸಿ 14 ಪ್ರಮಾಣಾಂಶಗಳಲ್ಲಿ ವಿವರಗಳನ್ನು ಸಂಗ್ರಹಿಸುವ ನಮೂನೆ ಪತ್ರವಿದೆ. ಇದರಲ್ಲಿ 2010ರಲ್ಲಿ ಪ್ರಥಮ ಬಾರಿಗೆ ಸಂಗ್ರಹಿಸಿ, 2015ರಲ್ಲಿ ಸಮಕಾಲಿಕಗೊಳಿಸಲಾಗಿರುವ ಕುಟುಂಬದ ಎಲ್ಲ ಸದಸ್ಯರ ಎನ್‌ಪಿಆರ್ ದತ್ತಾಂಶ ಸಂಚಯು(ಡೇಟಾಬೇಸ್)ವನ್ನು ಸಮಕಾಲಿಕಗೊಳಿಸಲಾಗುತ್ತದೆ. ಜನಗಣತಿಯ ಮೊದಲ ಹಂತದಲ್ಲಿ ಮನೆಗಳನ್ನು ಪಟ್ಟಿ ಮಾಡುವುದು ಹಾಗೂ ಮನೆಗಳ ಗಣತಿ ನಡೆಸುವುದು ಸೇರಿರುತ್ತದೆ. ಅವನ್ನು ಕೂಡ ಎನ್‌ಪಿಆರ್‌ನ್ನು ಸಮಕಾಲಿಕಗೊಳಿಸಲು ಬಳಸಲಾಗುತ್ತದೆ. 2020ರ ಏಪ್ರಿಲ್‌ನಿಂದ ಸೆಪ್ಟೆಂಬರ್ ವರೆಗೆ ಅವೆರಡನ್ನೂ ಏಕಕಾಲದಲ್ಲಿ ನಡೆಸಲು ಈ ಮುಂಚೆ ನಿರ್ಧರಿಸಲಾಗಿತ್ತು. ಆದರೆ ಕೊವಿಡ್ ಸಾಂಕ್ರಾಮಿಕದ ಕಾರಣಕ್ಕೆ ಅದನ್ನು ಅನಿರ್ದಿಷ್ಟ ಕಾಲದ ವರೆಗೆ ಮುಂದೂಡಲಾಯಿತು.

ಮೋದಿ ಸರ್ಕಾರ ಮುಂದಿನ ದಿನಗಳಲ್ಲಿ ಜನಗಣತಿಯ ಮೊದಲ ಹಂತದೊಂದಿಗೆ ಎನ್‌ಪಿಆರ್ ಸಮೀಕ್ಷೆಯನ್ನು ಕೂಡ ನಡೆಸಲಿದೆ ಎನ್ನುವುದು ಇದರ ಅರ್ಥವಾಗಿದೆ. ಮನೆ ಮನೆ ಸಮೀಕ್ಷೆಯ ಅವಧಿಯನ್ನು ಸರ್ಕಾರ ಇನ್ನೂ ಪ್ರಕಟಿಸಿಲ್ಲ.

ಆಕ್ಷೇಪವೇನು?

ಎನ್‌ಪಿಆರ್ ಸಮಕಾಲಿಕಗೊಳಿಸುವುದಕ್ಕೆ ಇರುವ ಆಕ್ಷೇಪವಾದರೂ ಏನು? 2019ರ ಡಿಸೆಂಬರ್‌ನಲ್ಲಿ ಸಂಸತ್ತು ಅಂಗೀಕರಿಸಿದ ಪೌರತ್ವ ತಿದ್ದುಪಡಿ ಕಾನೂನಿಗೆ (ಸಿಎಎ) ವ್ಯಾಪಕ ಪ್ರತಿರೋಧ ವ್ಯಕ್ತವಾಗಿದ್ದನ್ನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬೇಕಾಗುತ್ತದೆ. ಸಿಎಎ ಮತ್ತು ಎನ್‌ಪಿಆರ್ ಹಾಗೂ ರಾಷ್ಟ್ರೀಯ ನಾಗರಿಕ ನೋಂದಣಿಗೆ (ಎನ್‌ಆರ್‌ಸಿ) ಸಂಬಂಧ ಕಲ್ಪಿಸುವುದಕ್ಕೆ ವಿರೋಧ ವ್ಯಕ್ತವಾಗಿತ್ತು. ಸಿಎಎ ಮತ್ತು ಎನ್‌ಆರ್‌ಸಿ ಅಂತರ್‌ಸಂಬಂಧವಿರುವ ಎರಡು ಕ್ರಮಗಳಾಗಿದ್ದು ಎನ್‌ಆರ್‌ಸಿ ಸಿದ್ಧಪಡಿಸಲು ಎನ್‌ಪಿಆರ್ ಮೊದಲ ಹಂತವಾಗಿದೆ.

ಪೌರತ್ವದ ವ್ಯಾಖ್ಯಾನವನ್ನೇ ಬದಲಾಯಿಸುವ ಮೋದಿ ಸರ್ಕಾರದ ಯೋಜನೆಗೂ ಈ ಮೂರಕ್ಕೂ ಸಂಬಂಧವಿದೆ. ನಿರ್ದಿಷ್ಟವಾಗಿ ಮುಸ್ಲಿಮರನ್ನು, ಪೌರತ್ವ ಪಡೆಯುವುದರಿಂದ ಹೊರತುಪಡಿಸುವುದು ಸಿಎಎ ಉದ್ದೇಶವಾಗಿದೆ. ನೆರೆಯ ದೇಶಗಳಿಂದ ದಸ್ತಾವೇಜುಗಳಿಲ್ಲದೆ ಬರುವ ಹಿಂದೂ, ಸಿಖ್, ಕ್ರೈಸ್ತ ಅಥವಾ ಬೌದ್ಧರಂತಲ್ಲದೆ, ಮುಸ್ಲಿಮರಿಗೆ ಮಾತ್ರ ಪೌರತ್ವ ಕೊಡದಿರುವುದು ಇದರ ಹುನ್ನಾರವಾಗಿದೆ. ಆ ಮೂಲಕ ಪೌರತ್ವಕ್ಕೆ ಧರ್ಮ ಆಧರಿತ ಮಾನದಂಡವನ್ನು ತರಲಾಗುತ್ತಿದೆ. ದೇಶದೊಳಗೆ ತಮ್ಮ ನಾಗರಿಕರ ಹಕ್ಕುಗಳನ್ನು ಚಲಾಯಿಸುತ್ತ ಬಂದಿರುವ ತಥಾಕಥಿತ ಮುಸ್ಲಿಂ “ನುಸುಳುಕೋರರನ್ನು’ ತೊಲಗಿಸುವುದು ಎನ್‌ಆರ್‌ಸಿಯ ಉದ್ದೇಶವಾಗಿದೆ.

ಸಿಎಎ ಮತ್ತು ಎನ್‌ಆರ್‌ಸಿ ನಡುವೆ ಯಾವುದೇ ಸಂಬಂಧವಿಲ್ಲ ಎಂದು ಹೇಳಲು ಕೇಂದ್ರ ಗೃಹ ಸಚಿವ ಅಮಿತ್ ಷಾ ಮತ್ತು ಸರ್ಕಾರದ ಇತರ ಅಧಿಕಾರಿಗಳು ಪ್ರಯತ್ನಿಸಿದ್ದಾರೆ. ಎನ್‌ಪಿಆರ್‌ಗೂ ಎನ್‌ಆರ್‌ಸಿಗೂ ಯಾವುದೇ ಸಂಬಂಧವಿಲ್ಲ ಎಂದೂ ಹೇಳುವ ಮಟ್ಟಿಗೂ ಅವರು ಹೋಗಿದ್ದಾರೆ. ಆದರೆ ಈ ಎಲ್ಲ ಪ್ರತಿಪಾದನೆಗಳು ಅಪ್ಪಟ ಸುಳ್ಳು ಎನ್ನುವುದನ್ನು ಸಂಸತ್ತಿನಲ್ಲಿ ಅಮಿತ್ ಷಾ ನೀಡಿದ ಹೇಳಿಕೆಗಳು ಹಾಗೂ ಕೇಂದ್ರ ಗೃಹ ಸಚಿವಾಲಯದ ವರದಿಗಳಲ್ಲಿ ಸ್ಪಷ್ಟವಾಗಿ ನಮೂದಿಸಿರುವ ಎನ್‌ಪಿಆರ್ ಮತ್ತು ಎನ್‌ಸಿಆರ್ ನಡುವಿನ ಸಂಬಂಧಗಳೇ ಬಯಲಿಗೆಳೆದಿವೆ.

2003ರಲ್ಲಿ ಅಂದಿನ ವಾಜಪೇಯಿ ಸರ್ಕಾರ 1955ರ ಪೌರತ್ವ ಕಾಯ್ದೆಗೆ ತಿದ್ದುಪಡಿ ಮಾಡಿ ನಿಯಮಗಳನ್ನು ರೂಪಿಸಿ ಎನ್‌ಆರ್‌ಸಿ ಮತ್ತು ಎನ್‌ಪಿಆರ್ ಪರಿಕಲ್ಪನೆಗಳನ್ನು ಪರಿಚಯಿಸಿತು. ಎನ್‌ಪಿಆರ್ ಪರಿಶೀಲಿಸಿದ ನಂತರವೇ ಎನ್‌ಆರ್‌ಸಿಯನ್ನು ಅಂತಿಮಗೊಳಿಸಲಾಗುತ್ತದೆ ಎಂದು ನಿಯಮಗಳು ಸ್ಪಷ್ಟಪಡಿಸಿದ್ದವು. ಗೃಹ ಸಚಿವಾಲಯದ ಮಾತುಗಳಲ್ಲೇ ಹೇಳುವುದಾದರೆ ರಾಷ್ಟ್ರೀಯ ಜನಸಂಖ್ಯಾ ನೋಂದಣಿಯು (ಎನ್‌ಪಿಆರ್) ಎನ್‌ಆರ್‌ಸಿಯ ಮೊದಲ ಹಂತವಾಗಿದೆ.

ಕೈಪಿಡಿಯಲ್ಲಿ ಅಳವಡಿಸಲಾಗಿರುವ ಎನ್‌ಪಿಆರ್ ಪ್ರಶ್ನಾವಳಿಯು ಕಳೆದ ವರ್ಷ ಅಂತಿಮಗೊಳಿಸಲಾದ 14 ಪ್ರಮಾಣಾಂಶಗಳ ರೀತಿಯಲ್ಲೇ ಇದೆ. ತಂದೆ–ತಾಯಿಯ ಜನ್ಮ ದಿನಾಂಕ ಹಾಗೂ ಸ್ಥಳ, ಮಾತೃ ಭಾಷೆ, ಆಧಾರ್ ಕಾರ್ಡ್, ಪಾಸ್‌ಪೋರ್ಟ್, ವೋಟರ್ ಐಡಿ ಕಾರ್ಡ್ ಮುಂತಾದ ಗುರುತು ಸಾಬೀತು ಪಡಿಸುವ ದಾಖಲೆಪತ್ರಗಳನ್ನು ಪ್ರಶ್ನಾವಳಿ ಒಳಗೊಂಡಿದೆ. ಸ್ಥಳೀಯ ಜನಸಂಖ್ಯಾ ರಿಜಿಸ್ಟರ್‌ಅನ್ನು ಸಿದ್ಧಪಡಿಸುವಾಗ ‘ಅನುಮಾನಾಸ್ಪದ’ ನಾಗರಿಕ ಎಂದು ಗುರುತಿಸಲು ಅವಕಾಶವನ್ನು ತಾಲೂಕು ಮಟ್ಟದ ಅಧಿಕಾರಿಗೆ ಈ ನಿಯಮಗಳಲ್ಲಿ ಕಲ್ಪಿಸಲಾಗಿದೆ. ಇಂತಹ ವ್ಯಕ್ತಿ ತಾನು ಭಾರತೀಯ ಪ್ರಜೆ ಎನ್ನುವುದನ್ನು ಸಾಬೀತುಪಡಿಸಲು ಪುರಾವೆಗಳನ್ನು ಸಲ್ಲಿಸಬೇಕಾಗುತ್ತದೆ.

ವಿಸ್ತರಿಸಿದ ಚಳವಳಿ

ಸಿಎಎ ವಿರುದ್ಧ ಆರಂಭವಾಗಿದ್ದ ಚಳವಳಿಯು ಎನ್‌ಆರ್‌ಸಿ ವಿರುದ್ಧವೂ ವಿಸ್ತರಿಸಿತ್ತು. ಅವೆರಡೂ ಹಿಂದುತ್ವ ಸಿದ್ಧಾಂತದ ಆಧಾರದಲ್ಲಿ ಕೆಲವರನ್ನು ಪೌರತ್ವದಿಂದ ಹೊರಗಿಡುವ ಅವಳಿ ಕ್ರಮಗಳಾದ್ದರಿಂದ ಚಳವಳಿ ವಿಸ್ತರಣೆಯಾಗಿತ್ತು. ಎನ್‌ಪಿಆರ್ ನ್ನು ಸಮಕಾಲಿಕಗೊಳಿಸಲು 2019ರಲ್ಲಿ ಕೇಂದ್ರ ಸಚಿವ ಸಂಪುಟ ನಿರ್ಧರಿಸಿ ಅದಕ್ಕಾಗಿ 8,500 ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿತ್ತು. ಆಗ ಸಿಪಿಐ(ಎಂ) ಇದನ್ನು ಪ್ರಬಲವಾಗಿ ವಿರೋಧಿಸಿತ್ತು. ತಮ್ಮ ರಾಜ್ಯಗಳಲ್ಲಿ ಎನ್‌ಆರ್‌ಸಿ ಅನುಷ್ಠಾನ ಮಾಡುವುದಿಲ್ಲ ಎಂದು ಘೋಷಿಸಿದ್ದ ಮುಖ್ಯಮಂತ್ರಿಗಳಿಗೆ ತಮ್ಮ ರಾಜ್ಯಗಳಲ್ಲಿ ಎನ್‌ಪಿಆರ್ ಸಮೀಕ್ಷೆ ಪ್ರಕ್ರಿಯೆಯನ್ನು ನಿಲ್ಲಿಸುವಂತೆಯೂ ಕ್ರಮಗಳನ್ನು ಕೈಗೊಳ್ಳುವಂತೆ ಸಿಪಿಐ (ಎಂ) ಕರೆ ನೀಡಿತ್ತು. ತಮ್ಮ ರಾಜ್ಯಗಳಲ್ಲಿ ಎನ್‌ಆರ್‌ಸಿ ಸಂಕಲಿಸುವುದಿಲ್ಲ ಎಂದು ಆ ವರ್ಷ ಡಿಸೆಂಬರ್ ಹೊತ್ತಿಗೆ 13 ಮುಖ್ಯಮಂತ್ರಿಗಳು ಘೋಷಿಸಿದ್ದರು. ತಮ್ಮ ರಾಜ್ಯಗಳಲ್ಲಿ ಎನ್‌ಪಿಆರ್ ಅದ್ಯತನ ಪ್ರಕ್ರಿಯೆಯನ್ನು ಕೈಗೆತ್ತಿಕೊಳ್ಳುವುದಿಲ್ಲ ಎಂದು ಕೇರಳ ಮತ್ತು ಬಂಗಾಳ ಮುಖ್ಯಮಂತ್ರಿಗಳು ಪ್ರಕಟಿಸಿದ್ದರು. ಕೇರಳದ ಎಲ್‌ಡಿಎಫ್ ಸರಕಾರವಂತೂ ರಾಜ್ಯದಲ್ಲಿ ಎನ್‌ಪಿಆರ್ ಪ್ರಕ್ರಿಯೆಯನ್ನು ಅಮಾನತುಗೊಳಿಸಲಾಗುವುದು, ಜನಗಣತಿಯನ್ನು ಮಾತ್ರವೇ ನಡೆಸಲಾಗುವುದು ಎಂದು ಕೇರಳದ ಅಧಿಸೂಚನೆಯನ್ನೇ ಹೊರಡಿಸಿ ಈ ವಿಚಾರದಲ್ಲಿ ನೇತೃತ್ವ ನೀಡಿತು.

ಅಸ್ಸಾಂ ಅನುಭವ ನೆನಪಿಸಿಕೊಂಡು

ಈ ವಿಚಾರ ಮಹಾ ಸಾಂಕ್ರಾಮಿಕದಿಂದಾಗಿ ಇಡೀ ಜನಗಣತಿ–ಎನ್‌ಪಿಆರ್ ಪ್ರಕ್ರಿಯೆಯನ್ನೇ ಅನಿರ್ದಿಷ್ಟವಾಗಿ ಮುಂದೂಡಿದ್ದರಿಂದ ಜನರ ಮನಸ್ಸಿನಿಂದ ದೂರ ಸರಿದಿತ್ತು. ಈಗ ಜನಗಣತಿಯ ಮೊದಲ ಹಂತ ನಡೆಯಲಿರುವಾಗ ಎನ್‌ಪಿಆರ್ ಅದ್ಯತನ ಕೆಲಸವೂ ಕೂಡ ನಡೆಯುತ್ತದೆ ಎಂದು ಸ್ಪಷ್ಟವಾಗಿದೆ.

ಇದು ನಡೆಯಕೂಡದು. ಏಕೆಂದರೆ, ರಾಷ್ಟ್ರೀಯ ಪೌರತ್ವ ರಿಜಿಸ್ಟರ್‌ನ ಸಂಕಲನದ ಮೊದಲ ಹಂತವು ಒಂದು ವಿಭಜನಕಾರಿ ಹಾಗೂ ಹೊರಗಿಡುವ ಪ್ರಕ್ರಿಯೆಯಾಗಲಿದೆ. ಅಸ್ಸಾಂನಲ್ಲಿ ಎನ್‌ಆರ್‌ಸಿ ಸಿದ್ಧಪಡಿಸುವ ವೇಳೆ 19 ಲಕ್ಷ ಜನರನ್ನು ಕೈಬಿಟ್ಟಾಗ ಏನಾಯ್ತು ಎಂಬ ಅನುಭವ ಈಗಾಗಲೇ ನಮ್ಮ ಕಣ್ಣ ಮುಂದಿದೆ. ಅವರೆಲ್ಲರೂ ಎಲ್ಲ ಸಮುದಾಯಗಳಿಗೆ ಸೇರಿದ ಬಡವರಾಗಿದ್ದು ಸರ್ಕಾರ ಕೇಳಿದ ದಾಖಲೆ ಪತ್ರಗಳನ್ನು ಸಲ್ಲಿಸುವ ಸಾಮರ್ಥ್ಯ ಇಲ್ಲದವರಾಗಿದ್ದರು. ಎನ್‌ಆರ್‌ಸಿಯನ್ನು ವಿರೋಧಿಸುವ ರಾಜ್ಯ ಸರ್ಕಾರಗಳು ಎನ್‌ಪಿಆರ್ ಅದ್ಯತನ ಪ್ರಕ್ರಿಯೆ ನಡೆಯದಂತೆ ನೋಡಿಕೊಳ್ಳಬೇಕಾಗಿದೆ. ಜನಗಣತಿ ಮತ್ತು ಎನ್‌ಪಿಆರ್ ಸಮಕಾಲಿಕಗೊಳಿಸುವ ಕೆಲಸ ಮಾಡಬೇಕಾದವರು ರಾಜ್ಯ ಸರ್ಕಾರಗಳ ಸಿಬ್ಬಂದಿ. ಕೇರಳದಂತೆ, ಸಂಬಂಧಪಟ್ಟ ರಾಜ್ಯ ಸರ್ಕಾರಗಳು ಜನಗಣತಿಗೆ ಮಾತ್ರವೇ ಅನುಕೂಲ ಕಲ್ಪಿಸಬೇಕೇ ಹೊರತು ಎನ್‌ಪಿಆರ್ ಅದ್ಯತನಕ್ಕಲ್ಲ.

ಸರ್ಕಾರವು ಎನ್‌ಪಿಆರ್ ಯೋಜನೆ ಬಗ್ಗೆ ಹಠ ಹಿಡಿದರೆ ಎನ್‌ಪಿಆರ್ ಸಮಕಾಲಿಕಗೊಳಿಸುವ ಪ್ರಕ್ರಿಯೆಯಲ್ಲಿ ಸಹಕರಿಸಬಾರದು, ಜನಗಣತಿಗೆ ಸಂಬಂಧಿಸಿದ ಪ್ರಶ್ನಾವಳಿಗೆ ಮಾತ್ರವೇ ಉತ್ತರಿಸಬೇಕು ಎಂದು ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಜನರಿಗೆ ಮನವಿ ಮಾಡಬೇಕು.

ಅನು: ವಿಶ್ವ



ಪೌರತ್ವಕ್ಕೆ ಧರ್ಮ ಆಧರಿತ ಮಾನದಂಡವನ್ನು ತರುತ್ತಿರುವ ಪೌರತ್ವ ತಿದ್ದುಪಡಿ ಕಾಯ್ದೆಯ ವಿರುದ್ಧ ದಿಲ್ಲಿಯ ಶಾಹೀನ್‌ಬಾಗ್‌ನ ಹೋರಾಟ



ಕೇಂದ್ರ ಸರಕಾರದ ಖಾಸಗೀಕರಣ ನೀತಿಗೆ ವಿರೋಧ

ಬೆಳಗಾವಿ ಜಿಲ್ಲಾ ಸಿ.ಪಿ.ಐ (ಎಂ) 8 ನೇ ಜಿಲ್ಲಾ ಸಮ್ಮೇಳನ

23 ಅಕ್ಟೋಬರ್ 2021 ರಂದು ಬೆಳಿಗ್ಗೆ ಕಾ ॥ ಖರಾಡೆ ರವರ ಪ್ಲಾಟಿನಲ್ಲಿ ಸಭೆ ನಡೆದು, ಪಕ್ಷದ ಕಚೇರಿಗೆ ಎರಡು ಪ್ಲಾಟಗಳನ್ನು ದಾನ ನೀಡಿದರು. ಈ ಸಂದರ್ಭದಲ್ಲಿ ಸಭೆ ನಡೆದು ಅಲ್ಲಿಂದ ಬೃಹತ್ ಮೆರವಣಿಗೆ ಹೊರಡಿಸಿ ಸಂಭಾಜಿ ಚೌಕರವರಿಗೆ ಬಂದು, ಶ್ರೀ ಗುಜ್ಜರ ರವರ ಮನೆಯಿಂದ ಇನ್ನೊಂದು ಬೃಹತ್ ಮೆರವಣಿಗೆ ಹೊರಡಿಸಿ ಸಂಭಾಜಿ ಚೌಕ ತಲುಪಿ ಎರಡೂ ಸೇರಿಕೊಂಡು ನಿಪ್ಪಾಣಿಯಲ್ಲಿ ಕೆಂಬಾವುಟದ ಬೃಹತ್ ಮೆರವಣಿಗೆ ನಡೆಸಿ ನೆಹರೂ ಚೌಕಿನಲ್ಲಿ ಸಮಾವೇಶಗೊಂಡು ಬಹಿರಂಗ ಸಭೆ ನಡೆಸಲಾಯಿತು.

ರೈತರ ಬೆಳೆಗಳಿಗೆ ಬೆಂಬಲ ನೀಡುವುದಾಗಿ ಭರವಸೆ ನೀಡಿದ ಸ್ವಾಮಿನಾಥನ್ ವರದಿ ಜಾರಿ ಮಾಡಲು ಒಪ್ಪಿಕೊಂಡ ಪ್ರಧಾನಿಯವರು ಇವತ್ತು ರೈತರಿಗೆ ಮಾರಕವಾಗಲಿರುವ ಮೂರು ಕೃಷಿ ಕಾನೂನುಗಳನ್ನು ತಂದು ರೈತರ ಜೀವನದಲ್ಲಿ ಚೆಲ್ಲಾಟವಾಡುತ್ತಿದ್ದಾರೆ. ಕಳೆದ 10 ತಿಂಗಳಿನಿಂದ ದೆಹಲಿ ಗಡಿಯಲ್ಲಿ ರೈತರು ಹೋರಾಟ ನಡೆಸುತ್ತಿದ್ದಾರೆ. ಸುಮಾರು 700 ಜನ ರೈತರು ನಿಧನರಾಗಿದ್ದಾರೆ. ಸೌಜನ್ಯಕ್ಕಾದರೂ ನಮ್ಮ ಪ್ರಧಾನಿಯವರು ರೈತರು ಹೋರಾಟ ಮಾಡುತ್ತಿರುವ ಸ್ಥಳಕ್ಕೆ ಭೇಟ್ಟಿ ಕೊಡದೇ ಇರುವುದು ಖಂಡನೀಯ ಎಂದು ಅಕ್ಟೋಬರ 23 ರಂದು ನಿಪ್ಪಾಣಿಯಲ್ಲಿ ನಡೆದ ಸಿ.ಪಿ.ಐ (ಎಂ) 8 ನೇ ಜಿಲ್ಲಾ ಸಮ್ಮೇಳನದ ಭಾಗವಾಗಿ ನಡೆದ ಬಹಿರಂಗ ಸಭೆಯನ್ನು ಉದ್ಘಾಟಿಸಿ ಸಿ.ಪಿ.ಐ (ಎಂ) ಪಕ್ಷದ ರಾಜ್ಯ ಕೇಂದ್ರ ಸಮಿತಿಯ ಸದಸ್ಯರಾದ ಕಾ ॥ ಎಸ್. ವರಲಕ್ಷ್ಮೀ ರವರು ಖೇದ ವ್ಯಕ್ತ ಪಡಿಸಿದರು.

ಬೆಲೆ ಏರಿಕೆ ವಿರೋಧಿಸಿ, ಬೆಂಬಲ ಬೆಲೆಗಾಗಿ ಕಾರ್ಮಿಕರು, ರೈತರು ಹೋರಾಟ ಮಾಡಿದರೆ ದೇಶದ್ರೋಹಿ ಎಂದು ಪಟ್ಟ ಕೊಡುವ ಕೇಂದ್ರ ಸರಕಾರದ ನೀತಿ ನಾವು ಖಂಡಿಸುತ್ತೇವೆ. ಹೋರಾಟದ ಹಕ್ಕು, ಮಾತನಾಡುವ ಹಕ್ಕು ನಮಗೆ ನಮ್ಮ ಸಂವಿಧಾನ ನೀಡಿ. ನಾವೇ ದೇಶಪ್ರೇಮಿಗಳು ಎಂದು ಹೇಳಲು ಹೊರಟಿರುವ ಬಿ.ಜೆ.ಪಿ ಯವರು ದೇಶವೇ ಖಾಸಗಿಕರಣ ಮಾಡಲು ಹೊರಟಿರುವುದು ವಿಷಾಧನೀಯ. ದಲಿತರ ಮೇಲೆ, ಮಹಿಳೆಯರ ಮೇಲೆ, ಅಲ್ಪಸಂಖ್ಯಾತರ ಮೇಲೆ ದಿನಂಪ್ರತಿ ಅತ್ಯಾಚಾರ, ಆಕ್ರಮಗಳು, ಹಲ್ಲೆಗಳು ನಡೆಯುತ್ತಿದ್ದರು ಕೇಂದ್ರ ಸರಕಾರ ಮೌನ ಏಕೆ ವಹಿಸಿದೆ ಎಂದು ಕೊಲ್ಲಾಪೂರ (ಮಹಾರಾಷ್ಟ್ರ) ದ ಸಿ.ಪಿ.ಐ(ಎಂ) ಪಕ್ಷದ ಮುಖಂಡರಾದ ಕಾ ॥ ಉದಯ ನಾರಕರರವರು ಆಕ್ರೋಶ ವ್ಯಕ್ತಪಡಿಸಿದರು.

ಕೇಂದ್ರ ಸರಕಾರ ಆಡಳಿತಕ್ಕೆ ಬಂದರೆ ರೈತರ ಬೆಳೆಗಳಿಗೆ ಬೆಂಬಲ ಬೆಲೆ ನೀಡುವುದಾಗಿ, ಕಾರ್ಮಿಕರಿಗೆ ಹೆಚ್ಚಿನ ಸೌಲಭ್ಯ ನೀಡುವುದಾಗಿ, ಬೆಲೆಗಳನ್ನು ನಿಯಂತ್ರಣದಲ್ಲಿ ತರುವುದಾಗಿ 2014 ರಲ್ಲಿ ಭಾಷಣ ಬೀಗಿದ ನರೇಂದ್ರ ಮೋದಿಯವರು ಇವತ್ತು ಕಾರ್ಪೋರೇಟ ಕಂಪನಿಗಳ ಪರ ನಿಂತಿದ್ದು ಖಂಡನೀಯ. "ಅಚ್ಚೇ ದಿನ ಆಯೇಂಗೇ" ಎಂದು ಬೋಗಸ್ ಹೇಳಿದ ಪ್ರಧಾನಿಯವರು ದಿನದಿಂದ ದಿನಕ್ಕೆ ಬೆಲೆಗಳು ಏರಿಸುತ್ತಲೇ ಇದ್ದಾರೆ. ದೇಶದ ಎಲ್ಲ ಸಾರ್ವಜನಿಕರ ರಂಗಗಳಲ್ಲಿ ಖಾಸಗಿಕರಣ ಮಾಡಿ ಇಡೀ ದೇಶವೇ ಮಾರಾಟ ಮಾಡಲು ಹೊರಟಿದ್ದಾರೆ. ಬಡವರಿಗೆ ಅಚ್ಛೇ ದಿನ ನೀಡದ ಪ್ರಧಾನಿಯವರಿಗೆ ಮುಂದಿನ ದಿನಗಳಲ್ಲಿ ಬುರೇದಿನ್ ಬರಲಿದೆ. ಪಕ್ಷದ ಜಿಲ್ಲಾ ಕಾರ್ಯದರ್ಶಿಯಾದ ಜಿ.ಎಂ. ಜೈನೇಖಾನ ಪ್ರಾಸ್ತಾವಿಕವಾಗಿ ಮಾತನಾಡಿದರು.

ಸಂಪತ್ತನ್ನು ಸೃಷ್ಟಿ ಮಾಡುತ್ತಿರುವ ಕಾರ್ಮಿಕರ ಬದುಕನ್ನು ಕೇಂದ್ರದ ಮೋದಿ ಸರಕಾರ ಕಾನೂನುಗಳನ್ನು ತಿದ್ದುಪಡಿ ಕಾರ್ಮಿಕರಿಗೆ ಸಿಗುತ್ತಿರುವ ಸೌಲಭ್ಯಗಳನ್ನು ಕಸಿದುಕೊಳ್ಳುತ್ತಿದೆ. ಅದೇ ರೀತಿ ದೇಶಕ್ಕೆ ಅನ್ನ ನೀಡುತ್ತಿರುವ ಅನ್ನದಾತನು ತಾನು ಬೆಳೆದ ಬೆಲೆಗೆ ಸರಿಯಾದ ಬೆಲೆ ನೀಡದೇ ರೈತರನ್ನು ಮತ್ತಷ್ಟು ಕಷ್ಟದಲ್ಲಿ ನೂಕಿದ್ದಾರೆ. ಇಂತಹ ಸರಕಾರಕ್ಕೆ ಮುಂದಿನ ದಿನಗಳಲ್ಲಿ ರೈತ ಕಾರ್ಮಿಕರು ಪಾಠ ಕಲಿಸಬೇಕೆಂದು ಸಿ.ಪಿ.ಐ(ಎಂ) ಪಕ್ಷದ ರಾಜ್ಯ ಸಮಿತಿಯ ಸದಸ್ಯರಾದ ಕಾ॥ ಬಾಲಕೃಷ್ಣಶೆಟ್ಟಿ ರವರು ಮಾತನಾಡಿದರು.

ಸಿ.ಪಿ,ಐ (ಎಂ) ಪಕ್ಷದ ನಿಪ್ಪಾಣಿ ತಾಲೂಕಾ ಕಾರ್ಯದರ್ಶಿ ದಿಲೀಪ ವಾರ್ಕೆ ಸ್ವಾಗತಿಸಿ ಕೊನೆಯಲ್ಲಿ ವಂದಿಸಿದರು. ಧನಾಜಿ ಕಂಬಳೆ, ಪ್ರಸನ್ ಕುಮಾರ ಗುಜ್ಜಾರ, ಪರವಿನ್ ನಾಯಿಕವಾಡೆ, ಶಾಹೀರಾ ಶೇಖ, ಮುಂತಾದವರು ಬಹಿರಂಗ ಸಭೆಯಲ್ಲಿ ಉಪಸ್ಥಿತರಿದ್ದರು.

ಬಹಿರಂಗ ಸಭೆ ಮಗಿದ ತಕ್ಷಣ ಮಧ್ಯಾಹ್ನ 4–00 ಘಂಟೆಗೆ ಹಿರಿಯರಾದ ಕಾ॥ ಸಿ.ಎ. ಖರಾಡೆಯವರು ಧ್ವಜಾರೋಹಣ ಮಾಡುವುದರ ಮೂಲಕ ಸಮ್ಮೇಳನಗಳ ಕಲಾಪಗಳಿಗೆ ಚಾಲನೆ ನೀಡಿದರು.

ಜಿಲ್ಲಾ ಸಮಿತಿ ಆಯ್ಕೆ:

ಈ ಹಿಂದೆ ಇದ್ದ 10 ಜನ ಸಂಗಾತಿಗಳನ್ನು ಸಮಿತಿಯಲ್ಲಿ ಮುಂದುವರೆಸಿ ಅದರಲ್ಲಿ ಹಿರಿಯರಾದ ಕಾ॥ ಸಿ.ಎ. ಕರಾಡೆ ರವರು ವಿಶೇಷ ಅಹ್ವಾನಿತರೆಂದು ಆಯ್ಕೆಯಾದರು. ಅದರ ಜೊತೆಯಲ್ಲಿ 5 ಜನ ಸಂಗಾತಿಗಳನ್ನು ಹೊಸದಾಗಿ ಸೇರ್ಪಡೆ ಮಾಡಲಾಯಿತು.

ಕಾರ್ಯದರ್ಶಿ ಆಯ್ಕೆ ನಡೆದು ಮತ್ತೇ ಜಿ.ಎಂ. ಜೈನೇಖಾನ ರವರನ್ನು ಕಾರ್ಯದರ್ಶಿ ಎಂದು ಆಯ್ಕೆ ಮಾಡಲಾಯಿತು. ಜಿಲ್ಲಾ ಸಮಿತಿ ಸದಸ್ಯರಾದ ವಿವರ ಇಂತಿದೆ; 1) ವ್ಹಿ.ಪಿ.ಕುಲಕರ್ಣಿ 2) ಸಿ.ಎ. ಖರಾಡೆ (ವಿಶೇಷ ಅಹ್ವಾನಿತರು) 3) ಎಲ್. ಎಸ್.ನಾಯಕ 4) ಜಿ.ವ್ಹಿ.ಕುಲಕರ್ಣಿ 5) ನಾಗಪ್ಪ ಸಂಗೊಳ್ಳಿ 6) ಜಿ.ಎಂ.ಜೈನೇಖಾನ (ಕಾರ್ಯದರ್ಶಿ) 7) ಎಫ್.ಎಮ್.ನದಾಫ್ 8) ದೊಡ್ಡವ್ವ ಪೂಜಾರಿ 9) ಟಿ.ಎ.ಬಿ. 10) ದಿಲೀಪ ವಾರ್ಕೆ 11)ಮಂದಾ ನೇವಗಿ 12) ನಿವಾಸ ಖೋತ 13) ಪರವಿನ್ ನಾಯಿಕವಾಡೆ 14) ಎಸ್.ಕೆ.ಕುಲಕರ್ಣಿ 15) ಸ್ಥಾನ ಖಾಲಿ.







ಬಳ್ಳಾರಿ ತಾಲ್ಲೂಕಿನ ಸಿಪಿಐ(ಎಂ) ಪಕ್ಷದ 9 ನೇ ಸಮ್ಮೇಳನ ಯಶಸ್ವಿಯಾಗಿ ನಡೆದಿದೆ. ಸಂಗಾತಿ ಜೆ. ಚಂದ್ರ ಕುಮಾರಿ ಕಾರ್ಯದರ್ಶಿಯಾಗಿ 9 ಸದಸ್ಯರು ತಾಲೂಕು ಸಮಿತಿಗೆ ಅವಿರೋಧವಾಗಿ ಆಯ್ಕೆಯಾದರು. ಬಳ್ಳಾರಿಯ ಗಾಂಧಿ ಭವನದಲ್ಲಿ ಸಿಪಿಐ(ಎಂ) ಬಳ್ಳಾರಿ ತಾಲೂಕು 9 ನೇ ಸಮ್ಮೇಳನ ನಡೆಯಿತು. ಪಕ್ಷದ ಜಿಲ್ಲಾ ಕಾರ್ಯದರ್ಶಿ ಅರ್.ಎಸ್. ಬಸವರಾಜ ಸಮ್ಮೇಳನದ ಬಹಿರಂಗ ಸಭೆಯನ್ನು ಉದ್ಘಾಟನೆ ಮಾಡಿದರು, ಜೆ. ಸತ್ಯಬಾಬು ಮಾತನಾಡಿದರು. ಅತಿಥಿಗಳನ್ನು ತಾಲೂಕು ಕಾರ್ಯದರ್ಶಿ ಚಂದ್ರ ಕುಮಾರಿ ಸ್ವಾಗತಿಸಿದರು, ಅಧ್ಯಕ್ಷತೆಯನ್ನು ಗಂಗಣ್ಣ ಪತ್ತಾರ ವಹಿಸಿದ್ದರು.






ಸಿಪಿಐ(ಎಂ) ಯಾದಗಿರಿ 3ನೇ ಜಿಲ್ಲಾ ಸಮ್ಮೇಳನವು ಶಹಪುರದಲ್ಲಿ ನಡೆಯಿತು. ಶಹಾಪೂರದ ಪ್ರಮುಖ ಬೀದಿಗಳ ಮುಖಾಂತರ ಬೃಹತ ಮೆರವಣಿಗೆ ನಡೆಸಿ ಬಹಿರಂಗ ಸಭೆ ಯಶಸ್ವಿಯಾಗಿ ನಡೆಯಿತು. ರಾಜ್ಯ ಮುಖಂಡರಾದ ಡಾ: ಕೆ ಪ್ರಕಾಶ ರವರು ಉದ್ಘಾಟಿಸಿ ಮಾತನಾಡಿದರು, ಜಿಲ್ಲಾ ಕಾರ್ಯದರ್ಶಿ ದಾವಲಸಾಬ್ ನದಾಫ್, ಜಿಲ್ಲಾ ಮುಖಂಡರಾದ ಚನ್ನಪ್ಪ ಆನೆಗುಂದಿ, ಜೈಲಾಲ ತೋಟದ ಮನಿ, ಎಸ್ ಎಮ್ ಸಾಗರ, ಮಲ್ಲಯ್ಯ ಪೋಲಂಪಲ್ಲಿ, ರಾಮಯ್ಯ ಆಲ್ಹಾಳ, ಅನಿತಾ, ರವರು ಇದ್ದರು. ಜಿಲ್ಲಾ ಕಾರ್ಯದರ್ಶಿಯವರಾಗಿ ಚನ್ನಪ್ಪ ಆನೆಗುಂದಿ ಆಯ್ಕೆಯಾದರು.




ಸಿಪಿಐ(ಎಂ) ಕೊಡಗು ಜಿಲ್ಲಾ ಸಮ್ಮೇಳನವು ಸಿದ್ದಾಪುರದಲ್ಲಿ ನಡೆಯಿತು. ಪಕ್ಷದ ರಾಜ್ಯ ಮುಖಂಡರಾದ ಕಾಮ್ರೇಡ್ ಜೆ. ಬಾಲಕೃಷ್ಣ ಶೆಟ್ಟಿಯವರು ಉದ್ಘಾಟಿಸಿದರು. ರಾಜ್ಯ ಸಮಿತಿ ಸದಸ್ಯರಾದ ಕಾಮ್ರೇಡ್ ಧರ್ಮೇಶ್, ಜಿಲ್ಲಾ ಕಾರ್ಯದರ್ಶಿ ಡಾ. ದುರ್ಗಪ್ರಸಾದ್ ಉಪಸ್ಥಿತರಿದ್ದರು.



ಸಿಪಿಐ(ಎಂ) 23ನೇ ಉಳ್ಳಾಲ ವಲಯ ಸಮ್ಮೇಳನದ ಬಹಿರಂಗ ಸಭೆಯನ್ನು ಸಿಪಿಐ(ಎಂ) ಕಾಸರಗೋಡು ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ. ಕೆ.ಆರ್ ಜಯಾನಂದ ಉದ್ಘಾಟಿಸಿ ಮಾತನಾಡಿದರು, ದ.ಕ ಜಿಲ್ಲಾ ಕಾರ್ಯದರ್ಶಿ ಕಾಂ.ವಸಂತ ಆಚಾರಿ, ಕಾಂ.ಕೃಷ್ಣಪ್ಪ ಸಾಲ್ಯಾನ್, ವಲಯ ಕಾರ್ಯದರ್ಶಿ, ಯು. ಜಯಂತ್ ನಾಯ್ಕ್, ಕಾಂ.ವಾಸುದೇವ ಉಚ್ಚಿಲ್, ಕಾಂ.ಪದ್ಮಾವತಿ ಎಸ್ ಶೆಟ್ಟಿ, ಕಾಂ.ಅಡ್ವ ರಾಮಚಂದ್ರ ಬಬ್ಬುಕಟ್ಟೆ ವೇದಿಕೆಯಲ್ಲಿ ಉಪಸ್ಥಿತರಿದ್ದರು, ಬಹಿರಂಗ ಸಭೆಗೂ ಮುನ್ನ ಸಮ್ಮೇಳನ ಸಭಾಂಗಣದಿಂದ ಕಾರ್ಯಕರ್ತರ ಬೃಹತ್ ರ್‍ಯಾಲಿ ನಡೆಯಿತು.

ಸಿಪಿಐ(ಎಂ) ಉಳ್ಳಾಲ ವಲಯ ಸಮ್ಮೇಳನವನ್ನು ದ.ಕ ಜಿಲ್ಲಾ ಕಾರ್ಯದರ್ಶಿ ಕಾಂ.ವಸಂತ ಆಚಾರಿ ಉದ್ಘಾಟಿಸಿದರು. ಧ್ವಜಾರೋಹಣವನ್ನು ಹಿರಿಯ ಸಂಗಾತಿ ಕಾಂ. ಗಂಗಾಧರ್ ಶೆಟ್ಟಿ ನೆರವೇರಿಸಿದರು, ಕಾಂ. ಅಡ್ವ. ರಾಮಚಂದ್ರ ಬಬ್ಬುಕಟ್ಟೆ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು, ಕಾಂ. ವಾಸುದೇವ್ ಉಚ್ಚಿಲ್, ಕಾಂ. ಸುನೀಲ್ ಕುಮಾರ್ ಬಜಾಲ್, ಕಾಂ ಕೃಷ್ಣಪ್ಪ ಸಾಲ್ಯಾನ್, ಕಾಂ. ಪದ್ಮಾವತಿ ಎಸ್. ಶೆಟ್ಟಿ, ಕಾಂ. ಜಯಂತ್ ನಾಯ್ಕ್ ಉಪಸ್ಥಿತರಿದ್ದರು.






ಸಿಪಿಐ(ಎಂ) ಜಯನಗರ 5 ನೇ ವಲಯ ಸಮ್ಮೇಳನವು 3 ಅಕ್ಟೋಬರ್ 2021 ರಂದು ಬೆಂಗಳೂರಿನ ಜ್ಯೋತಿ ಬಸು ಭವನದಲ್ಲಿ ನಡೆಯಿತು. ಸಮ್ಮೇಳನವನ್ನು ಬೆಂಗಳೂರು ದಕ್ಷಿಣ ಜಿಲ್ಲಾ ಸಮಿತಿಯ ಕಾರ್ಯದರ್ಶಿ ಕಾಂ.ಕೆ.ಎನ್. ಉಮೇಶ್ ಉದ್ಘಾಟಿಸಿದರು. ಧ್ವಜಾರೋಹಣ ಮಾಡುವುದರ ಮೂಲಕ ಸಮ್ಮೇಳನಕ್ಕೆ ಕಾಂ. ಶ್ರೀಮತಿ ಚಾಲನೆ ನೀಡಿದರು. ಉದ್ಘಾಟನ ಸಮಾರಂಭದ ಅಧ್ಯಕ್ಷತೆಯನ್ನು ವಲಯ ಕಾರ್ಯದರ್ಶಿ ಕಾಂ.ಸಿ.ಜಿ.ಶ್ರೀಪತಿ ವಹಿಸಿದ್ದರು. ಕಾಂ.ಸೆಲ್ವಿ ನಿರೂಪಿಸಿದರು. ಕಾಂ.ಬಸಮ್ಮ ಸ್ವಾಗತಿಸಿದರು, ಕಾಂ. ಬಿ.ಎನ್. ರಘು ವಂದಿಸಿದರು. ಕಾಂ.ಡಿ. ಸುರೇಶ್ ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯರಾದ ಕಾಂ.ಕೆ.ಎಸ್.ವಿಮಲಾ ರವರು ಸಮಾರೋಪ ಮಾತುಗಳನ್ನಾಡಿದರು. ಕಾಂ.ಸಿ.ಜಿ. ಶ್ರೀಪತಿ ರವರನ್ನು ಜಯನಗರ ವಲಯ ಸಮಿತಿಯ ಕಾರ್ಯದರ್ಶಿಯಾಗಿ ಸರ್ವಾನುಮತದಿಂದ ಪುನರ್ ಆಯ್ಕೆ ಮಾಡಿತು.




ಇತ್ತೀಚಿಗೆ ಸರ್ವ ಶಿಕ್ಷಾ ಅಭಿಯಾನ ನಡೆಸಿದ ಸಮೀಕ್ಷೆಯಲ್ಲಿ ಕಂಡು ಬಂದ ಆಘಾತಕಾರಿ ಅಂಶವೇನೆಂದರೆ 11 ರಿಂದ 13 ವರ್ಷದ ಒಳಗಿನ ಮಕ್ಕಳಲ್ಲಿ ಶೇ. 63 ರಷ್ಟು ಮಕ್ಕಳು ಶಾಲೆಯಿಂದ ಹೊರಗುಳಿದಿದ್ದಾರೆ. ಈ ರೀತಿ ಶಾಲೆಯಿಂದ ಹೊರಗುಳಿದ ಮಕ್ಕಳಲ್ಲಿ ಶೇ. 49 ರಷ್ಟು ದಲಿತ ಮಕ್ಕಳಿದ್ದರೆ, ಶೇ. 48.9 ರಷ್ಟು ಮಕ್ಕಳು ಇತರೆ ಹಿಂದುಳಿದ ಮತ್ತು ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದವರು. ಬೆಂಗಳೂರು ನಗರ ಜಿಲ್ಲೆ ಪ್ರಥಮ ಸ್ಥಾನದಲ್ಲಿದ್ದು ನಂತರದ ಸ್ಥಾನ ಕಲ್ಬುರ್ಗಿ ಜಿಲ್ಲೆಯದು. ಅಂದರೆ ಖಾಸಗಿ ಶಾಲೆಗಳ ಸಂಖ್ಯೆ ಹೆಚ್ಚಿರುವ ಜಿಲ್ಲೆಯಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳ ಪ್ರಮಾಣ ಹೆಚ್ಚಾಗಿರುವುದು ಒಂದು ಕಡೆ ಸರ್ಕಾರಿ ಶಾಲೆಗಳ ಕೊರತೆ ಮತ್ತು ಇನ್ನೊಂದೆಡೆ ಖಾಸಗಿ ಶಾಲೆಗಳಿಗೆ ಮಕ್ಕಳನ್ನು ಸೇರಿಸಲಾಗದ ನಗರದ ಬಡವರ ಕತೆಯನ್ನು ಹೇಳುತ್ತದೆ.



ಸ್ವಾತಂತ್ರ್ಯದ ನಂತರದಲ್ಲಿ ಕರ್ನಾಟಕದಲ್ಲಿ ಸಾರ್ವತ್ರಿಕ ಶಾಲಾ ಶಿಕ್ಷಣ – ಒಂದು ಅವಲೋಕನ

ಟಿ.ಎಲ್. ಕೃಷ್ಣೇಗೌಡ



ಸಂವಿಧಾನದ ನಿರ್ದೇಶಕ ತತ್ವಗಳ ಪ್ರಕಾರ ಹದಿನಾಲ್ಕು ವರ್ಷದೊಳಗಿನ ಎಲ್ಲಾ ಮಕ್ಕಳಿಗೂ ಶಿಕ್ಷಣವನ್ನು ಕಡ್ಡಾಯಗೊಳಿಸಿದ್ದರೂ ವಾಸ್ತವ ಚಿತ್ರಣ ಬಹಳ ಭಿನ್ನವಾಗಿದೆ. ಪ್ರಾಥಮಿಕ ಶಿಕ್ಷಣವನ್ನು ಎಲ್ಲರಿಗೂ ಸಮಾನವಾಗಿ ಮತ್ತು ಸಾರ್ವತ್ರಿಕವಾಗಿ ನೀಡುವಲ್ಲಿ ಜಾತಿ, ವರ್ಗ, ಲಿಂಗ ಮತ್ತು ಪ್ರಾದೇಶಿಕ ಅಸಮಾನತೆಗಳು ತಡೆಯಾಗಿವೆ. ಇದರ ಪರಿಣಾಮವಾಗಿ ಪ್ರಾಥಮಿಕ ಶಿಕ್ಷಣದ ಹಂತದಲ್ಲೇ ಶಾಲೆ ಬಿಡುವ ಮಕ್ಕಳ ಸಂಖ್ಯೆ ಗಣನೀಯವಾಗಿದ್ದು, 91 ರ ನಂತರದ ಉದಾರೀಕರಣ ನೀತಿಗಳು ಮತ್ತು ಇತ್ತೀಚಿನ ಕೋವಿಡ್ ಸಾಂಕ್ರಾಮಿಕ ರೋಗ ಪರಿಸ್ಥಿತಿಯನ್ನು ಮತ್ತಷ್ಟು ಬಿಗಡಾಯಿಸಿವೆ.

ಪ್ರಾಥಮಿಕ ಶಿಕ್ಷಣವನ್ನು ಪಡೆಯುವುದು ಒಂದು ಮಾನವ ಹಕ್ಕು ಎಂಬ ನಿಲುವನ್ನು ಅಂಗೀಕರಿಸಿ ಸುಮಾರು ಮುಕ್ಕಾಲು ಶತಮಾನವೇ ಕಳೆದು ಹೋಗಿದೆ. ಆದರೆ ಈಗಲೂ ಸಹ ಶಾಲೆಗೆ ಹೋಗುವ ವಯಸ್ಸಿನ 44ಸಾವಿರ ಮಕ್ಕಳು ಶಾಲೆಯ ಮುಖವನ್ನೇ ಕಾಣದಿರುವವರು ಕರ್ನಾಟಕದಲ್ಲಿದ್ದಾರೆ, ಸಮೀಕ್ಷೆ ಇನ್ನೂ ಮುಂದುವರೆದಿದ್ದು ಈ ಸಂಖ್ಯೆ 60 ಸಾವಿರ ಮುಟ್ಟುವ ಸಂಭವವಿದೆ. ಈಗಲೂ ಶಾಲೆಗೆ ಹೋಗುವ ವಯಸ್ಸಿನ ಕಾಲು ಭಾಗದಷ್ಟು ಮಕ್ಕಳು ಶಾಲೆಯಿಂದ ಹೊರಗಿದ್ದಾರೆ. ಶಾಲೆಗೆ ದಾಖಲಾದರೂ ಶಾಲೆಗೆ ಹೋಗದ ಮಕ್ಕಳನ್ನು ಗೈರು ಹಾಜರಿ ಎಂದು ತೋರಿಸಿದರೆ ಎದುರಿಸಬೇಕಾದ ತಾಂತ್ರಿಕ ಸವಾಲುಗಳ ಕಾರಣಕ್ಕಾಗಿ ಗೈರುಹಾಜರಿ ಎಂದು ತೋರಿಸದೆ ಹಾಜರಾತಿ ತೋರಿದರೂ ವಾಸ್ತವವಾಗಿ ಮಕ್ಕಳು ಶಾಲೆಯಿಂದ ಹೊರಗುಳಿದಿರುತ್ತಾರೆ.

ನಮ್ಮ ದೇಶದಲ್ಲಿ ಸರ್ಕಾರದ ನೀತಿ ನಿರೂಪಣಾ ದಾಖಲೆಗಳಲ್ಲಿ ಶಾಲಾ ಶಿಕ್ಷಣಕ್ಕೆ ಬಹಳ ಮಹತ್ವ ನೀಡಲಾಗಿದ್ದರೂ, ಇದನ್ನು ಸಾಧಿಸಲು ಬೇಕಾದ ಕ್ರಮಗಳಾಗಲೀ ಅಥವಾ ಸಂಪನ್ಮೂಲಗಳನ್ನು ಒದಗಿಸುವುದಾಗಲೀ ಕಂಡು ಬರುವುದಿಲ್ಲ ಹಾಗೂ ಅಂಚಿನ ವಿಭಾಗದ ಮಕ್ಕಳನ್ನು ಶಾಲಾ ಶಿಕ್ಷಣದಲ್ಲಿ ಒಳಗೊಳ್ಳಲು ಬೇಕಾದ ಪ್ರೋತ್ಸಾಹಕ ಕ್ರಮಗಳನ್ನು ಕೈಗೊಳ್ಳುವುದಿಲ್ಲ. ಇದರ ಪರಿಣಾಮವಾಗಿ ಜಗತ್ತಿನ ಒಟ್ಟು ಅನಕ್ಷರಸ್ಥ ಜನರ ಪೈಕಿ ಶೇ. 30 ರಷ್ಟು ಭಾರತದಲ್ಲೇ ಇದ್ದಾರೆ. ಅದರಲ್ಲೂ ಮಹಿಳಾ ಸಾಕ್ಷರತೆಯ ಪ್ರಮಾಣ ಆಫ್ರಿಕಾದ ಸಾಕ್ಷರತೆಯ ಪ್ರಮಾಣಕ್ಕಿಂತ ಕಡಿಮೆಯಿದೆ.

ಯುನೆಸ್ಕೋ ವರದಿಗಳ ಪ್ರಕಾರ ಭಾರತದಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳ ಸಂಖ್ಯೆ 20 ದಶಲಕ್ಷಕ್ಕೂ ಹೆಚ್ಚು. ಅದರಲ್ಲೂ ಕೋವಿಡ್ ಸಾಂಕ್ರಾಮಿಕ ರೋಗದ ಹಿನ್ನೆಲೆಯಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳ ಪ್ರಮಾಣ 60 ದಶಲಕ್ಷಕ್ಕೂ ಹೆಚ್ಚು, ಇದರಲ್ಲಿ ಶೇಕಡಾ 60 ಕ್ಕೂ ಹೆಚ್ಚಿನವರು ಹೆಣ್ಣುಮಕ್ಕಳು. ಶಾಲೆಗೆ ದಾಖಲಾದ ಮಕ್ಕಳಲ್ಲೂ ಶೇ. 37 ಮಕ್ಕಳು ಐದನೇ ತರಗತಿಯನ್ನು ತಲುಪುವುದಿಲ್ಲ.

ಐವತ್ತರ ದಶಕಕ್ಕೆ ಹೋಲಿಸಿದರೆ ಪ್ರಾಥಮಿಕ ಶಾಲೆಗಳ ಸಂಖ್ಯೆ ಹೆಚ್ಚಾಗಿ ದಾಖಲಾತಿ ಉತ್ತಮಗೊಂಡಿದ್ದರೂ ಅಗತ್ಯವಿರುವಷ್ಟು ಸೌಲಭ್ಯಗಳನ್ನು ಕಲ್ಪಿಸಿ, ತೃಪ್ತಿಕರವಾದ ಮೂಲಸೌಕರ್ಯವನ್ನು ಒದಗಿಸಲು ಒಕ್ಕೂಟ ಸರ್ಕಾರ ನೀಡುತ್ತಿರುವ ಅನುದಾನ ಯಾವುದಕ್ಕೂ ಸಾಲುತ್ತಿಲ್ಲ. ಈಗಲೂ ಜಿಡಿಪಿಯ ಶೇ. 3 ಕ್ಕಿಂತ ಕಡಿಮೆ ಅನುದಾನ ನೀಡಲಾಗುತ್ತಿದ್ದು ಬಹುಶಃ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲೇ ಅತ್ಯಂತ ಕಡಿಮೆ ಅನುದಾನವಾಗಿದೆ.

ಕರ್ನಾಟಕದ ಪ್ರಾಥಮಿಕ ಶಿಕ್ಷಣದ ಪರಿಸ್ಥಿತಿ ಆರಕ್ಕೇರದ ಮೂರಕ್ಕಿಳಿಯದ ಸ್ಥಿತಿಯಲ್ಲಿದೆ. ಅತ್ತ ಬಿಹಾರದಷ್ಟು ಹಿಂದುಳಿದಿದೆ ಎನ್ನುವ ಹಾಗೂ ಇಲ್ಲ ಇತ್ತ ಕೇರಳದಂತೆ ಮುಂದುವರಿದಿದೆ ಎನ್ನುವಂತೆಯೂ ಇಲ್ಲ. ರಾಜ್ಯದೊಳಗಡೆ ಕೂಡ ಶೈಕ್ಷಣಿಕವಾಗಿ ಅತ್ಯಂತ ಹಿಂದುಳಿದ ಗುಲ್ಬರ್ಗಾವೂ ಇದೆ ಮುಂದುವರಿದ ಅಥವಾ ಪರವಾಗಿಲ್ಲ ಎನ್ನಬಹುದಾದ ದಕ್ಷಿಣ ಕನ್ನಡ, ಉಡುಪಿ ಮತ್ತು ಕೊಡಗು ಜಿಲ್ಲೆಗಳೂ ಇವೆ. 2011 ರ ಜನಗಣತಿಯ ಪ್ರಕಾರ ಕರ್ನಾಟಕದ ಸಾಕ್ಷರತೆ ಶೇ. 75, ಮಹಿಳಾ ಸಾಕ್ಷರತೆ ಪ್ರಮಾಣ ಶೇ.68. ಶಾಲೆಯಿಂದ ಹೊರಗುಳಿದ ಮಕ್ಕಳಲ್ಲಿ ಹೆಣ್ಣುಮಕ್ಕಳು ಕಡಿಮೆಯಿದ್ದರೂ ಸಾಕ್ಷರತೆಯ ಅಂತರ ಹೆಚ್ಚೇ ಇದೆ.

ಪ್ರಾಥಮಿಕ ಶಾಲಾ ಶಿಕ್ಷಣ ಕ್ಷೇತ್ರದಲ್ಲಿ ಕರ್ನಾಟಕದ ಪ್ರಗತಿ ನಿರಾಶಾದಾಯಕ ಅಲ್ಲದಿದ್ದರೂ ತೀವ್ರವಾಗಿಲ್ಲ. ಪ್ರತಿ ಒಂದು ಕಿಲೋಮೀಟರ್ ಅಂತರದಲ್ಲಿ ಒಂದು ಪ್ರಾಥಮಿಕ ಶಾಲೆ ಇದೆ ಎಂದು ಶಿಕ್ಷಣ ಇಲಾಖೆ ಹೇಳಿದರೂ, ಇನ್ನೂ ಶಾಲೆಯೇ ಇಲ್ಲದ ಜನವಸತಿಗಳೂ ಇವೆ. ಈಗಲೂ ಏಕೋಪಾಧ್ಯಾಯ ಶಾಲೆಗಳು, ಬಹು ತರಗತಿ ನಿರ್ವಹಣೆಯ ಶಾಲೆಗಳು ವ್ಯಾಪಕವಾಗಿದೆ.

ಕರ್ನಾಟಕದಲ್ಲಿ ಈಗಲೂ ಶಿಕ್ಷಣದ ಮೇಲೆ ಮಾಡುತ್ತಿರುವ ವೆಚ್ಚ ಜಿಡಿಪಿಯ ಶೇ. 3.2 ನ್ನು ಮೀರಿಲ್ಲ. ಈ ಹಣದಲ್ಲೂ ಪ್ರಾಥಮಿಕ ಶಿಕ್ಷಣಕ್ಕೆ ಸಿಂಹಪಾಲು ಖರ್ಚಾಗುತ್ತಿದ್ದು ಒಟ್ಟು ಮೀಸಲಿಟ್ಟ ಹಣದಲ್ಲಿ ಶೇ. 55 ರಷ್ಟು ಪ್ರಾಥಮಿಕ ಶಿಕ್ಷಣಕ್ಕೆ ವ್ಯಯವಾಗುತ್ತಿದೆ. ನಂತರದಲ್ಲಿ ಪ್ರೌಢ ಮತ್ತು ಕಾಲೇಜು ಶಿಕ್ಷಣಕ್ಕೆ ಖರ್ಚಾಗುತ್ತಿದೆ. ಪ್ರಾಥಮಿಕ ಶಿಕ್ಷಣಕ್ಕಾಗಿ ಪ್ರತಿ ಮಗುವಿನ ಮೇಲೆ ರಾಜ್ಯ ಸರ್ಕಾರ 1350 ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದು ಇದರಲ್ಲಿ ಶೇ. 90 ರಷ್ಟು ಅನುದಾನಿತ ಮತ್ತು ಸರ್ಕಾರಿ ಶಾಲೆಗಳ ಶಿಕ್ಷಕರ ಸಂಬಳಕ್ಕೆ ಹೋಗುತ್ತಿದೆ. ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸಲು, ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಕನಿಷ್ಠ ಕುಡಿಯುವ ನೀರಿನ ಸೌಲಭ್ಯ ಒದಗಿಸಲು ಸಹ ನೂರಾರು ಶಾಲೆಗಳು ಒದ್ದಾಡುತ್ತಿವೆ. ಹೀಗಿದ್ದರೂ ಸರ್ಕಾರಿ ಮತ್ತು ಅನುದಾನಿತ ಪ್ರಾಥಮಿಕ ಶಾಲೆಗಳು ಮತ್ತು ಅವುಗಳಲ್ಲಿ ಮಕ್ಕಳ ದಾಖಲಾತಿ ಗಣನೀಯವಾಗಿ ಹೆಚ್ಚಾಗಿದೆ. 1960–61 ರಲ್ಲಿ 27050, 1997–98 ರಲ್ಲಿ 46900 ಈಗ ಸರಿ ಸುಮಾರು 62000 ಪ್ರಾಥಮಿಕ ಶಾಲೆಗಳು ಕರ್ನಾಟಕ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿವೆ.

ಶಾಲೆಗಳ ಸಂಖ್ಯೆಯಲ್ಲಿ ಆದ ಹೆಚ್ಚಳದಿಂದಾಗಿ ಒಂದರಿಂದ ಏಳನೇ ತರಗತಿಯ ಮಕ್ಕಳ ದಾಖಲಾತಿಯಲ್ಲೂ ಗಣನೀಯ ಹೆಚ್ಚಳವಾಗಿದೆ. 1959–60 ರಲ್ಲಿ 2.3 ದಶಲಕ್ಷ, 1998–99 ರಲ್ಲಿ 8.3 ದಶಲಕ್ಷ ಇದ್ದ ಮಕ್ಕಳ ಸಂಖ್ಯೆ ಈಗ 10 ದಶಲಕ್ಷಕ್ಕೂ ಹೆಚ್ಚಿನ ಮಕ್ಕಳು ಅನುದಾನಿತ, ಸರ್ಕಾರಿ ಮತ್ತು ಖಾಸಗಿ ಅನುದಾನ ರಹಿತ ಶಾಲೆಗಳಲ್ಲಿ ದಾಖಲಾಗಿದ್ದಾರೆ. ಆದರೆ ಈಗಲೂ ಗಂಡು ಮಕ್ಕಳ ದಾಖಲಾತಿಗೆ ಹೋಲಿಸಿದರೆ ಹೆಣ್ಣು ಮಕ್ಕಳ ದಾಖಲಾತಿ ಕಡಿಮೆಯಿದ್ದು ಶಾಲೆಗೆ ದಾಖಲಾಗಬೇಕಾದ ಶೇ. 84 ರಷ್ಟು ಹೆಣ್ಣುಮಕ್ಕಳು ಮತ್ತು ಶೇ. 92 ರಷ್ಟು ಗಂಡುಮಕ್ಕಳು ಮಾತ್ರ ಶಾಲೆಗೆ ದಾಖಲಾಗಿದ್ದಾರೆ.

ಕರ್ನಾಟಕದ ಪ್ರಾಥಮಿಕ ಶಾಲೆಗಳಲ್ಲಿ 2.26 ಲಕ್ಷ ಶಿಕ್ಷಕರಿದ್ದು, ಸರ್ಕಾರಿ ಶಾಲೆಗಳಲ್ಲಿ ಮಕ್ಕಳು ಮತ್ತು ಶಿಕ್ಷಕರ ಅನುಪಾತ ಸಮಾಧಾನಕರವಾಗಿದೆ. ಖಾಸಗೀ ಅಥವಾ ಅನುದಾನಿತ ಶಾಲೆಗಳಿಗೆ ಹೋಲಿಸಿದರೆ ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ಮತ್ತು ಶಿಕ್ಷಕರ ಅನುಪಾತ ಉತ್ತಮವಾಗಿದ್ದರೂ ಈಗಲೂ ಏಕೋಪಾಧ್ಯಾಯ ಶಾಲೆಗಳು ಮತ್ತು ಬಹು ತರಗತಿ ಶಾಲೆಗಳು ಗಣನೀಯವಾಗಿಯೇ ಇವೆ. ಕಳೆದೆರಡು ದಶಕದ ಸಾಂಸ್ಕೃತಿಕ ರಾಜಕಾರಣ ಮತ್ತು ವಾತಾವರಣದಿಂದಾಗಿ ಮಕ್ಕಳು ಮತ್ತು ಪೋಷಕರು ಖಾಸಗಿ ಇಂಗ್ಲೀಷ್ ಮಾಧ್ಯಮದ ಶಾಲೆಗಳ ಕಡೆಗೆ ಆಕರ್ಷಿತರಾಗಿದ್ದು ಸರ್ಕಾರಿ ಶಾಲೆಗಳು ಮಕ್ಕಳ ಕೊರತೆಯಿಂದ ಸೊರಗುತ್ತಿವೆ. ಮಕ್ಕಳನ್ನು ಸರ್ಕಾರಿ ಶಾಲೆಯ ಕಡೆ ಸೆಳೆಯಲು ವಿಶೇಷ ಪ್ರಯತ್ನಗಳು ನಡೆಯದೆ ಮತ್ತು ಇಡಿಯಾಗಿ ಸರ್ಕಾರಿ ಶಾಲೆಗಳನ್ನು ಉನ್ನತ ಮಟ್ಟಕ್ಕೆ ಏರಿಸದೆ ಈ ಪರಿಸ್ಥಿತಿ ಬದಲಾಗುವುದು ಕಷ್ಟದ ಕೆಲಸ.

ವ್ಯಾಪಕ ಶಾಲಾ ವ್ಯವಸ್ಥೆ ಮತ್ತು ದಾಖಲಾತಿಯಲ್ಲಿ ಪ್ರಗತಿ ಇದ್ದಾಗ್ಯೂ ಮತ್ತು ನಿರಂತರವಾಗಿ ಶಿಕ್ಷಕರ ನೇಮಕಾತಿ ನಡೆದಿದ್ದಾಗ್ಯೂ 1985–86 ರಿಂದ 1993–94 ರ ನಡುವೆ ಶಾಲೆ ಬಿಡುವ ಮಕ್ಕಳ ಪ್ರಮಾಣ ಶೇ. 51.8 ಇದೆ. 1986–87 ರಲ್ಲಿ ಶಾಲೆ ಬಿಡುವ ಮಕ್ಕಳ ಪ್ರಮಾಣ ಶೇ. 64.5 ಇದ್ದದ್ದು 1997–98 ರಲ್ಲಿ ಶೇ. 44 ಕ್ಕೆ ಕುಸಿದಿದ್ದು ಈಗಲೂ ಕರ್ನಾಟಕದಲ್ಲಿ ಶೇ. 26.2 ರಷ್ಟು ಮಕ್ಕಳು ತಮ್ಮ ಕಲಿಕೆಯನ್ನು ಕೈಬಿಟ್ಟು ಶಾಲೆಯಿಂದ ಹೊರಗುಳಿಯುತ್ತಿದ್ದಾರೆ. ಅಂದರೆ ಒಂದನೇ ತರಗತಿಗೆ ಸೇರಿದ 100 ಮಕ್ಕಳಲ್ಲಿ 26 ಮಕ್ಕಳು ಏಳನೇ ತರಗತಿಯ ಶಿಕ್ಷಣವನ್ನು ಪೂರ್ಯೆಸುತ್ತಿಲ್ಲ.

ಇತ್ತೀಚಿಗೆ ಸರ್ವ ಶಿಕ್ಷಾ ಅಭಿಯಾನ ನಡೆಸಿದ ಸಮೀಕ್ಷೆಯಲ್ಲಿ ಕಂಡು ಬಂದ ಆಘಾತಕಾರಿ ಅಂಶವೇನೆಂದರೆ 11 ರಿಂದ 13 ವರ್ಷದ ಒಳಗಿನ ಮಕ್ಕಳಲ್ಲಿ ಶೇ. 63 ರಷ್ಟು ಮಕ್ಕಳು ಶಾಲೆಯಿಂದ ಹೊರಗುಳಿದಿದ್ದಾರೆ. ಈ ರೀತಿ ಶಾಲೆಯಿಂದ ಹೊರಗುಳಿದ ಮಕ್ಕಳಲ್ಲಿ ಶೇ. 49 ರಷ್ಟು ದಲಿತ ಮಕ್ಕಳಿದ್ದರೆ, ಶೇ. 48.9 ರಷ್ಟು ಮಕ್ಕಳು ಇತರೆ ಹಿಂದುಳಿದ ಮತ್ತು ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದವರು. ಬೆಂಗಳೂರು ನಗರ ಜಿಲ್ಲೆ ಪ್ರಥಮ ಸ್ಥಾನದಲ್ಲಿದ್ದು ನಂತರದ ಸ್ಥಾನ ಕಲ್ಬುರ್ಗಿ ಜಿಲ್ಲೆಯದು. ಅಂದರೆ ಖಾಸಗಿ ಶಾಲೆಗಳ ಸಂಖ್ಯೆ ಹೆಚ್ಚಿರುವ ಜಿಲ್ಲೆಯಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳ ಪ್ರಮಾಣ ಹೆಚ್ಚಾಗಿರುವುದು ಒಂದು ಕಡೆ ಸರ್ಕಾರಿ ಶಾಲೆಗಳ ಕೊರತೆ ಮತ್ತು ಇನ್ನೊಂದೆಡೆ ಖಾಸಗಿ ಶಾಲೆಗಳಿಗೆ ಮಕ್ಕಳನ್ನು ಸೇರಿಸಲಾಗದ ನಗರದ ಬಡವರ ಕತೆಯನ್ನು ಹೇಳುತ್ತದೆ.

ಇದು ಕರ್ನಾಟಕದ ಒಟ್ಟಾರೆ ಚಿತ್ರಣವನ್ನು ಹೇಳುತ್ತದೆ. ಆದರೆ ರಾಜ್ಯದ ಬೇರೆ, ಬೇರೆ ಪ್ರದೇಶ ಮತ್ತು ಸಾಮಾಜಿಕ ಆರ್ಥಿಕ ವಿಭಾಗಗಳ ನಡುವೆ ಶಿಕ್ಷಣದ ಪ್ರಗತಿ, ಕೊರತೆ ಮತ್ತು ಸಮಸ್ಯೆಗಳನ್ನು ಸಮಗ್ರವಾಗಿ ಅಧ್ಯಯನ ಮಾಡಬೇಕಾಗಿದೆ. ಹಿಂದುಳಿದ ಜಿಲ್ಲೆಗಳಾದ ರಾಯಚೂರು, ವಿಜಯಪುರ ಜಿಲ್ಲೆಗಳಲ್ಲಿ ಪರಿಸ್ಥಿತಿ ಇನ್ನೂ ಗಂಭೀರವಾಗಿದೆ. ರಾಯಚೂರು ಜಿಲ್ಲೆಯಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳ ಪ್ರಮಾಣ ಶೇ. 43.8, ವಿಜಯಪುರ ಜಿಲ್ಲೆಯಲ್ಲಿ ಈ ಪ್ರಮಾಣ ಶೇ. 31.2 ರಷ್ಟಿದೆ. ಆದರೆ ದಕ್ಷಿಣ ಕನ್ನಡದಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳ ಪ್ರಮಾಣ ಶೇ.18.1 ಅಥವಾ ಕೊಡಗಿನಲ್ಲಿ ಈ ಪ್ರಮಾಣ ಶೇ. 24, ಬೆಂಗಳೂರು ನಗರ ಜಿಲ್ಲೆಯಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳ ಪ್ರಮಾಣ ಶೇ. 12.7. ಅಂದರೆ ಶೈಕ್ಷಣಿಕ ಪ್ರಗತಿಯಲ್ಲಿ ಕೂಡ ಪ್ರಾದೇಶಿಕ, ಸಾಮಾಜಿಕ ಮತ್ತು ➚

ಜಾತಿಗಣತಿ ಮತ್ತು ಅಭಿವೃದ್ಧಿಯ ಸಾರ್ವತ್ರೀಕರಣ......

ಪುಟ 6 ರಿಂದ

ಬಹಿರಂಗವಾಗುತ್ತದೊ ಎನ್ನುವ ಭಯವಿದೆ. ಅದಕ್ಕಾಗಿ ಇವರು ಜಾತಿಗಣತಿಯನ್ನು ತಿರಸ್ಕರಿಸುತ್ತಿದ್ದಾರೆ. ಇದು ಎಲ್ಲಿ ಇವರ ಸಾಂಸ್ಕೃತಿಕ ಆಧಾರವಾದ ಸಂಸ್ಥೆಯು ಪ್ರಚುರಪಡಿಸುತ್ತಿರುವ 'ಅಖಂಡತೆ' ಸಿದ್ಧಾಂತಕ್ಕೆ ಪೆಟ್ಟು ಬೀಳುತ್ತದೋ ಎನ್ನುವ ಭಯವಿದೆ. ಸನಾತನ–ಸಾಂಸ್ಥಿಕ ಅಸಮಾನತೆಯನ್ನು ಹಾಗೂ ಪ್ರಸ್ತುತ ಆರ್ಥಿಕ ಅಸಮಾನತೆಯನ್ನು ಹೋಗಲಾಡಿಸಲು ನಮಗೆ ಈಗ ಗೊತ್ತಿರುವ ಒಂದು ಪರಿಹಾರ ಜಾತಿಗಣತಿ ಮತ್ತು ಅದರ ಆಧಾರದ ಮೇಲೆ ಅಭಿವೃದ್ಧಿಯ ಫಲಗಳ ಹಂಚಿಕೆ. ಜನರು ಅನುಭವಿಸುತ್ತಿರುವ ದುಸ್ಥಿತಿಗನುಗುಣವಾಗಿ ಅಭಿವೃದ್ಧಿಯ ಫಲಗಳನ್ನು ಹಂಚುವುದು ಎಂದರೆ ಅತ್ಯಂತ ಉನ್ನತ ಮತ್ತು ಉನ್ನತ ಜಾತಿಗಳಲ್ಲಿ ಕ್ರೋಢೀಕೃತಗೊಂಡಿರುವ ವರಮಾನದಲ್ಲಿನ–ಸಂಪತ್ತಿನ ಒಂದು ಭಾಗವನ್ನು ವರ್ಗಾಯಿಸಬೇಕಾಗುತ್ತದೆ (ಪ್ರತ್ಯಕ್ಷ ತೆರಿಗೆ ಮೂಲಕ). ಇಂತಹ ತ್ಯಾಗಕ್ಕೆ ದ್ವಿಜ ಜಾತಿಗಳು ಸಿದ್ಧವಿಲ್ಲ ಮತ್ತು ಅವರ ಮೇಲೆ ತೆರಿಗೆಗಳನ್ನು ವಿಧಿಸಲು ಸರ್ಕಾರಗಳು ಸಿದ್ಧವಿಲ್ಲ.

ಈಗಾಗಲೆ ಸಂಶೋಧನೆಗಳು ತೋರಿಸುತ್ತಿರುವಂತೆ ಸ್ವಾತಂತ್ರ್ಯೋತ್ತರ ಕಾಲಾವಧಿಯಲ್ಲಿ ಬ್ರಾಹ್ಮಣರ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಪ್ರಾಬಲ್ಯವು ಉಲ್ಬಣಗೊಳ್ಳುತ್ತಾ ನಡೆದಿದೆ ಎಂಬುದು ದೃಢಪಡುತ್ತಿದೆ. ಒಂದು ಅಧ್ಯಯನವು ತೋರಿಸುತ್ತಿರುವಂತೆ ಬ್ರಾಹ್ಮಣರ ಮಾನವ ಬಂಡವಾಳದ ಪ್ರಮಾಣ ಪ. ಜಾ. ಸಮುದಾಯಗಳ ಮಾನವ ಬಂಡವಾಳದ ಪ್ರಮಾಣಕ್ಕಿಂತ ಎರಡು–ಮೂರು ಪಟ್ಟು ಅಧಿಕವಾಗಿದೆ. ಉದಾ. ಶಾಲಾ ವರ್ಷಗಳನ್ನು ತೆಗೆದುಕೊಂಡರೆ ಬ್ರಾಹ್ಮಣರಲ್ಲಿ ಇದು 9.5 ವರ್ಷಗಳಿದ್ದರೆ ಪ. ಜಾ. ಮತ್ತು ಪ. ಪಂ. ಗಳಲ್ಲಿ ಇದು 4.7 ವರ್ಷಗಳು. ಬ್ರಾಹ್ಮಣರ ಸಾಕ್ಷರತಾ ಪ್ರಮಾಣ ಶೇ. 87 ರಷ್ಟಿದ್ದರೆ ದಲಿತರರಲ್ಲಿ ಇದು ಶೇ. 53 ಮತ್ತು 12 ಶಾಲಾ ವರ್ಷಗಳನ್ನು ಪೂರೈಸಿದ ಮಕ್ಕಳ ಪ್ರಮಾಣ ಬ್ರಾಹ್ಮಣ ವರ್ಗದಲ್ಲಿ ಶೇ. 41 ರಷ್ಟಿದ್ದರೆ ಪ. ಜಾ ಮತ್ತು ಪ. ಪಂ ದಲ್ಲಿ ಅಂತಹ ಮಕ್ಕಳ ಪ್ರಮಾಣ ಶೇ. 13(ವಿವರಗಳಿಗೆ ನೋಡಿ: ದಿ ಪ್ರಿಂಟ್. ಅಶ್ವಿನಿ ದೇಶಪಾಂಡೆ ಮತ್ತು ರಾಜೇಶ್ ರಾಮಚಂದ್ರನ್. 10 ಅಕ್ಟೋಬರ್ 2021). ಜಾತಿಗಣತಿಯಿಂದ ಮಂಡಲ್ ವರದಿಯಲ್ಲಿ ಅಂದಾಜು ಮಾಡಿರುವ ಒಬಿಸಿ ಜನಸಂಖ್ಯೆಯು ಶೇ. 52 ಕ್ಕಿಂತ ಅಧಿಕವಾಗಬಹುದು. ಆಗ ಅವರಿಗೆ ನೀಡಿರುವ ಶೇ. 27 ಮೀಸಲಾತಿಯನ್ನು ಹೆಚ್ಚಿಸಬೇಕಾಗಬಹುದು. ಆದರೆ ಸರ್ವೋಚ್ಚ ನ್ಯಾಯಾಲಯವು ಮೀಸಲಾತಿಗೆ ಶೇ. 50 ರ ಮಿತಿಯನ್ನು ವಿಧಿಸಿದೆ. ಆದರೆ ಬ್ರಾಹ್ಮಣ ವರ್ಗಕ್ಕೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಸಂವಿಧಾನದ ಮೀಸಲಾತಿ ತತ್ವಕ್ಕೆ ವಿರೋಧವಾಗಿ ಅವರು ಕೇಳದಿದ್ದರೂ, ಚಳುವಳಿಗಳನ್ನು ಮಾಡದಿದ್ದರೂ ಈಡಬ್ಲುಎಸ್‌ಗೆ ಶೇ. 10 ರಷ್ಟು ಮೀಸಲಾತಿ ಸರ್ಕಾರ ನೀಡಿದೆ. ಇದು ಈಗಿರುವ ಮೀಸಲಾತಿ ಪ್ರಮಾಣವನ್ನು ಸೇರಿಸಿದರೆ ಮೀಸಲಾತಿ ಮಿತಿ ಶೇ. 50 ಮೀರುತ್ತದೆ. ಆದರೆ ಇದರ ಬಗ್ಗೆ ಸರ್ಕಾರವು ಯೋಚನೆ ಮಾಡಿಲ್ಲ ಮತ್ತು ನ್ಯಾಯಾಲಯಗಳು ಪ್ರಶ್ನೆ ಮಾಡಿಲ್ಲ.

ಜಾತಿಗಣತಿಯು ಏಕೆ ಮುಖ್ಯ ಎಂಬುದನ್ನು ಜನಗಣತಿಯ ಮಹತ್ವದ ಆಧಾರದ ಮೇಲೆ ತಿಳಿದುಕೊಳ್ಳಬಹುದು. ಜನಗಣತಿ ವರದಿಗಳಲ್ಲಿನ ಮಾಹಿತಿಯು ಅನೇಕ ಅಭಿವೃದ್ಧಿ ಯೋಜನೆಗಳಿಗೆ ಆಧಾರವಾಗಿದೆ. ಜನಗಣತಿ ವರದಿಗಳು ಡೇಟಾ ಕಣಜಗಳಾಗಿವೆ. ಇಡೀ ಜಗತ್ತಿನಲ್ಲಿ ನಮ್ಮ ಜನಗಣತಿ ವರದಿಗಳಿಗೆ ಮಾನ್ಯತೆಯಿದೆ. ಇದೇ ರೀತಿಯಲ್ಲಿ ಜಾತಿಗಣತಿ ನಡೆಸಿದರೆ ಅಲ್ಲಿ ದೊರೆಯುವ ಮಾಹಿತಿಯಿಂದ ನಮ್ಮ ಅನೇಕ ಅಭಿವೃದ್ಧಿ ಯೋಜನೆಗಳನ್ನು ಮರುರೂಪಿಸಬಹುದು, ಹೊಸ ಯೋಜನೆಗಳನ್ನು ಕಟ್ಟಬಹುದು. ಆದರೆ ಡೇಟಾ ಬಗ್ಗೆ ಇಂದಿನ ಆಳುವ ವರ್ಗಕ್ಕೆ ವಿಶ್ವಾಸವಿಲ್ಲ ಎಂಬುದು ಬೇರೆ. ಆದ್ದರಿಂದ ಜಾತಿಗಣತಿಯ ನಿರ್ವಹಣೆಯನ್ನು ಸರ್ಕಾರದ ಬೇರೆ ಬೇರೆ ಇಲಾಖೆಗಳಿಗೆ ವಹಿಸದೆ(2011ರ ಸಾಮಾಜಿಕ–ಶೈಕ್ಷಣಿಕ ಗಣತಿಯನ್ನು ಮೂರು ಇಲಾಖೆಗಳಿಗೆ ವಹಿಸಲಾಗಿತ್ತು) ಜನಗಣತಿ ನಡೆಸುವ ಒಕ್ಕೂಟ ಸರ್ಕಾರದ ಗೃಹ ಸಚಿವಾಲಯದಡಿಯಲ್ಲಿರುವ ರಿಜಿಸ್ಟ್ರಾರ್ ಜನರಲ್ ಆಂಡ್ ಸೆನ್ಸಸ್ ಕಮೀಷನರ್ ಅವರಿಗೆ ವಹಿಸಿಕೊಡಬೇಕು.

ಜಾತಿಗಣತಿಯಲ್ಲಿನ ಒಂದು ಅಪಾಯ


ಜಾತಿಗಣತಿ ಬಗ್ಗೆ ಪ್ರತಾಪ್ ಭಾನು ಮೆಹತಾ ಮುಂತಾದ ತಜ್ಞರು ವ್ಯಕ್ತ ಪಡಿಸುತ್ತಿರುವಂತೆ ಒಂದು ಅಪಾಯವಿದೆ. ಅಭಿವೃದ್ಧಿಯನ್ನು ಜಾತಿವಾರು ಹಂಚಲು ಸಾಧ್ಯವಿಲ್ಲ. ಜಾತಿಗಣತಿಯು ಇಂತಹ ಬೇಡಿಕೆಗೆ ಅನುವು ಮಾಡಿಕೊಡಬಹುದು ಎಂಬ ಆತಂಕವನ್ನು ಅನೇಕರು ವ್ಯಕ್ತ ಪಡಿಸುತ್ತಿದ್ದಾರೆ. ಇದರಲ್ಲಿ ಸತ್ಯಾಂಶವಿದೆ. ಪ್ರತಿ ಜಾತಿಯೂ ಅಭಿವೃದ್ದಿಯಲ್ಲಿ ತನ್ನ ಜನಸಂಖ್ಯೆಗೆ ಅನುಗುಣವಾಗಿ ಪಾಲು ಕೇಳುವುದು ತಪ್ಪಲ್ಲ. ಆದರೆ ಇದನ್ನು ಅನುಷ್ಠಾನಗೊಳಿಸುವುದು ಕಷ್ಟಸಾಧ್ಯ. ಆದರೆ ಇದಕ್ಕೆ ಪರಿಹಾರ ಜಾತಿಗಣತಿಯನ್ನು ತಿರಸ್ಕರಿಸುವುದಲ್ಲ. ಪ್ರತಿಯಾಗಿ ಅಭಿವೃದ್ಧಿಯನ್ನು ಸಾರ್ವತ್ರೀಕರಿಸಲು (ಯೂನಿವರ್ಸಲೈಸೇಷನ್ ಆಫ್ ಡೆವಲಪ್‌ಮೆಂಟ್) ತೀವ್ರ ಪ್ರಯತ್ನ ನಡೆಸಬೇಕು. ಕಳೆದ 70 ವರ್ಷಗಳಲ್ಲಿ ನಮಗೆ ಇದು ಸಾಧ್ಯವಾಗಿಲ್ಲ. ಉಳ್ಳವರ ಹಿತಾಸಕ್ತಿಗಳನ್ನು ಪೂರೈಸುವ ಪ್ರಯತ್ನಕ್ಕೆ ಹೆಚ್ಚಿನ ಒತ್ತು ನೀಡಲಾಗುತ್ತಿದೆಯೇ ವಿನಾ ಉಳಿದವರಿಗೆ ಅದು ಹೆಚ್ಚು ದೊರೆಯುವಂತೆ ಮಾಡುವುದು ನಮಗೆ ಸಾಧ್ಯವಾಗಿಲ್ಲ. ಸಾಮಾಜಿಕ ನ್ಯಾಯವನ್ನು ಸಾಧಿಸಿಕೊಳ್ಳಲು ಜಾತಿಗಣತಿ ಆ ಮೂಲಕ ಸಮಾನತಾ ಕಾರ್ಯಸೂಚಿ ಒಂದು ಮಾರ್ಗ. ಇದಕ್ಕೆ ಪರ್ಯಾಯವೆಂದರೆ ಅಭಿವೃದ್ಧಿಯನ್ನು ಸಾರ್ವತ್ರೀಕರಣಗೊಳಿಸುವುದು. ●

➘ ಆರ್ಥಿಕ ಅಸಮಾನತೆಗಳು ಪ್ರತಿಬಿಂಬಿಸುತ್ತಿವೆ.

ಯಾವ ಪ್ರದೇಶಗಳು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದಿವೆಯೋ ಅಲ್ಲಿ ಶೈಕ್ಷಣಿಕ ಸೌಲಭ್ಯಗಳು ಕೂಡಾ ಹಿಂದುಳಿದಿವೆ. ಶೈಕ್ಷಣಿಕ ಹಿಂದುಳಿದಿರುವಿಕೆ ಮತ್ತೆ ಸಾಮಾಜಿಕ ಮತ್ತು ಆರ್ಥಿಕ ಹಿಂದುಳಿದಿರುವಿಕೆಗೆ ಕಾರಣವಾಗುತ್ತಿದೆ. ಈ ವಿಷ ವರ್ತುಲವನ್ನು ಬೇಧಿಸುವ ಕಾರ್ಯಕ್ಕೆ ಸ್ವಾತಂತ್ರ್ಯ ನಂತರದ ಯಾವ ಆಳುವ ಸರ್ಕಾರವೂ ಪ್ರಾಮಾಣಿಕ ಪ್ರಯತ್ನ ಮಾಡದಿರುವುದನ್ನು ಕಾಣುತ್ತೇವೆ.

ಕಳೆದ ಏಳು ದಶಕಗಳಲ್ಲಿ ಪ್ರಾಥಮಿಕ ಶಿಕ್ಷಣ ರಂಗದಲ್ಲಿ ಒಂದಷ್ಟು ಪ್ರಗತಿ ಆಗಿದೆ. 1959–60 ರಲ್ಲಿ ಕೇವಲ 23 ಲಕ್ಷ ಮಕ್ಕಳು ಪ್ರಾಥಮಿಕ ಶಾಲೆಗಳಲ್ಲಿ ದಾಖಲಾಗಿದ್ದರೆ ಈಗ ದಾಖಲಾದ ಮಕ್ಕಳ ಪ್ರಮಾಣ ಒಂದು ಕೋಟಿಯನ್ನು ಮೀರುತ್ತದೆ. ಆದರೆ ಇಪ್ಪತ್ತೊಂದನೇ ಶತಮಾನದಲ್ಲೂ ಶಾಲೆಯಿಂದ ಹೊರಗುಳಿದ ಲಕ್ಷಾಂತರ ಮಕ್ಕಳಿದ್ದಾರೆ. ಶಾಲೆಗೆ ದಾಖಲಾದ ಮಕ್ಕಳಲ್ಲೂ ಅವರ ಪೋಷಕರು ಆ ಮಕ್ಕಳನ್ನು ಶಾಲೆಗೆ ಕಳುಹಿಸಲು ಸಾಧ್ಯವಾಗದೆ, ತಮ್ಮ ಬದುಕಿನ ಜಂಜಾಟಗಳಿಂದ ಹೊರ ಬರಲಾಗದೇ ತಮ್ಮ ಮಕ್ಕಳನ್ನು ಅರ್ಧದಲ್ಲೇ ಶಾಲೆ ಬಿಡಿಸಿ ದುಡಿಮೆಗೆ ಹಚ್ಚುವುದನ್ನು ಕಾಣುತ್ತಿದ್ದೇವೆ. ಜನತೆಯ ಸಾಮಾಜಿಕ ಆರ್ಥಿಕ ಸ್ಥಿತಿಗೂ ಮಕ್ಕಳು ಶಿಕ್ಷಣವನ್ನು ಪೂರೈಸುವುದಕ್ಕೂ ನೇರ ಸಂಬಂಧವಿದೆ. ತಿಂಗಳಿಗೆ 1500 ರೂಪಾಯಿಗೂ ಕಡಿಮೆ ಆದಾಯವಿರುವ ಕುಟುಂಬದ ಶೇ. 76 ರಷ್ಟು ಮಕ್ಕಳು ಸರ್ಕಾರಿ ಶಾಲೆಗಳಲ್ಲಿ ಕಲಿಯುತ್ತಿದ್ದರೆ, ತಿಂಗಳಿಗೆ 1500–3000 ಆದಾಯವಿರುವ ಶೇ. 18.68 ಮಕ್ಕಳು, ತಿಂಗಳಿಗೆ 3000 ರೂಪಾಯಿ ಮೀರಿದ ಆದಾಯವಿರುವ ಕುಟುಂಬದ ಶೇ.4.5 ಮಕ್ಕಳು ಸರ್ಕಾರಿ ಶಾಲೆಯಲ್ಲಿ ಕಲಿಯುತ್ತಿದ್ದಾರೆ.

ಸರ್ಕಾರಿ ಶಾಲೆಗಳಲ್ಲಿ ಪ್ರಾಥಮಿಕ ಶಿಕ್ಷಣ ಸಂಪೂರ್ಣವಾಗಿ ಉಚಿತ ಎಂದು ಎಲ್ಲಾ ಸರ್ಕಾರಗಳೂ ಹೇಳುತ್ತಿವೆ. ಆದರೆ ಪುಸ್ತಕ, ನೋಟ್ ಬುಕ್, ಲೇಖನ ಸಾಮಗ್ರಿಗಳು, ಸಂಚಾರ ಇವುಗಳಿಗೆ ಪೋಷಕರು ಖರ್ಚು ಮಾಡಲೇಬೇಕಾಗಿದೆ. ಸರ್ಕಾರಿ ಶಾಲೆಗಳ ಮಕ್ಕಳ ಪೋಷಕರು ಕೂಡ ವರ್ಷಕ್ಕೆ ಸಾವಿರಾರು ರೂಪಾಯಿಗಳನ್ನು ತಮ್ಮ ಮಕ್ಕಳ ಶಿಕ್ಷಣಕ್ಕೆ ವ್ಯಯಿಸಬೇಕಾಗಿದೆ. ಸರ್ಕಾರದ ಅನುದಾನ ಪಡೆಯುವ ಆದರೆ ಖಾಸಗಿ ಆಡಳಿತ ಮಂಡಳಿಗಳಿಂದ ನಿರ್ವಹಿಸಲ್ಪಡುವ ಅನುದಾನಿತ ಶಾಲೆಗಳಲ್ಲಿ ಇತ್ತೀಚಿನ ವರೆಗೂ ಉಚಿತ ಪುಸ್ತಕಗಳನ್ನಾಗಲೀ, ಮಧ್ಯಾಹ್ನದ ಊಟವನ್ನಾಗಲೀ ನೀಡುತ್ತಿರಲಿಲ್ಲ. ಅಂತಹ ಶಾಲೆಗಳಲ್ಲಿ ಟ್ಯೂಷನ್ ಫೀ ಇಲ್ಲದಿದ್ದರೂ, ಅಭಿವೃದ್ಧಿ ಶುಲ್ಕ, ಪುಸ್ತಕ ಸಮವಸ್ತ್ರ ಎಂದು ಪೋಷಕರು ಹಲವಾರು ಸಾವಿರ ರೂಪಾಯಿಗಳನ್ನು ತಮ್ಮ ಮಕ್ಕಳ ಶಿಕ್ಷಣಕ್ಕೆ ತೊಡಗಿಸಬೇಕಾಗಿತ್ತು. ಈಗ ಪರಿಸ್ಥಿತಿ ಸುಧಾರಿಸಿದ್ದರೂ ಬದಲಾಗಿಲ್ಲ.



ಆದರೆ ಪೂರಾ ಖಾಸಗಿಯಾಗೇ ನಡೆಯುವ ಶಾಲೆಗಳಿಗೆ ಸಾಮಾನ್ಯವಾಗಿ ಆರ್ಥಿಕವಾಗಿ ಸಬಲರಾದ ಕುಟುಂಬಗಳೆ ತಮ್ಮ ಮಕ್ಕಳನ್ನು ಕಳಿಸುತ್ತಾರೆ. ಮಹತ್ವಾಕಾಂಕ್ಷೆಯ ಪೋಷಕರು ತಮ್ಮ ಮಕ್ಕಳು ಶಾಲೆ ಬಿಡದಂತೆ ನೋಡಿಕೊಳ್ಳುತ್ತಾರೆ. ಅಂದರೆ ಆರ್ಥಿಕವಾಗಿ ಮೇಲಿನ ವರ್ಗದ ಮಕ್ಕಳು ತಮ್ಮ ಶಾಲಾ ಶಿಕ್ಷಣವನ್ನು ಪೂರೈಸುತ್ತಾರೆ. ಮಾತ್ರವಲ್ಲ ಮುಂದೆಯೂ ಕಲಿಕೆ ಮತ್ತು ಸ್ಪರ್ಧೆಯಲ್ಲಿ ಉಳಿಯಲು ಬೇಕಾದಂತೆ ತಯಾರಾಗುತ್ತಾರೆ. ಅಧ್ಯಯನ ಒಂದರ ಪ್ರಕಾರ ಶಾಲೆ ತೊರೆದ ಮಕ್ಕಳಲ್ಲಿ ಶೇ. 81.14 ಮಕ್ಕಳ ಕುಟುಂಬದ ಮಾಸಿಕ ಆದಾಯ 500 ರಿಂದ 1000 ರೂಪಾಯಿ. ಶಾಲೆಗೆ ಹಾಜರಾಗದಿರಲು ಬಡತನವೇ ಮುಖ್ಯ ಕಾರಣವೆಂಬುದು ಇದರಿಂದ ತಿಳಿಯುತ್ತದೆ. ಇಂತಹ ಮಕ್ಕಳಲ್ಲಿ ಬಹುತೇಕರು ತಮ್ಮ ಕುಟುಂಬ ಪೋಷಣೆಯ ಕೆಲಸದಲ್ಲಿ ನೆರವಾಗುವುದನ್ನು ನೋಡಬಹುದು. ಶಾಲೆಯಿಂದ ಹೊರಗುಳಿದ ಶೇ. 9.14 ಮಕ್ಕಳ ಪೋಷಕರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಲು ನಿರಾಸಕ್ತಿ ತೋರಿದರೆ, 6.8 ಮಕ್ಕಳು ಶಾಲೆ ನೀರಸ ಎಂದು ಹೊರಗುಳಿಯುತ್ತಾರೆ, ಶೇ. 3.42 ಮಕ್ಕಳು ಶಾಲೆ ಮನೆಯಿಂದ ಬಹಳ ದೂರ ಎಂದು ಶಾಲೆಯಿಂದ ಹೊರಗಿದ್ದಾರೆ.

ಶಿಕ್ಷಣದ ಪರಿಧಿಯಿಂದ ಆಚೆ ಉಳಿಯಲು ಕೇವಲ ಆರ್ಥಿಕ ಕಾರಣಗಳು ಮಾತ್ರವೇ ಅಲ್ಲ ಜಾತಿಯಂತಹ, ಲಿಂಗದಂತಹ ಸಾಮಾಜಿಕ ಕಾರಣಗಳೂ ಇವೆ. ಈಗಲೂ ಜಾತಿ ವಿಭಜನೆ ದಲಿತರ ಮಕ್ಕಳನ್ನು ಶಾಲೆಗಳಿಂದ ಹೊರಗಿಡುತ್ತಿವೆ. ದಲಿತರ ಮಕ್ಕಳಿಗೆ ಸಿಗುವ ಸಣ್ಣ ಪುಟ್ಟ ಉಚಿತ ಸರ್ಕಾರಿ ಸವಲತ್ತುಗಳನ್ನು ಕೂಡ ಮೇಲ್ಜಾತಿಯ ಜನರು ಸಹಿಸಿಕೊಳ್ಳದ ಗ್ರಾಮೀಣ ಕರ್ನಾಟಕದಲ್ಲಿ ಆ ಮಟ್ಟಿಗೆ ದಲಿತರು ಶಾಲೆಯಿಂದ ಹೊರಗುಳಿಯಲು ಕಾರಣವಾಗುತ್ತದೆ. ಗ್ರಾಮೀಣ ಪ್ರದೇಶಗಳಲ್ಲಿ ಜಾತಿಯಿಂದಲೇ ಗುರುತಿಸಿ ದಲಿತ ಮತ್ತು ಹಿಂದುಳಿದ ಜಾತಿಯ ಜನರಿಗೆ ಅವಕಾಶಗಳನ್ನು ನಿರಾಕರಿಸುವ, ವಂಚಿಸುವ ಶಕ್ತಿಗಳು ಕೆಲಸ ಮಾಡುತ್ತಿವೆ.

ಶಾಲೆಗೆ ಸೇರಿಸುವಾಗ ಗಂಡು ಮಕ್ಕಳು ಆದ್ಯತೆ ಪಡೆದರೆ ಶಾಲೆ ಬಿಡಿಸುವಾಗ ಹೆಣ್ಣುಮಕ್ಕಳು ಆದ್ಯತೆ ಪಡೆಯುತ್ತಾರೆ. ಇತ್ತೀಚಿನ ಸಮೀಕ್ಷೆಯ ಪ್ರಕಾರ ಶಾಲೆ ಬಿಡುವ ಮಕ್ಕಳಲ್ಲಿ ಹೆಣ್ಣುಮಕ್ಕಳ ಪ್ರಮಾಣ ಕಡಿಮೆ ಇದೆ. ಆದರೆ ಖಾಸಗಿ ಅಥವಾ ಉತ್ತಮ ಗುಣಮಟ್ಟದ ಶಿಕ್ಷಣ ಸಂಸ್ಥೆಗೆ ಮಕ್ಕಳನ್ನು ಸೇರಿಸಬೇಕು ಎಂದಾಗ ಮಗನೇ ಆದ್ಯತೆಯಾಗುವುದರಿಂದ ಹೆಣ್ಣುಮಕ್ಕಳು ನಿರ್ಲಕ್ಷ್ಯಕ್ಕೆ ಒಳಗಾಗುತ್ತಾರೆ. ಹೆಣ್ಣುಮಕ್ಕಳು ಶಾಲೆಯಿಂದ ಹೊರಗುಳಿಯುವ ಅಥವಾ ತಾರತಮ್ಯ ಎದುರಿಸುವುದು ಆರ್ಥಿಕ, ಸಾಮಾಜಿಕ ಮತ್ತು ಪ್ರಾದೇಶಿಕ ಗಡಿಗಳನ್ನು ಮೀರಿ ನಡೆಯುತ್ತದೆ. 1996 ರಲ್ಲಿ ಶಾಲೆಯಿಂದ ಹೊರಗುಳಿದ ಹೆಣ್ಣುಮಕ್ಕಳ ಸಂಖ್ಯೆ ಶೇ. 32.8 ಇದ್ದರೆ, ಗಂಡು ಮಕ್ಕಳ ಪ್ರಮಾಣ ಶೇ. 22.7 ಇತ್ತು. ಈಗ ಪರಿಸ್ಥಿತಿ ಸುಧಾರಣೆ ಕಂಡಿದ್ದರೂ ಸಾಗಬೇಕಾದ ಹಾದಿ ಬಹಳ ದೂರವಿದೆ.

ಒಟ್ಟಾರೆ ಕರ್ನಾಟಕದಲ್ಲಿ ಕಳೆದ 70 ವರ್ಷಗಳಲ್ಲಿ ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿ ಪ್ರಗತಿಯಾಗಿದ್ದರೂ ಕೂಡ ಸವಾಲುಗಳು ಮತ್ತು ಸಮಸ್ಯೆಗಳು ಬೆಟ್ಟದಷ್ಟಿವೆ. ಶಿಕ್ಷಣಕ್ಕೆ ಜಿಡಿಪಿಯ ಶೇ. 6 ರಷ್ಟು ಹಣವನ್ನು ಮೀಸಲಿಡದೆ ಆ ಮೂಲಕ ಗುಣಮಟ್ಟದ ವ್ಯವಸ್ಥೆಯನ್ನು ನಿರ್ಮಾಣ ಮಾಡದೆ ಹೋದರೆ ಈಗಿನ ಸವಾಲುಗಳನ್ನು ಎದುರಿಸಲು ಸಾಧ್ಯವಾಗುವುದಿಲ್ಲ. ಆದರೆ 90 ರ ದಶಕದ ನಂತರದ ಉದಾರೀಕರಣ ನೀತಿಗಳಿಗೆ ಬಲಿಯಾದ ಸರ್ಕಾರಗಳು ಶಿಕ್ಷಣವನ್ನು ಸರಕಾಗಿಸಿವೆ. ಉದಾರೀಕರಣದ ದಾರಿಯನ್ನು ಬದಲಿಸದೆ ಶಿಕ್ಷಣ ಕ್ಷೇತ್ರದಲ್ಲಿ ಸಾರ್ವಜನಿಕ ಹೂಡಿಕೆ ಹೆಚ್ಚಾಗದು. ಪ್ರಾದೇಶಿಕ, ಆರ್ಥಿಕ ಮತ್ತು ಸಮಾಜಿಕ ಅಸಮಾನತೆಗಳನ್ನು ತೊಡೆದು ಹಾಕದೆ ಶಿಕ್ಷಣ ಕ್ಷೇತ್ರದಲ್ಲಿ ಬದಲಾವಣೆಗಳನ್ನು ನಿರೀಕ್ಷೆ ಮಾಡಲಾಗದು. ಶಿಕ್ಷಣ ಕ್ಷೇತ್ರವನ್ನು ಬಿಡಿಯಾಗಿ ನೋಡಿ ಬದಲಾವಣೆಗಳನ್ನು ತರಲಾಗದು. ಶಿಕ್ಷಣವನ್ನು ಎಲ್ಲರಿಗೂ ತಲುಪಿಸುವ ತಲುಪದೇ ಇರಲು ಇರುವ ಕಾರಣಗಳನ್ನು ನಿವಾರಿಸುವ ಕೆಲಸ ಆಗಬೇಕು. ●



ಬಿಜೆಪಿ ಆಳ್ವಿಕೆಯಲ್ಲಿ ಮಾನವ ಹಕ್ಕುಗಳ ಬುಡಮೇಲು
ಹಿಂದುತ್ವ ಸರ್ವಾಧಿಕಾರಶಾಹಿಗೆ ಹಕ್ಕುಗಳ ಆಯೋಗವೂ ಬಲಿ

"ರಾಜಕೀಯ ಕನ್ನಡಕ ಹಾಗೂ ರಾಜಕೀಯ ಲಾಭ-ನಷ್ಟದ ಲೆಕ್ಕಾಚಾರ"ದಲ್ಲಿ ಮಾನವ ಹಕ್ಕುಗಳನ್ನು ನೋಡುವಾಗಲೇ "ಮಾನವ ಹಕ್ಕುಗಳ ದೊಡ್ಡ ಉಲ್ಲಂಘನೆ" ಆಗುತ್ತಿದೆ ಎಂಬ ಪ್ರಧಾನಿಗಳ ಆರೋಪ ವಾಸ್ತವವಾಗಿ ಕೇಂದ್ರ ಹಾಗೂ ರಾಜ್ಯಗಳ ಬಿಜೆಪಿ ಸರ್ಕಾರಗಳಿಗೇ ಸಂಪೂರ್ಣವಾಗಿ ಅನ್ವಯವಾಗುತ್ತದೆ. ವಾಸ್ತವ ಸಂಗತಿಯೆಂದರೆ, ಹಿಂದುತ್ವ ಸರ್ವಾಧಿಕಾರಶಾಹೀ ಆಳ್ವಿಕೆಯ ಅಡಿಯಲ್ಲಿ, ನಾಗರಿಕರ ಎಲ್ಲ ಮೂಲಭೂತ ಹಕ್ಕುಗಳ ವ್ಯವಸ್ಥಿತ ಹಾಗೂ ವ್ಯಾಪಕ ಪ್ರಮಾಣದ ಉಲ್ಲಂಘನೆ ಆಗುತ್ತಿದೆ. ಎನ್‌ಎಚ್‌ಆರ್‌ಸಿ ಕೂಡ ಈ ಆಳ್ವಿಕೆಯ ಬಲಿಪಶು ಆಗುತ್ತಿದೆ.

ಪೀಪಲ್ಸ್ ಡೆಮಾಕ್ರಸಿ

ಅನು: ವಿಶ್ವ

ನರೇಂದ್ರ ಮೋದಿ ಸರ್ಕಾರ ಎಲ್ಲ ಸಾಂವಿಧಾನಿಕ ಸಂಸ್ಥೆಗಳನ್ನು ಟೊಳ್ಳುಗೊಳಿಸುತ್ತಿದೆ ಮತ್ತು ಸಾರಹೀನಗೊಳಿಸುತ್ತಿದೆ. ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ (ಎನ್‌ಎಚ್‌ಆರ್‌ಸಿ) 28ನೇ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದಲ್ಲಿ ಇದು ಎದ್ದು ಕಾಣುವಂತಿತ್ತು.

ಈ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಗೃಹ ಮಂತ್ರಿ ಅಮಿತ್ ಷಾ ಕೂಡ ಭಾಗವಹಿಸಿದ್ದರು. ಮಾನವ ಹಕ್ಕುಗಳನ್ನು ಹೇಗೆ ನೋಡಬೇಕೆಂದು ಪ್ರಧಾನಿ ಮೋದಿ ತನ್ನದೇ ಸಂಕುಚಿತ ವಕ್ರ-ದೃಷ್ಟಿಕೋನದಿಂದ ಕಾರ್ಯಕ್ರಮದಲ್ಲಿ ಮಾತನಾಡಿದರು. 'ಕೆಲವರು ಮಾನವ ಹಕ್ಕುಗಳನ್ನು ಸ್ವಾರ್ಥ ಹಿತಸಾಧನೆಯ ತಮ್ಮದೇ ದೃಷ್ಟಿಕೋನದಿಂದ ನೋಡಲು ಆರಂಭಿಸಿದ್ದಾರೆ' ಎಂದು ಮೋದಿ ಭಾಷಣದಲ್ಲಿ ಹೇಳಿದರು. "ಮಾನವ ಹಕ್ಕುಗಳ ದೊಡ್ಡ ಉಲ್ಲಂಘನೆಯಾಗುವುದು ರಾಜಕೀಯದ ಬಣ್ಣದ ಕನ್ನಡಕ ಹಾಗೂ ರಾಜಕೀಯ ಲಾಭ-ನಷ್ಟದ ಲೆಕ್ಕಾಚಾರದಿಂದ ನೋಡಿದಾಗಲೇ" ಎಂದೂ ಮೋದಿ ಹೇಳಿದರು.

ವಾಸ್ತವವಾಗಿ ಈ ಹೆಕ್ಕುವ ಧೋರಣೆಯೇ ಮೋದಿ ಆಡಳಿತದಲ್ಲಿ ಎದ್ದು ಕಾಣುವ ಗುಣವಾಗಿದೆ. ಮಾನವ ಹಕ್ಕುಗಳನ್ನು ಬಹುಸಂಖ್ಯಾಕವಾದೀ ರಾಜಕೀಯದ ಕನ್ನಡಕದಿಂದ ನೋಡಲಾಗುತ್ತಿದೆ. ಪ್ರಸ್ತುತ ಸರ್ಕಾರದ ಈ ಕುರುಡು ಧೋರಣೆಯೇ ಆಳುವ ವ್ಯವಸ್ಥೆ ಒಂದೋ ಅಲ್ಪಸಂಖ್ಯಾತರು, ಅದರಲ್ಲೂ ವಿಶೇಷವಾಗಿ ಮುಸ್ಲಿಮರು, ಮತ್ತು ದಲಿತರು ಹಾಗೂ ಆದಿವಾಸಿಗಳ ಮಾನವ ಹಕ್ಕುಗಳ ಉಲ್ಲಂಘನೆಯಲ್ಲಿ ಕೈ ಜೋಡಿಸುತ್ತದೆ ಅಥವಾ ಅದಕ್ಕೆ ಕುರುಡಾಗಿರುತ್ತದೆ.

ಧಾರ್ಮಿಕ, ಭಾಷಾ ಅಥವಾ ಬುಡಕಟ್ಟು – ಹೀಗೆ ನಾನಾ ಅಲ್ಪಸಂಖ್ಯಾತ ಸಮುದಾಯಗಳ ಹಕ್ಕುಗಳನ್ನು ಹೇಗೆ ರಕ್ಷಿಸಲಾಗುತ್ತದೆ ಎನ್ನುವುದೇ ಪ್ರಜಾಪ್ರಭುತ್ವದ ನಿಜವಾದ ಪರೀಕ್ಷೆ. ಆದರೆ ಹಿಂದುತ್ವ ಆಡಳಿತದಡಿಯಲ್ಲಿ, ಬಹುಸಂಖ್ಯಾತರ ಮಾನವ ಹಕ್ಕುಗಳಿಗೆ ಮಾತ್ರವೇ ಆದ್ಯತೆ ನೀಡಲಾಗುತ್ತಿದೆ.

ದೇಶದಾದ್ಯಂತ ದೊಂಬಿ ಬಡಿತಗಳು, ದೈಹಿಕ ಹಲ್ಲೆಗಳು, ಜೀವನೋಪಾಯದ ನಿರಾಕರಣೆ ಮತ್ತು ಪ್ರಾಥಮಿಕ ಹಕ್ಕುಗಳ ನಿರಾಕರಣೆ ಅವ್ಯಾಹತವಾಗಿ ಹಾಗೂ ಪ್ರಶ್ನಾತೀತವಾಗಿ ನಡೆಯುತ್ತಿರುವುದು ಯಾಕೆಂಬುದಕ್ಕೆ ಬೇರೆ ವಿವರಣೆ ಬೇಕಾಗಿಯೇ ಇಲ್ಲ. ಮಧ್ಯ ಪ್ರದೇಶದಂಥ ಬಿಜೆಪಿ ಆಡಳಿತದ ರಾಜ್ಯಗಳಲ್ಲಿ ಅಲ್ಪಸಂಖ್ಯಾತರ ಮೇಲಿನ ದಾಳಿಯನ್ನು ಸ್ವತಃ ಅಲ್ಲಿನ ಗೃಹ ಸಚಿವರೇ ಸಮರ್ಥಿಸುತ್ತಾರೆ. ಇಂದೋರ್‌ನ ಒಂದು ಕಾಲೇಜ್ ಆಯೋಜಿಸಿದ್ದ ಗರ್ಬಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಕ್ಕಾಗಿ ನಾಲ್ಕು ಮುಸ್ಲಿಂ ವಿದ್ಯಾರ್ಥಿಗಳು ಹಾಗೂ ಯುವಕರ ಬಂಧನ ಇತ್ತೀಚಿನ ಉದಾಹರಣೆಯಾಗಿದೆ.

"ರಾಜಕೀಯ ಕನ್ನಡಕ ಹಾಗೂ ರಾಜಕೀಯ ಲಾಭ-ನಷ್ಟದ ಲೆಕ್ಕಾಚಾರ" ದಲ್ಲಿ ಮಾನವ ಹಕ್ಕುಗಳನ್ನು ನೋಡುವಾಗಲೇ "ಮಾನವ ಹಕ್ಕುಗಳ ದೊಡ್ಡ ಉಲ್ಲಂಘನೆ" ಆಗುತ್ತಿದೆ ಎಂದು ಮೋದಿ ಮಾತನಾಡುವಾಗ ಈ ಆರೋಪ ವಾಸ್ತವವಾಗಿ ಕೇಂದ್ರ ಹಾಗೂ ರಾಜ್ಯಗಳಲ್ಲಿರುವ ಬಿಜೆಪಿ ಸರ್ಕಾರಗಳಿಗೇ ಸಂಪೂರ್ಣವಾಗಿ ಅನ್ವಯವಾಗುತ್ತದೆ. ನಿಜ ಹೇಳಬೇಕೆಂದರೆ, ಸಾಮಾನ್ಯ ಮುಸ್ಲಿಮರ ಹಕ್ಕುಗಳನ್ನು ತುಳಿದು ಹಾಕಿ ಕೋಮು ಧೃವೀಕರಣದಿಂದ ರಾಜಕೀಯ ಲಾಭ ಪಡೆಯಲು ಪ್ರಯತ್ನಿಸುತ್ತಿರುವುದು ಸಂಕುಚಿತ ಹಿಂದುತ್ವ ರಾಜಕಾರಣವೇ.

ಎನ್‌ಎಚ್‌ಆರ್‌ಸಿಯ ಹಾಲಿ ಮುಖ್ಯಸ್ಥರೂ ಕೂಡ ಸಂಪೂರ್ಣವಾಗಿ ಆಳುವ ವ್ಯವಸ್ಥೆಯ ಪಂಕ್ತಿಯಲ್ಲೇ ನಿಂತಿರುವುದು ಆಯೋಗದ ಅಧ್ಯಕ್ಷ ಜಸ್ಟಿಸ್ ಅನಿಲ್ ಕುಮಾರ್ ಮಿಶ್ರಾರವರ ಭಾಷಣದಿಂದ ಸ್ಪಷ್ಟವಾಗಿದೆ. ಅವರು ಜಮ್ಮು ಮತ್ತು ಕಾಶ್ಮೀರ ಹಾಗೂ ಈಶಾನ್ಯ ಭಾಗದಲ್ಲಿ ಒಂದು ಶಾಂತಿಯುತ ಸನ್ನಿವೇಶವನ್ನು ಪೋಷಿಸಿ 'ಒಂದು ಹೊಸ ಯುಗ' ಮೂಡಿ ಬರುವಂತೆ ಮಾಡಿದ ಪೂರ್ಣ ಶ್ರೇಯವನ್ನು ಗೃಹ ಸಚಿವ ಅಮಿತ್ ಷಾರ "ದಣಿವರಿಯದ ಪ್ರಯತ್ನ"ಗಳಿಗೆ ಸಲ್ಲಿಸಿದ್ದಾರೆ.

ಇತ್ತೀಚಿನ ಅವಧಿಯಲ್ಲಿ ಪ್ರಮಾಣ ಮತ್ತು ತೀವ್ರತೆಯಲ್ಲಿ ಗರಿಷ್ಠ ಮಾನವ ಹಕ್ಕುಗಳ ಉಲ್ಲಂಘನೆ ಆಗಿದ್ದರೆ, ಅದು ಜಮ್ಮು ಮತ್ತು ಕಾಶ್ಮೀರದಲ್ಲಿ. ಅದರಲ್ಲೂ ಸಂವಿಧಾನದ 370ನೇ ವಿಧಿ ತೆಗೆದು ಹಾಕಿ ಆ ರಾಜ್ಯವನ್ನು ಒಡೆದು ಹಾಕಿ ದಿಗ್ಬಂಧನಗಳನ್ನು ವಿಧಿಸಲು ಅಮಿತ್ ಷಾ ಕ್ರಮಗಳನ್ನು ಆರಂಭಿಸಿದ ನಂತರವೇ. ಜಮ್ಮು ಮತ್ತು ಕಾಶ್ಮೀರದ ಪರಿಸ್ಥಿತಿ ವಿಶ್ವ ಸಂಸ್ಥೆಯ ಮಾನವ ಹಕ್ಕುಗಳ ಕುರಿತ ಹೈಕಮಿಷನರ್ ಮಿಷೆಲೆ ಬಾಷೆಲೆ ಅವರ ಗಮನವನ್ನೂ ಸೆಳೆದಿದ್ದು, ಅವರು ಸೆಪ್ಟೆಂಬರ್ 13ರಂದು ನಡೆದ ವಿಶ್ವ ಸಂಸ್ಥೆಯ ಮಾನವ ಹಕ್ಕುಗಳ ಮಂಡಳಿಯ 48ನೇ ಅಧಿವೇಶನದಲ್ಲಿ ಇದನ್ನು ಹೇಳಿದರು. ತಮ್ಮ ಭಾಷಣದಲ್ಲಿ ಅವರು "ಜಮ್ಮು ಮತ್ತು ಕಾಶ್ಮೀರದಲ್ಲಿ ಸಾರ್ವಜನಿಕರು ಸಭೆ ಸೇರುವ ಮೇಲಿನ ನಿರ್ಬಂಧಗಳು ಹಾಗೂ ಪದೇ ಪದೇ ಸಂವಹನ ಕಡಿತಗಳು ಮುಂದುವರಿದಿವೆ. ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕನ್ನು ಚಲಾಯಿಸಿದ್ದಕ್ಕೆ ನೂರಾರು ಜನರು ಬಂಧನದಲ್ಲೇ ಇದ್ದಾರೆ. ಹಾಗೂ ಪತ್ರಕರ್ತರು ಹೆಚ್ಚೆಚ್ಚು ಒತ್ತಡಕ್ಕೆ ಒಳಗಾಗುತ್ತಿದ್ದಾರೆ' ಎಂದರು. ಭಾರತದಲ್ಲಿ ಕಾನೂನು ಬಾಹಿರ ಚಟುವಟಿಕೆ ತಡೆ ಕಾನೂನಿನ (ಯುಎಪಿಎ) 'ಕಳವಳಕಾರಿ' ಬಳಕೆ ಆಗುತ್ತಿದೆ ಎಂಬುದನ್ನು ಗಮನಿಸುತ್ತ ಆ ಪೈಕಿ ಜಮ್ಮು ಮತ್ತು ಕಾಶ್ಮೀರದಲ್ಲೇ ಹೆಚ್ಚಿನ ಪ್ರಕರಣಗಳಿವೆ ಎಂದೂ ಬಾಷೆಲೆ ಹೇಳಿದರು.

ಭಾರತ ಸರ್ಕಾರದ ವಕ್ತಾರರು ಸಹಜವಾಗಿಯೇ ಈ ಅಭಿಪ್ರಾಯಗಳನ್ನು ನಿರಾಕರಿಸಿದ್ದಾರೆ. ಆದರೆ, ಸರ್ಕಾರದ ನಿಲುವನ್ನು ಎನ್‌ಎಚ್‌ಆರ್‌ಸಿ ಅಧ್ಯಕ್ಷರು ಕೂಡ ತಮ್ಮ ಅನುಮೋದಿಸಿರುವುದು ಸ್ವಯಂವೇದ್ಯ. ಏಕೆಂದರೆ ಅವರು ತಮ್ಮ ಭಾಷಣದಲ್ಲಿ 'ಮಾನವ ಹಕ್ಕುಗಳ ಉಲ್ಲಂಘನೆಯ ವಿಚಾರದಲ್ಲಿ ಬಾಹ್ಯ ಶಕ್ತಿಗಳು ಭಾರತದ ವಿರುದ್ಧ ಹುಸಿ ಆರೋಪಗಳನ್ನು ಮಾಡುವುದು ಸಾಮಾನ್ಯವಾಗಿ ಬಿಟ್ಟಿದೆ. ಇದನ್ನು ವಿರೋಧಿಸಬೇಕು' ಎಂದು ಹೇಳಿದರು. ಜಸ್ಟಿಸ್ ಮಿಶ್ರಾ ಲೆಕ್ಕದಲ್ಲಿ ವಿಶ್ವ ಸಂಸ್ಥೆಯ ಮಾನವ ಹಕ್ಕು ಸಂಸ್ಥೆ ಕೂಡ ಒಂದು ಬಾಹ್ಯ ಶಕ್ತಿಯೇ ಆಗಿದೆ!

ಇಂಥ ಒಬ್ಬ ವ್ಯಕ್ತಿಯು ಮುಖ್ಯಸ್ಥರಾಗಿರುವಾಗ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ಭಾರತೀಯ ಪ್ರಜೆಗಳ ಮೂಲಭೂತ ಮಾನವ ಹಕ್ಕುಗಳನ್ನು ಎತ್ತಿ ಹಿಡಿದೀತೆಂದು ಹೇಗೆ ನಿರೀಕ್ಷಿಸಬಹುದು? ವಾಸ್ತವ ಸಂಗತಿಯೆಂದರೆ, ಹಿಂದುತ್ವ ಸರ್ವಾಧಿಕಾರಶಾಹೀ ಆಳ್ವಿಕೆಯ ಅಡಿಯಲ್ಲಿ, ನಾಗರಿಕರ ಎಲ್ಲ ಮೂಲಭೂತ ಹಕ್ಕುಗಳ ವ್ಯವಸ್ಥಿತ ಹಾಗೂ ವ್ಯಾಪಕ ಪ್ರಮಾಣದ ಉಲ್ಲಂಘನೆ ಆಗುತ್ತಿದೆ. ಎನ್‌ಎಚ್‌ಆರ್‌ಸಿ ಕೂಡ ಈ ಆಳ್ವಿಕೆಯ ಬಲಿಪಶು ಆಗುತ್ತಿದೆ.

ಭಟ್ಟಂಗಿತನ ಪ್ರತಿ ಮಾನವನ ಹಕ್ಕು ....!

ವ್ಯಂಗ್ಯಚಿತ್ರ: ಮಂಜುಲ್, ನ್ಯೂಸ್೯



ಬ್ಯಾಂಕ್ ರಾಷ್ಟ್ರೀಕರಣದ ಕಾಯ್ದೆಗಳ, ಪೆನ್ಶನ್ ನಿಧಿ ಕಾಯ್ದೆಗಳ ತಿದ್ದುಪಡಿಗಳ ತರಾತುರಿ
ಜನಗಳ ಜೀವಮಾನದ ಉಳಿತಾಯಗಳನ್ನೂ ಬಿಡದ ಕುತಂತ್ರ-ಸಿಐಟಿಯು ಖಂಡನೆ

ರಾಷ್ಟ್ರದ ಸೊತ್ತುಗಳನ್ನು ಮತ್ತು ಮೂಲರಚನೆಗಳನ್ನು ದೇಶಿ-ವಿದೇಶಿ ಖಾಸಗಿ ಕಾರ್ಪೊರೇಟ್‌ಗಳಿಗೆ ಪುಕ್ಕಟೆಯಾಗಿ ವರ್ಗಾಯಿಸುವ ವಿನಾಶಕಾರೀ ಕಸರತ್ತನ್ನು ಮೋದಿ ಸರಕಾರ ನಡೆಸುತ್ತಿದೆ. ಏರ್ ಇಂಡಿಯಾ ಮಾರಾಟದ ನಂತರ ಈಗ ಸಂಸತ್ತಿನ ಮುಂಬರುವ ಚಳಿಗಾಲದ ಅಧಿವೇಶಬದಲ್ಲಿ ಸಾರ್ವಜನಿಕ ವಲಯದ ಬ್ಯಾಂಕುಗಳ ಖಾಸಗೀಕರಣಕ್ಕೆ ಅನುಕೂಲ ಮಾಡಿಕೊಳ್ಳಲು ಬ್ಯಾಂಕ್ ರಾಷ್ಟ್ರೀಕರಣದ ಕಾಯ್ದೆಗಳ ತಿದ್ದುಪಡಿಗಳನ್ನು ಮಾಡುವ ಧಾವಂತದಲ್ಲಿ ಇದೆ ಎಂದು ಸಿಐಟಿಯು ಹೇಳಿದೆ. ಇದನ್ನು ಅದು ಬಲವಾಗಿ ಖಂಡಿಸಿದೆ.


ಈಗಾಗಲೇ ಸಾರ್ವಜನಿಕ ವಲಯದ ಬ್ಯಾಂಕುಗಳು ಆ ಖಾಸಗಿ ಕಾರ್ಪೊರೇಟ್ ಗಳಿಗೆ ಕೊಟ್ಟಿರುವ ಹಲವು ಲಕ್ಷ ಕೋಟಿ ರೂ.ಗಳ ಸಾಲಗಳನ್ನು ಸಾಲಗೇಡಿತನ ಮತ್ತು ದಿವಾಳಿತನ ವಿಧಾನಗಳ ಹೆಸರಿನಲ್ಲಿ ಬಿಟ್ಟುಬಿಡುವಂತೆ ಮಾಡಲಾಗಿದೆ. ಇವೆಲ್ಲ ಸಾರ್ವಜನಿಕರ ಹಣ ಎಂಬುದನ್ನು ಗಮನಿಸಬೇಕು. ಈಗ ಸಾಲಗಳನ್ನು ಸುಸ್ತಿ ಮಾಡಿಕೊಂಡ ಅದೇ ಖಾಸಗಿ ಕಾರ್ಪೊರೇಟ್‌ಗಳ ಸಮುದಾಯಕ್ಕೇ ಈ ಸಾರ್ವಜನಿಕ ವಲಯದ ಬ್ಯಾಂಕುಗಳನ್ನು ವಹಿಸಿಕೊಡಲು ಸರಕಾರ ಮುಂದಾಗಿದೆ ಎಂದು ಸಿಐಟಿಯು ಟೀಕಿಸಿದೆ.

ಇದಲ್ಲದೆ, ಪೆನ್ಶನ್ ನಿಧಿ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ (ಪಿ.ಎಫ್.ಆರ್.ಡಿ.ಎ.)ಕಾಯ್ದೆ, 2013 ಕ್ಕೆ ತಿದ್ದುಪಡಿಗಳನ್ನು ತರುವ ಕೆಲಸ ಬಹಳಷ್ಟು ಮುಂದುವರೆದ ಹಂತದಲ್ಲಿ ಇದೆ ಎನ್ನಲಾಗಿದೆ. ಈ ಮೂಲಕ ರಾಷ್ಟ್ರೀಯ ಪೆನ್ಶನ್ ವ್ಯವಸ್ಥೆ(ಎನ್.ಪಿ.ಎಸ್.) ಟ್ರಸ್ಟನ್ನು ಈ ಕಾಯ್ದೆಯ ಎಲ್ಲ ನಿಯಂತ್ರಣ ಮತ್ತು ವ್ಯಾಪ್ತಿಯಿಂದ ಮುಕ್ತಗೊಳಿಸಿ ಅವನ್ನು ಕಂಪನಿ ಕಾಯ್ದೆಯ ಅಡಿಯಲ್ಲಿ ಕಾರ್ಪೊರೇಟ್‌ಗಳಾಗಿ ಅಥವ ದಾನದತ್ತಿಗಳಾಗಿ ಪರಿವರ್ತಿಸಲಾಗುವುದು ಎಂದು ವರದಿಯಾಗಿದೆ. ಅಂದರೆ ಜನಗಳ ಉಳಿತಾಯಗಳನ್ನು ಕೂಡ ಅನಿಯಂತ್ರಿತ ಸಟ್ಟಾಕೋರತನದ ಮೂಲಕ ಖಾಸಗಿ ಫಂಡ್ ಮ್ಯಾನೇಜರುಗಳ ಲಾಭದಾಹವನ್ನು ತೀರಿಸಿಕೊಳ್ಳುವ ದುಷ್ಟ ಪ್ರಾಜೆಕ್ಟ್‌ಗಳಿಗೆ ಗುರಿಪಡಿಸಲಾಗುತ್ತಿದೆ ಎಂದು ಸಿಐಟಿಯು ಅಭಿಪ್ರಾಯ ಪಟ್ಟಿದೆ.

ಸ್ವಲ್ಪಮಟ್ಟಿನ ನಿಯಂತ್ರಣಕ್ಕೆ ಒಳಗಾಗಿರುವ ನೌಕರರ ಭವಿಷ್ಯ ನಿಧಿ (ಇಪಿಎಫ್) ಟ್ರಸ್ಟ್‌ನಲ್ಲಿ ಸಟ್ಟಾಕೋರತನಕ್ಕೆ ಇರುವ ಸೀಮಿತ ಅವಕಾಶದಲ್ಲೂ ಕಾರ್ಮಿಕರು ಅಪಾರ ಹಣವನ್ನು ಕಳಕೊಂಡಿರುವಾಗ, ನಿಯಂತ್ರಣ-ಮುಕ್ತ ಎನ್.ಪಿ.ಎಸ್.ನ ಸರಕಾರದ ಈ ಹೊಸ ಪ್ರಾಜೆಕ್ಟಿನ ಗತಿಯೇನಾಗಬಹುದು ಎಂಬುದನ್ನು ಈಗಲೇ ಊಹಿಸಬಹುದು ಎಂದು ಸಿಐಟಿಯು ಹೇಳಿದೆ.

ಹೀಗೆ ರಾಷ್ಟ್ರದ ಸೊತ್ತುಗಳು ಮತ್ತು ಮೂಲರಚನೆಗಳು ಮಾತ್ರವಲ್ಲ, ಜನಗಳ ಜೀವಮಾನದ ಉಳಿತಾಯಗಳನ್ನು ಕೂಡ ಕಾರ್ಪೊರೇಟ್ ವರ್ಗದ ಅದೇ ಲೂಟಿಕೋರ ಸಮುದಾಯದ ಲೂಟಿಗೆ ತೆರೆದು ಕೊಡುವ ಇಂತಹ ದುಷ್ಟ ಮತ್ತು ವಿನಾಶಕಾರೀ ಪ್ರಾಜೆಕ್ಟ್‌ಗಳನ್ನು ಖಂಡಿಸಬೇಕು, ಕೇಂದ್ರದಲ್ಲಿರುವ ಸರಕಾರ ದಿಂದ ರಾಷ್ಟ್ರೀಯ ಅರ್ಥವ್ಯವಸ್ಥೆ ಮತ್ತು ಜನಗಳ ವಿರುದ್ಧ ಇಂತಹ ಹೇಯ ಕುತಂತ್ರಗಳನ್ನು ವಿರೋಧಿಸಬೇಕು ಮತ್ತು ಪ್ರತಿರೋಧಿಸಬೇಕು ಎಂದು ದುಡಿಯುವ ಜನಗಳಿಗೆ ಸಿಐಟಿಯು ಕರೆ ನೀಡಿದೆ.

ತೀವ್ರ ಹಸಿವಿನ ನಡುವೆಯೂ ತುಳುಕುವ ಎಫ್‌ಸಿಐ ಗೋದಾಮುಗಳು ಮತ್ತು ಎಥೆನಾಲ್ ಉತ್ಪಾದನೆಗೆ ಉತ್ತೇಜನೆ



ಪ್ರೊ. ಪ್ರಭಾತ್ ಪಟ್ನಾಯಕ್
ಅನು: ಕೆ.ಎಂ. ನಾಗರಾಜ್

ನಾವು ಒಂದಕ್ಕೊಂದು ಹೊಂದಾಣಿಕೆಯೇ ಇರದಂತೆ ಕಾಣುವ ಮೂರು ವಿದ್ಯಮಾನಗಳ, ಅಂದರೆ, ತೀವ್ರ ಹಸಿವು, ಆಹಾರ ಧಾನ್ಯಗಳ ಹೆಚ್ಚುವರಿ ದಾಸ್ತಾನು ಮತ್ತು ಈ ಪರಿಸ್ಥಿತಿಯಲ್ಲೂ ಮಿತಿಮೀರಿದ ಹಣದುಬ್ಬರ– ಈ ಮೂರು ವಿದ್ಯಮಾನಗಳ ಸಂಯೋಜನೆಯನ್ನು ಕಾಣುತ್ತಿದ್ದೇವೆ. ಇದನ್ನು ಗ್ರಹಿಸಲಾರದ ಸರ್ಕಾರ ತೀವ್ರ ಹಸಿವಿನ ಇರವನ್ನೇ ನಿರಾಕರಿಸುತ್ತದೆ ಮತ್ತು ಎಥೆನಾಲ್ ಉತ್ಪಾದನೆಯನ್ನು ಪ್ರೋತ್ಸಾಹಿಸುತ್ತದೆ. ಈ ನಿರಾಕರಣೆಯ ಹಿಂದೆ ಇರುವುದು ಬಿಜೆಪಿಗಷ್ಟೇ ವಿಶಿಷ್ಟವಾದ ಒಂದು ಭ್ರಮೆ ಮಾತ್ರವಲ್ಲ ("ಮಹಾನ್ ಉದ್ಧಾರಕನು ಚುಕ್ಕಾಣಿ ಹಿಡಿದಿರುವಾಗ ತೀವ್ರ ಹಸಿವು ಇರಲು ಸಾಧ್ಯವಿಲ್ಲ"); ಅದರ ಜೊತೆಗೆ ನಿಜವಾದ ಅರ್ಥದಲ್ಲಿ ಸರಳ ಅರ್ಥಶಾಸ್ತ್ರವನ್ನೂ ಗ್ರಹಿಸಲಾರದ ಸಂಪೂರ್ಣ ಅರಿವಿನ ಕೊರತೆಯೂ ಇದೆ.

ವಿಶ್ವ ಹಸಿವಿನ 2020ರ ಸೂಚ್ಯಂಕದಲ್ಲಿ 94ನೇ ಸ್ಥಾನದಲ್ಲಿದ್ದ ಭಾರತವು 2021ರ ಸೂಚ್ಯಂಕದಲ್ಲಿ 101ನೇ ಸ್ಥಾನಕ್ಕೆ ಇಳಿದಿದೆ. ನೆರೆಯ ದೇಶಗಳಾದ ಪಾಕಿಸ್ತಾನ, ನೇಪಾಳ ಅಥವಾ ಬಾಂಗ್ಲಾದೇಶಕ್ಕಿಂತಲೂ ಕೆಳಗಿನ ಸ್ಥಾನಕ್ಕೆ ಇಳಿದಿರುವ ದುಃಸ್ಥಿತಿಯನ್ನು "ವಿವರಿಸಲು" ಮೋದಿ ಸರ್ಕಾರವು ಸೂಚ್ಯಂಕದ "ವಿಧಾನ"ವನ್ನೇ ಪ್ರಶ್ನಿಸುವ ಮೂಲಕ ಮಾಡಿದ ಪ್ರಯತ್ನಗಳು ಬಾಲಿಶವಾಗಿವೆ. ಜೊತೆಗೆ, ದೇಶದಲ್ಲಿ ತೀವ್ರ ಹಸಿವಿನ ಬಾಧೆಯಿಂದ ಜನರು ನರಳುತ್ತಿರುವ ಪರಿಸ್ಥಿತಿಯ ಹಿಂದಿರುವ ಕಾರಣವನ್ನು ಮನಗಾಣಲಾಗದ ಅದರ ಅಸಾಮರ್ಥ್ಯ ಮತ್ತು ಅನಾದರಗಳೂ ಸಹ ಆಘಾತಕಾರಿಯಾಗಿವೆ.

ಜಾಗತಿಕ ಹಸಿವಿನ ಸೂಚ್ಯಂಕದಲ್ಲಿ ಭಾರತವು ಕೆಳದರ್ಜೆಗೆ ಇಳಿಯುತ್ತಿರುವ ಹೊತ್ತಿನಲ್ಲೇ, ಸರ್ಕಾರದ "ರೀತಿ ರಿವಾಜು"ಗಳ ಪ್ರಕಾರ ದೇಶವು ಅಗತ್ಯವಾಗಿ ಹೊಂದಿರಬೇಕಿದ್ದ ಪ್ರಮಾಣಕ್ಕಿಂತಲೂ ಹೆಚ್ಚಿನ ಪ್ರಮಾಣದ ಆಹಾರ ಧಾನ್ಯಗಳ ದಾಸ್ತಾನುಗಳನ್ನು ಹೊಂದಿದೆ. ವಾಸ್ತವವಾಗಿ, ಸೆಪ್ಟೆಂಬರ್ 1, 2021 ರಂದು ಎಫ್‌ಸಿಐ(ಭಾರತ ಆಹಾರ ನಿಗಮ), ರೂಢಿಗೆ ಅನುಗುಣವಾಗಿ ಹೊಂದಿರಬೇಕಿದ್ದ 26.2 ದಶಲಕ್ಷ ಟನ್‌ಗಳ ದಾಸ್ತಾನಿಗೆ ಬದಲಾಗಿ 50.2 ದಶಲಕ್ಷ ಟನ್‌ಗಳ ಆಹಾರ ಧಾನ್ಯಗಳ ದಾಸ್ತಾನು ಹೊಂದಿತ್ತು. ಈ ಸಂಗತಿಯಿಂದ ಸ್ಪಷ್ಟವಾಗಿ ಊಹಿಸಬಹುದಾದ ಅಂಶವೆಂದರೆ, ಜನರ ಕೈಯಲ್ಲಿ ಕೊಳ್ಳುವ ಶಕ್ತಿ ಕುಂದಿದ ಕಾರಣದಿಂದಾಗಿ ಅವರು ಸಾಕಷ್ಟು ಪ್ರಮಾಣದ ಆಹಾರ ಧಾನ್ಯಗಳನ್ನು ಖರೀದಿಸುವ ಪರಿಸ್ಥಿತಿಯಲ್ಲಿಲ್ಲ ಎಂಬುದು. ಅಷ್ಟೇ ಅಲ್ಲ, ಈ ಅಂಶವು ಜನರು ತೀವ್ರ ಹಸಿವಿನ ಬಾಧೆಯಿಂದ ನರಳುತ್ತಿದ್ದಾರೆ ಎಂಬುದಕ್ಕೆ ಸಾಕ್ಷಿಯೂ ಆಗುತ್ತದೆ. ಆದರೆ, ಈ ಸಂಗತಿಯನ್ನು ಸರ್ಕಾರವು ಊಹಿಸಿಕೊಂಡಿರುವ ಬಗೆಯೇ ಬೇರೆ. ಎಫ್‌ಸಿಐ ಬಳಿ ಆಹಾರ ಧಾನ್ಯಗಳ ದಾಸ್ತಾನು ದೊಡ್ಡ ಪ್ರಮಾಣದಲ್ಲಿ ಉಳಿದಿದೆ ಎಂದಾದರೆ, ಜನರು ಹಸಿವೆಯಲ್ಲಿರುವುದು ಸಾಧ್ಯವೇ ಇಲ್ಲ ಎಂಬುದು ಸರ್ಕಾರದ ತರ್ಕ. ಆದ್ದರಿಂದ ಹಸಿವಿನ ಸೂಚ್ಯಂಕವು ಸುಳ್ಳಿನಿಂದ ಕೂಡಿದೆ ಎಂಬುದು ಸರ್ಕಾರದ ಅಂಬೋಣ.

ಆಹಾರ ಧಾನ್ಯಗಳ ದಾಸ್ತಾನಿನ ಹೆಚ್ಚುವರಿ ಎಂದಾಗ ಅದು ಒಂದು ನಿರ್ದಿಷ್ಟ ಮಟ್ಟದ ಬೆಲೆಗಳಿಗೆ ಸಂಬಂಧಿಸಿದಂತೆ ಮತ್ತು ಜನರ ಕೈಯಲ್ಲಿರುವ ಖರೀದಿಸುವ ಶಕ್ತಿಗೆ (ಹಣದ ಪರಿಭಾಷೆಯಲ್ಲಿ) ಸಂಬಂಧಿಸಿದಂತೆ ಮಾತ್ರ "ಹೆಚ್ಚುವರಿ"ಯಾಗುತ್ತದೆ. ಧಾನ್ಯಗಳ ದಾಸ್ತಾನಿನ ಪ್ರಮಾಣವು "ಹೆಚ್ಚುವರಿ"ಯ ಮಟ್ಟದಲ್ಲಿ ಇದ್ದಾಗಲೂ ಜನರು ಹಸಿವಿನಿಂದ ಬಳಲುತ್ತಿರಬಹುದು. ಇದಕ್ಕೆ ಪರಿಹಾರವೆಂದರೆ, ಧಾನ್ಯಗಳ ಬೆಲೆಗಳನ್ನು ಕಡಿಮೆ ಮಾಡುವುದು ಅಥವಾ ಜನರ ಕೈಯಲ್ಲಿ ಕೊಳ್ಳುವ ಶಕ್ತಿಯನ್ನು ಬಲಪಡಿಸುವುದು. ಹಲವಾರು ಅರ್ಥಶಾಸ್ತ್ರಜ್ಞರು ಮತ್ತು ನಾಗರಿಕ ಸಮಾಜ ಸಂಘಟನೆಗಳು, ಎಡಪಂಥೀಯರು ಮತ್ತು ಇತರ ರಾಜಕೀಯ ಪಕ್ಷಗಳ ಬಗ್ಗೆ ಹೇಳಬೇಕಾಗಿಲ್ಲ, ಜನರ ಕೈಗೆ ಹಣ ವರ್ಗಾವಣೆ ಮಾಡುವ ಮೂಲಕ ಜನರ ಕೊಳ್ಳುವ ಶಕ್ತಿಯನ್ನು ಬಲಪಡಿಸುವಂತೆ ಮತ್ತು ಅಗತ್ಯವಿದ್ದರೆ ವಿತ್ತೀಯ ಕೊರತೆಯ ಹೆಚ್ಚಳದ ಮೂಲಕವಾದರೂ ಸರಿ, ಅಂತಹ ವರ್ಗಾವಣೆಗಳಿಗೆ ಹಣ ಒದಗಿಸಿಕೊಳ್ಳುವಂತೆ ಸರ್ಕಾರವನ್ನು ಅವು ಒತ್ತಾಯಿಸಿವೆ. ಮೇಲಾಗಿ, ಹಣ ವರ್ಗಾವಣೆಯು, ಆಹಾರ ಧಾನ್ಯಗಳ ದಾಸ್ತಾನು "ಹೆಚ್ಚುವರಿ" ಮಟ್ಟದಲ್ಲಿರುವ ಮತ್ತು ಬಳಕೆಯಾಗದ ಕೈಗಾರಿಕಾ ಸಾಮರ್ಥ್ಯವು ವ್ಯಾಪಕವಾಗಿರುವ ಪರಿಸ್ಥಿತಿಯಲ್ಲಿ, ಹಣದುಬ್ಬರವನ್ನು ಹೆಚ್ಚಿಸುವುದು ಸಾಧ್ಯವಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ, ಪ್ರಸ್ತುತ ಹಣದುಬ್ಬರವು ಮೂಲತಃ ಪರೋಕ್ಷ ತೆರಿಗೆಗಳ ಮೂಲಕವೇ ತನ್ನ ಆದಾಯವನ್ನು ಹೆಚ್ಚಿಸಿಕೊಳ್ಳುವ ಸರ್ಕಾರದ ಕ್ರಮಗಳಿಂದಾಗಿ ಘಟಿಸುತ್ತಿದೆಯೇ ಹೊರತು ಹೆಚ್ಚುವರಿ ಬೇಡಿಕೆಯಿಂದಾಗಿ ಅಲ್ಲ. ಆದ್ದರಿಂದ, ಪರೋಕ್ಷ ತೆರಿಗೆ ಹೆಚ್ಚಳಗಳನ್ನು ಹಿಂಪಡೆದು, ವಿತ್ತೀಯ ಕೊರತೆಯನ್ನು ವಿಸ್ತರಿಸಿಕೊಳ್ಳುವ ಮೂಲಕ ಹಣದುಬ್ಬರವನ್ನು ಹೆಚ್ಚಿಸುವ ಬದಲು ಕಡಿಮೆ ಮಾಡಬಹುದು.

ತನ್ನ ಮುಖ್ಯೋಪಾಧ್ಯಾಯರ ಸೂಚನೆಗಳನ್ನು ವಿಧೇಯತೆಯಿಂದ ಅನುಸರಿಸುವ ಒಬ್ಬ ಮುಗ್ಧ ಶಾಲಾ ಬಾಲಕನಂತೆ, ಮೋದಿ ಸರ್ಕಾರವು ವಿತ್ತೀಯ ಕೊರತೆಯನ್ನು ಅಂತರರಾಷ್ಟ್ರೀಯ ಹಣಕಾಸು ಬಂಡವಾಳಕ್ಕೆ "ಸ್ವೀಕಾರಾರ್ಹ" ಎನಿಸಿರುವ ಮಟ್ಟಕ್ಕೆ ಇಳಿಸುವ ಮೂಲಕ ಅದನ್ನು ಮೆಚ್ಚಿಸಲು ಹೆಣಗುತ್ತಿದೆ. ಆದ್ದರಿಂದ, ಜನರಿಗೆ ಹಣ ವರ್ಗಾವಣೆ ಮಾಡಲು ಅದು ಹಿಂಜರಿಯುತ್ತದೆ. ಜನರ ಕೈಯಲ್ಲಿ ಕೊಳ್ಳುವ ಶಕ್ತಿಯು ಕ್ಷೀಣಿಸಿರುವ ಪರಿಣಾಮವಾಗಿ, ನಾವು ಒಂದಕ್ಕೊಂದು ಹೊಂದಾಣಿಕೆಯೇ ಇರದಂತೆ ಕಾಣುವ ಮೂರು ವಿದ್ಯಮಾನಗಳ, ಅಂದರೆ, ತೀವ್ರ ಹಸಿವು, ಆಹಾರ ಧಾನ್ಯಗಳ ಹೆಚ್ಚುವರಿ ದಾಸ್ತಾನು ಮತ್ತು ಈ ಪರಿಸ್ಥಿತಿಯಲ್ಲೂ ಮಿತಿಮೀರಿದ ಹಣದುಬ್ಬರ– ಈ ಮೂರು ವಿದ್ಯಮಾನಗಳ ಸಂಯೋಜನೆಯನ್ನು ಕಾಣುತ್ತಿದ್ದೇವೆ. ಇದನ್ನು ಗ್ರಹಿಸಲಾರದ ಸರ್ಕಾರಕ್ಕೆ ಈ ಸಂಯೋಜನೆಯು ಅದೆಷ್ಟು ಅಸಾಧ್ಯವೆಂದು ತೋರುತ್ತದೆ ಎಂದರೆ, ಅದು ಸಂಭವಿಸುವ ಸಾಧ್ಯತೆಯನ್ನೂ ಸಹ ಒಪ್ಪಿಕೊಳ್ಳಲು ಅದು ಸಿದ್ಧವಿಲ್ಲ. ಆದ್ದರಿಂದ, ಅದು ತೀವ್ರ ಹಸಿವಿನ ಇರವನ್ನೇ ನಿರಾಕರಿಸುತ್ತದೆ. ಈ ನಿರಾಕರಣೆಯ ಹಿಂದೆ ಇರುವುದು ಬಿಜೆಪಿಗಷ್ಟೇ ವಿಶಿಷ್ಟವಾದ ಒಂದು ಭ್ರಮೆ ಮಾತ್ರವಲ್ಲ ("ಮಹಾನ್ ಉದ್ಧಾರಕನು ಚುಕ್ಕಾಣಿ ಹಿಡಿದಿರುವಾಗ ತೀವ್ರ ಹಸಿವು ಇರಲು ಸಾಧ್ಯವಿಲ್ಲ"); ಅದರ ಜೊತೆಗೆ ನಿಜವಾದ ಅರ್ಥದಲ್ಲಿ ಸರಳ ಅರ್ಥಶಾಸ್ತ್ರವನ್ನೂ ಗ್ರಹಿಸಲಾರದ ಸಂಪೂರ್ಣ ಅರಿವಿನ ಕೊರತೆಯೂ ಇದೆ.

ಹಸಿವಿನ ಅಗಾಧ ಹರಡಿಕೆಯನ್ನು ಗುರುತಿಸುವ ಗೋಜಿಗೆ ಹೋಗದ ಸರ್ಕಾರವು, ದೊಡ್ಡ ಪ್ರಮಾಣದ ರಫ್ತುಗಳ ಹೊರತಾಗಿಯೂ, ಅನೇಕ ವರ್ಷಗಳಿಂದಲೂ ಹೆಚ್ಚುವರಿಯಾಗಿ ಮುಂದುವರಿಯುತ್ತಿರುವ ಆಹಾರ ಧಾನ್ಯಗಳ ದಾಸ್ತಾನು ಮಟ್ಟವನ್ನು ಕೆಳಕ್ಕೆ ತರಲು ಎಲ್ಲಾ ರೀತಿಯ ಪ್ರಯತ್ನಗಳನ್ನೂ ಮಾಡಿದೆ. ಈ ಪ್ರಯತ್ನಗಳ ಪೈಕಿ ಇತ್ತೀಚಿನದೆಂದರೆ, ಜೈವಿಕ ಇಂಧನಗಳ ಉತ್ಪಾದನೆಯನ್ನು ಪ್ರೋತ್ಸಾಹಿಸುವುದು. ಭೂಮಿಯಿಂದ ಅಗೆದು ತೆಗೆದ ಇಂಧನಗಳಿಗೆ ಬದಲಿಯಾಗಿ "ಶುದ್ಧ" ಎಂದು ಭಾವಿಸಲಾದ ಎಥೆನಾಲನ್ನು ಬಳಸುವ ಪ್ರವೃತ್ತಿಯು ಪ್ರಪಂಚದಾದ್ಯಂತವೂ ಇದೆ. ಕಬ್ಬಿನ ಸಿಪ್ಪೆಯಿಂದ ಹಿಡಿದು ಧಾನ್ಯಗಳ ವರೆಗಿನ ಮೂಲಗಳಿಂದ ಎಥೆನಾಲ್‌ಅನ್ನು ಉತ್ಪಾದಿಸಲಾಗುತ್ತದೆ. ದಿನೇ ದಿನೇ ಎಥೆನಾಲ್ ಉತ್ಪಾದನೆ ಹೆಚ್ಚುತ್ತಿದೆ. ಇತ್ತೀಚಿನ ದಿನಗಳಲ್ಲಿ ಹಿಂದೆಂದಿಗಿಂತಲೂ ಹೆಚ್ಚಿನ ಪ್ರಮಾಣದ ಧಾನ್ಯಗಳನ್ನು ಎಥೆನಾಲ್ ಉತ್ಪಾದನೆಯತ್ತ ತಿರುಗಿಸಲಾಗುತ್ತಿದೆ. ಅಮೇರಿಕಾದಲ್ಲಿ, ಎಥೆನಾಲ್ ಉತ್ಪಾದನೆಗೆ ಮೆಕ್ಕೆಜೋಳವನ್ನು ಬಳಸಲಾಗುತ್ತಿದೆ. ಮೆಕ್ಕೆಜೋಳವನ್ನು ಈ ಉದ್ದೇಶಕ್ಕಾಗಿ ಬಳಕೆ ಮಾಡಿಕೊಳ್ಳುವ ಬಗ್ಗೆ ಅಮೆರಿಕಾ ತಲೆ ಕೆಡಿಸಿಕೊಳ್ಳಬೇಕಾಗಿಲ್ಲ. ಏಕೆಂದರೆ, ಅಲ್ಲಿ ಸಾಮೂಹಿಕ ಹಸಿವಿನ ಸಮಸ್ಯೆ ಇಲ್ಲ. ವಿಶ್ವ ಹಸಿವಿನ ಸೂಚ್ಯಂಕದಲ್ಲಿ ಅಮೇರಿಕಾದ ಹೆಸರು ಕಾಣಿಸಿಕೊಳ್ಳುವ ಸಂಭವವೂ ಇಲ್ಲ. ಆದರೆ, ಮೋದಿ ಸರ್ಕಾರವು, ಬೇರೆಯವರಿಗಿಂತ ನಾವೇನೂ ಕಡಿಮೆ ಇಲ್ಲ ಎಂಬಂತೆ, ಒಂದು ಮಹತ್ವಾಕಾಂಕ್ಷೆಯ ಎಥೆನಾಲ್ ಯೋಜನೆಯನ್ನು ಘೋಷಿಸಿದೆ. ಈ ಯೋಜನೆಯ ಪ್ರಕಾರವಾಗಿ, ಗ್ಯಾಸೋಲಿನ್(ಅಥವಾ ಪೆಟ್ರೋಲ್) ಮತ್ತು ಎಥೆನಾಲ್‌ಗಳನ್ನು 80:20 ಅನುಪಾತದಲ್ಲಿ ಬೆರೆಸಿದ ಮಿಶ್ರ ಇಂಧನದ ಬಳಕೆಯನ್ನು ಉತ್ತೇಜಿಸಲಾಗುತ್ತದೆ ಮತ್ತು ಈ ಉದ್ದೇಶಕ್ಕಾಗಿ ಉತ್ಪಾದನೆಯಾಗುವ ಎಥೆನಾಲ್‌ಗಾಗಿ ಅಕ್ಕಿಯನ್ನು ಮತ್ತು ಕಬ್ಬನ್ನು ಬಳಸಲಾಗುತ್ತದೆ.


ಸರ್ಕಾರವು ನಡೆಸುತ್ತಿರುವ ಭಾರತೀಯ ಆಹಾರ ನಿಗಮ(ಎಫ್.ಸಿ.ಐ.)ದ ಗೋದಾಮುಗಳಲ್ಲಿ ಆಹಾರ ಧಾನ್ಯಗಳ ಸಂಗ್ರಹವು ಸಾಕಷ್ಟು ಪ್ರಮಾಣದಲ್ಲಿ ಇರುವುದರಿಂದ, ಭಾರತದ ಆಹಾರ ಭದ್ರತೆಗೆ ಯಾವುದೇ ಧಕ್ಕೆ ಇಲ್ಲ ಎಂಬುದಾಗಿ ಸರ್ಕಾರದ ಹಿರಿಯ ಅಧಿಕಾರಿಯೊಬ್ಬರು ಹೇಳಿದ್ದಾರೆ. ಈ ಅಧಿಕಾರಿಯ ಹೇಳಿಕೆಯು, ಸರ್ಕಾರದ ಇತರ ಅನೇಕ ಹೇಳಿಕೆಗಳ ಧಾಟಿಯಲ್ಲಿ, ಪ್ರಾಥಮಿಕ ಅರ್ಥಶಾಸ್ತ್ರದ ಅಜ್ಞಾನವನ್ನು ಪ್ರದರ್ಶಿಸುತ್ತದೆ. ಮಾರುಕಟ್ಟೆಯಲ್ಲಿ ಧಾನ್ಯಗಳ ಬೆಲೆಗಳು ಯಾವ ಮಟ್ಟದಲ್ಲಿವೆ ಮತ್ತು ಜನರು ಎಷ್ಟರ ಮಟ್ಟಿನ ಕೊಳ್ಳುವ ಶಕ್ತಿಯನ್ನು ಹೊಂದಿದ್ದಾರೆ ಎಂಬುದಕ್ಕೂ ಮತ್ತು ಆಹಾರ ಧಾನ್ಯಗಳ ಹೆಚ್ಚುವರಿ ದಾಸ್ತಾನಿಗೂ ಸಂಬಂಧವಿದೆ ಎಂಬುದನ್ನು ಗಮನದಲ್ಲಿಟ್ಟುಕೊಂಡು ಪರಿಸ್ಥಿತಿಯನ್ನು ನೋಡುವ ಬದಲು, ಹೆಚ್ಚುವರಿ ದಾಸ್ತಾನಿನ ಪರಿಸ್ಥಿತಿಯು ಸಮೃದ್ಧಿಯ ಒಂದು ಪುರಾವೆ ಎಂದು ಹೇಳಲಾಗುತ್ತಿದೆ. ಈ ತರ್ಕದ ಪ್ರಕಾರ ದೇಶದಲ್ಲಿ ಕ್ಷಾಮದ ಪರಿಸ್ಥಿತಿ ಇದ್ದರೂ ಸಹ, ಎಫ್‌ಸಿಐ ಗೋದಾಮುಗಳಲ್ಲಿ ಆಹಾರ ಧಾನ್ಯಗಳ ಸಂಗ್ರಹವು ಸಾಕಷ್ಟು ಪ್ರಮಾಣದಲ್ಲಿರುವ ಕಾರಣದಿಂದ ಕ್ಷಾಮದ ಪರಿಸ್ಥಿತಿ ಇದೆ ಎಂಬ ಸಂಗತಿಯನ್ನು ಒಪ್ಪಿಕೊಳ್ಳಲಾಗುವುದಿಲ್ಲ.

ಬುದ್ಧಿ ನೆಟ್ಟಗಿರುವ ಎಲ್ಲ ವ್ಯಕ್ತಿಗಳೂ ವಿರೋಧಿಸಬೇಕಾಗಿರುವುದು ದೇಶದಲ್ಲಿ ಎಥೆನಾಲ್ ಉತ್ಪಾದನೆಗಾಗಿ ಆಹಾರ ಧಾನ್ಯಗಳನ್ನು ತಿರುಗಿಸುವುದೊಂದನ್ನೇ ಮಾತ್ರವಲ್ಲ, ಲಭ್ಯವಿರುವ ಧಾನ್ಯಗಳನ್ನು ಜನರು ತಮ್ಮ ಹಸಿವೆಯನ್ನು ಇಂಗಿಸಿಕೊಳ್ಳಲು ಸಹಾಯವಾಗುವಂತೆ ಅವರ ಕೈಯಲ್ಲಿ ಕೊಳ್ಳುವ ಶಕ್ತಿಯನ್ನು ತುಂಬುವ ಮೂಲಕ ಜನರಿಗೆ ಹಂಚಿಕೆಯಾಗುವಂತೆ ಒತ್ತಾಯಿಸಬೇಕು. ಎಥೆನಾಲ್ ಉತ್ಪಾದನೆಗೆ ಕಬ್ಬಿನ ಬಳಕೆಯು, ಅದು ಆಹಾರ ಧಾನ್ಯಗಳನ್ನು ಬೆಳೆಯುವ ಭೂಮಿಯನ್ನು ಬೇರೆ ಉದ್ದೇಶಗಳಿಗೆ ತಿರುಗಿಸಿದ ಕಾರಣದಿಂದ, ಆಹಾರ ಧಾನ್ಯಗಳ ತಲಾ ಲಭ್ಯತೆಯಲ್ಲಿ ಇಲ್ಲಿಯವರೆಗೆ ಸಂಭವಿಸಿದ್ದುದಕ್ಕಿಂತಲೂ ಹೆಚ್ಚಿನ ಕುಸಿತಕ್ಕೆ ಕಾರಣವಾಗುತ್ತದೆ.


ಆಹಾರ ಧಾನ್ಯಗಳ ತಲಾ ಲಭ್ಯತೆಯಲ್ಲಿ ಕುಸಿತವಿದ್ದರೂ ಸಹ, ಆಹಾರ ಧಾನ್ಯಗಳ ದಾಸ್ತಾನು ಹೆಚ್ಚುವರಿಯಾಗಿ ಉಳಿಯುತ್ತದೆ. ಹೀಗಾಗುತ್ತದೆ ಏಕೆಂದರೆ, ಆಹಾರ ಧಾನ್ಯಗಳ ತಲಾ ಲಭ್ಯತೆಯು ಎಷ್ಟು ಕಡಿಮೆಯೇ ಇರಲಿ, ಆಹಾರ ಧಾನ್ಯಗಳ ದಾಸ್ತಾನು ಸದಾ ಕಾಲವೂ ಹೆಚ್ಚುವರಿಯಾಗಿ ಉಳಿಯುವಂತೆ ನವ–ಉದಾರವಾದಿ ಆರ್ಥಿಕ ಆಳ್ವಿಕೆಯ ಕಾರ್ಯವಿಧಾನವೇ ನೋಡಿಕೊಳ್ಳುತ್ತದೆ.

ಅದಕ್ಕೆ ಕಾರಣವೂ ಸರಳವೇ. ಆಹಾರ ಧಾನ್ಯಗಳ ದಾಸ್ತಾನು "ರೂಢಿ"ಯ ಮಟ್ಟಕ್ಕಿಂತ ಕೆಳಗಿಳಿದಾಗಲೆಲ್ಲಾ ಹಣದುಬ್ಬರದ ಭಯ ಎದುರಾಗುತ್ತದೆ. ಆದ್ದರಿಂದ, ಆರ್ಥಿಕ ಸ್ವತ್ತುಗಳ ನಿಜ ಮೌಲ್ಯವು ಹಣದುಬ್ಬರದ ಮೂಲಕ ನಷ್ಟಕ್ಕೊಳಗಾಗುವ ಬಗ್ಗೆ ಚಿಂತೆಗೊಳಗಾದ ಹಣಕಾಸು ಬಂಡವಾಳವು ತಕ್ಷಣವೇ, ಹಣದುಬ್ಬರದ ವಿರುದ್ಧ ಕ್ರಮ ಕೈಗೊಳ್ಳುವಂತೆ ಸರ್ಕಾರದ ಮೇಲೆ ಒತ್ತಡ ಹೇರುತ್ತದೆ. ಸರ್ಕಾರವು ತನ್ನ ಖರ್ಚುವೆಚ್ಚಗಳನ್ನು ಕಡಿತಗೊಳಿಸಿಕೊಳ್ಳುವ ಮೂಲಕ ಮತ್ತು ಬಿಗಿ ಹಣಕಾಸು ನೀತಿಯನ್ನು ಅನುಸರಿಸುವ (ಬಡ್ಡಿ ದರ ಏರಿಕೆ) ಮೂಲಕ ಅಂತಹ ಹಣದುಬ್ಬರವನ್ನು ತಡೆಗಟ್ಟುತ್ತದೆ. ಆದರೆ, ದಾಸ್ತಾನು ಮಿತಿಮೀರಿ ಹೆಚ್ಚಾದ ಸಂದರ್ಭದಲ್ಲಿ, ದಾಸ್ತಾನು ಮಟ್ಟವನ್ನು ಕೆಳಗೆ ತರುವ ಯಾವ ಕ್ರಮವನ್ನೂ ಕೈಗೊಳ್ಳುವುದಿಲ್ಲ. ಅಂದರೆ, ಆಹಾರ ಧಾನ್ಯಗಳ ದಾಸ್ತಾನುಗಳ ಮಟ್ಟವು ಕುಸಿದಾಗ ಮಾತ್ರ ಅಗತ್ಯ ಕ್ರಮಗಳನ್ನು ತ್ವರಿತವಾಗಿ ಕೈಗೊಳ್ಳಲಾಗುತ್ತದೆ; ಮತ್ತು ಮಿತಿಮೀರಿ ಏರಿದ ಸಂದರ್ಭದಲ್ಲಿ ಯಾವ ಕ್ರಮವೂ ಇರುವುದಿಲ್ಲ.

ಪುಟ 14 ನೋಡಿ



"ಅಕ್ಕಿ ತುಂಬಿರುವ ಚೀಲಗಳು ನಮ್ಮ ತಲೆಯ ಮೇಲೆ ಬೀಳದಂತೆ 'ಸಾಮಾಜಿಕ ಅಂತರ' ಆಚರಿಸಬೇಕು.."
ವ್ಯಂಗ್ಯಚಿತ್ರ: ಸಜಿತ್ ಕುಮಾರ್, ಡೆಕ್ಕನ್ ಹೆರಾಲ್ಡ್



"ಅವರು ಹೇಳುವುದು ತಪ್ಪು. ನಮ್ಮ ವೈಜ್ಞಾನಿಕ ಅಧ್ಯಯನಗಳ ಪ್ರಕಾರ ನೀನು ಹಸಿದಿಲ್ಲ!"
ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ

ತೀವ್ರ ಹಸಿವಿನ ನಡುವೆಯೂ...

ಪುಟ 13 ರಿಂದ

ಈ ಅಸಮ ವರ್ತನೆಯಿಂದಾಗಿ ಸಾಮಾನ್ಯವಾಗಿ "ಹೆಚ್ಚುವರಿ" ದಾಸ್ತಾನುಗಳ ಸ್ಥಿತಿ ಇದ್ದೇ ಇರುತ್ತದೆ

ಇದರ ಜೊತೆಗೆ ಮತ್ತೊಂದು ಅಸಮ ವರ್ತನೆಯೂ ಇದೆ. ಸಮರ್ಪಕವೆಂದು ಭಾವಿಸಿದ "ರೂಢಿ"ಯ ಮಟ್ಟಕ್ಕಿಂತ ಕೆಳಗಿಳಿದ ದಾಸ್ತಾನಿನ ಕೊರತೆಯನ್ನು ತೊಡೆದುಹಾಕಲು ಎರಡು ಮಾರ್ಗಗಳಿವೆ. ಒಂದು, ಉತ್ಪಾದನೆಯ ಹೆಚ್ಚಳ – ಆಗ ಪೂರೈಕೆಯ ಖಾತ್ರಿಯೂ ಇರುತ್ತದೆ. ಇನ್ನೊಂದು, ಬೇಡಿಕೆಯ ಕಡಿತ – ಸಾರ್ವಜನಿಕ ವೆಚ್ಚಗಳ ಕಡಿತ ಮತ್ತು ಬಿಗಿ ಹಣಕಾಸು ನೀತಿಯ ಅನುಸರಣೆ (ಬಿಗಿ ಹಣಕಾಸು ನೀತಿಯು ಮೂಲತಃ ಜನರ ಕೊಳ್ಳುವ ಶಕ್ತಿಯನ್ನು ಕುಂದಿಸುತ್ತದೆ) ಇವು ಬೇಡಿಕೆಯನ್ನು ಕಡಿತಗೊಳಿಸುತ್ತವೆ. ಈ ಎರಡು ಕ್ರಮಗಳಲ್ಲಿ, ಸರ್ಕಾರಕ್ಕೆ ಹೆಚ್ಚು ಸುಲಭವಾದ ಮಾರ್ಗವೆಂದರೆ ಬೇಡಿಕೆಯನ್ನು ಕಡಿತಗೊಳಿಸುವ ಕ್ರಮವೇ. ಏಕೆಂದರೆ, ಅತಿ ಕಡಿಮೆ ಸಮಯದಲ್ಲಿ ಅದರ ಪರಿಣಾಮಗಳು ಕಾಣಿಸಿಕೊಳ್ಳುತ್ತವೆ, ಮತ್ತು, ಸಾರ್ವಜನಿಕ ವೆಚ್ಚಗಳನ್ನು ಕಡಿತಗೊಳಿಸಿದಾಗ, ಆಹಾರ ಧಾನ್ಯಗಳ ಉತ್ಪಾದನೆಯನ್ನು ಹೆಚ್ಚಿಸಲು ಅಗತ್ಯವಾದ ಸರ್ಕಾರಿ ಹೂಡಿಕೆಗಳು ವಿರಳವಾಗುತ್ತವೆ. ಆದ್ದರಿಂದ ಕಾಲಕ್ರಮೇಣ ಜನರ ಕೊಳ್ಳುವ ಶಕ್ತಿಯು ಕುಂದುತ್ತಾ ಹೋಗುತ್ತದೆ. ಪರಿಣಾಮವಾಗಿ, ಆಹಾರ ಧಾನ್ಯಗಳ ತಲಾ ಉತ್ಪಾದನೆ ಮತ್ತು ಅದರ ಪರಿಣಾಮವಾಗಿ, ಆಹಾರ ಧಾನ್ಯಗಳ ತಲಾ ಲಭ್ಯತೆ ಕುಸಿಯುತ್ತಾ ಹೋಗುತ್ತವೆ. ಅಂದರೆ, ಹಸಿವಿನ ಪ್ರಮಾಣವು ಹೆಚ್ಚುತ್ತಾ ಹೋಗುತ್ತದೆ. ವರ್ತಮಾನ ಭಾರತದಲ್ಲಿ ನಡೆಯುತ್ತಿರುವ ವಿದ್ಯಮಾನವು ಇದೇ.

ಈ ರೀತಿಯಲ್ಲಿ ಸುದೀರ್ಘಕಾಲ ಕುಸಿಯುತ್ತಾ ಹೋಗುವ ಆಹಾರ ಧಾನ್ಯಗಳ ತಲಾ ಉತ್ಪಾದನೆ, ಮತ್ತು ತಲಾ ಲಭ್ಯತೆ, ಮತ್ತು ಸುದೀರ್ಘಕಾಲ ಹಸಿವಿನ ಹೆಚ್ಚಳ, ಇವೆಲ್ಲವುಗಳ ಜೊತೆಯಲ್ಲಿ ಧಾನ್ಯಗಳ ದಾಸ್ತಾನುಗಳೂ ಸಹ ಹೆಚ್ಚುವರಿಯಾಗಿರುತ್ತವೆ. ಹೆಚ್ಚುವರಿ ದಾಸ್ತಾನುಗಳು ಸುದೀರ್ಘಕಾಲ ಇರುತ್ತವೆ ಎಂದ ಕೂಡಲೇ ಹಸಿವೆ ಇರುವುದಿಲ್ಲ ಎಂದೇನೂ ಅಲ್ಲ. ನವ–ಉದಾರವಾದಿ ಆಳ್ವಿಕೆಯ ಒಂದು ವಿಶಿಷ್ಟ ಪ್ರವೃತ್ತಿಯೆಂದರೆ, ಹೆಚ್ಚುತ್ತಿರುವ ಹಸಿವಿನ ಜೊತೆಯಲ್ಲೇ ಧಾನ್ಯಗಳ ದಾಸ್ತಾನುಗಳೂ ಸಹ ಹೆಚ್ಚುವರಿಯಾಗಿರುತ್ತವೆ. ಈ ಪ್ರವೃತ್ತಿಯು, ಆಹಾರ ಧಾನ್ಯಗಳನ್ನು ಅಥವಾ ಕಬ್ಬನ್ನು (ಆಹಾರ ಧಾನ್ಯ ಬೆಳೆಯುವ ಭೂಮಿಯನ್ನು ಕಬ್ಬು ಬೆಳೆಯಲು ತಿರುಗಿಸುವ ಮೂಲಕ) ಎಥೆನಾಲ್ ಉತ್ಪಾದನೆಗಾಗಿ ತಿರುಗಿಸುವ ಮೂಲಕ ಉಲ್ಬಣಗೊಳ್ಳುತ್ತದೆ ಮತ್ತು ಅದನ್ನು ಖಚಿತಪಡಿಸುತ್ತದೆ ಕೂಡ.

ಕಬ್ಬು ಮತ್ತು ಧಾನ್ಯಗಳನ್ನು ಹೆಚ್ಚು ಹೆಚ್ಚು ಪ್ರಮಾಣದಲ್ಲಿ ಎಥೆನಾಲ್ ಉತ್ಪಾದನೆಗಾಗಿ ತಿರುಗಿಸುವ ಮೋದಿ ಸರ್ಕಾರದ ನಿರ್ಧಾರವು ಧಾನ್ಯಗಳ ತಲಾ ಲಭ್ಯತೆಯನ್ನು ಕಡಿಮೆ ಮಾಡುತ್ತದೆ ಮತ್ತು ಹಸಿವಿನ ಪ್ರಮಾಣವನ್ನು ಹೆಚ್ಚಿಸುತ್ತದೆ. ಇದು ಶತಸಿದ್ಧ. ಏಕೆಂದರೆ, ಧಾನ್ಯಗಳ ದಾಸ್ತಾನಿನ ಸಮರ್ಪಕ "ರೂಢಿ"ಯ ಮಟ್ಟವು ಕೆಳಗಿಳಿಯುವ ಸೂಚನೆಗಳು ಕಾಣಿಸಿಕೊಳ್ಳುತ್ತಿದ್ದಂತೆಯೇ ಜನರ ಕೊಳ್ಳುವ ಶಕ್ತಿಯನ್ನು ಹಿಂಡುವ ಕೆಲಸ ಆರಂಭವಾಗುತ್ತದೆ. ಈ ರೀತಿಯಲ್ಲಿ, ಹಸಿವಿನ ಪ್ರಮಾಣವನ್ನು ಮತ್ತಷ್ಟು ಹೆಚ್ಚಿಸುವ ಮೂಲಕ, ಧಾನ್ಯಗಳ ಕೊರತೆಯ ಸಮಸ್ಯೆಯನ್ನು "ಪರಿಹರಿಸಲಾಗುತ್ತದೆ" (ಧಾನ್ಯಗಳ ದಾಸ್ತಾನುಗಳು "ರೂಢಿ"ಯ ಮಟ್ಟಕ್ಕಿಂತ ಕೆಳಗಿಳಿವೆ ಎಂಬ ಅಂಶವು ಪ್ರಕಟಗೊಂಡಾಗ).

ಜೈವಿಕ ಇಂಧನಗಳನ್ನು ಒಳಗೊಂಡ "ಹಸಿರು ಶಕ್ತಿ"ಯ ಬಗ್ಗೆ ಪಾಶ್ಚಾತ್ಯ ದೇಶಗಳ ಪ್ರಗತಿಪರ ವಲಯಗಳಲ್ಲಿ ಹೆಚ್ಚಿನ ಉತ್ಸಾಹವಿದೆ. ಜೈವಿಕ ಇಂಧನಗಳ ಉತ್ಪಾದನೆಯನ್ನು ಹೆಚ್ಚಿಸುವ ಸಲುವಾಗಿ ಧಾನ್ಯಗಳ ಹೆಚ್ಚಿಸಿದ ಉತ್ಪಾದನೆಯನ್ನು ಎಥನಾಲ್ ಉತ್ಪಾದನೆಯತ್ತ ತಿರುಗಿಸುವಂತೆ ಶಿಫಾರಸು ಮಾಡಲಾಗಿದೆ. ಮುಂದುವರಿದ ದೇಶಗಳ ಸಂದರ್ಭದಲ್ಲಿ ಈ ಸಲಹೆಯು ಎಷ್ಟೇ ಪ್ರಸ್ತುತವಿರಲಿ, ಭಾರತದಂತಹ ಮೂರನೇ ಜಗತ್ತಿನ ದೇಶಗಳಲ್ಲಿ ಅದರ ಅನುಸರಣೆಯು ಹಸಿವಿನ ಪ್ರಮಾಣವನ್ನು ಹೆಚ್ಚಿಸುವುದು ಖಚಿತ.







ದಕ್ಷಿಣ ಏಷ್ಯಾದಲ್ಲಿ ಅಲ್ಪಸಂಖ್ಯಾತರ ಮೇಲೆ ಆಕ್ರಮಣಗಳು ಕೋಮುವಾದ, ಮೂಲಭೂತವಾದಕ್ಕೆ ಆಳುವವರ ಪೋಷಣೆ

ದಕ್ಷಿಣ ಏಷ್ಯಾದ್ಯಂತ ಧಾರ್ಮಿಕ ಹಾಗೂ ಜನಾಂಗೀಯ ಅಲ್ಪಸಂಖ್ಯಾತರು ಬಹುಸಂಖ್ಯಾತ ಸಮುದಾಯಗಳ ಮೂಲಭೂತವಾದಿ ಹಾಗೂ ಕೋಮುವಾದಿ ಶಕ್ತಿಗಳ ಆಕ್ರಮಣಗಳಿಗೆ ತುತ್ತಾಗುತ್ತಿದ್ದಾರೆ. ಈ ದೇಶಗಳ ಆಳುವ ವರ್ಗಗಳ ಪಕ್ಷಗಳು ಮತಾಂಧತೆಯನ್ನು ಮತ್ತು ಜನಾಂಗೀಯ ರಾಷ್ಟ್ರವಾದವನ್ನು ಪೋಷಿಸುತ್ತಿವೆ. ಈ ಪೈಕಿ ಅತಿ ದೊಡ್ಡ ಹಾಗೂ ಬಲಿಷ್ಠ ದೇಶವಾಗಿರುವ ಭಾರತದಲ್ಲಿನ ಹಿಂದುತ್ವ ಕೋಮುವಾದ ಮತ್ತು ಹಿಂದೂ ರಾಷ್ಟ್ರವಾದವು ಅದರ ನೆರೆಯ ದೇಶಗಳಲ್ಲಿ ಅನಿವಾರ್ಯವಾಗಿ ಸಮಾನಾಂತರ ಸ್ಪಂದನೆಯನ್ನು ಹುಟ್ಟುಹಾಕುತ್ತಿದೆ. ಈ ಸಮಾಜಗಳಲ್ಲಿನ ಸಂಕೀರ್ಣ ಧಾರ್ಮಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಪರಂಪರೆಗಳು ಅಂಥದ್ದಕ್ಕೆ ಅವಕಾಶ ಕಲ್ಪಿಸುತ್ತವೆ. ಸಮತ್ವಪೂರ್ಣ ಅಭಿವೃದ್ಧಿಯ ಮತ್ತು ಜನರ ಕಲ್ಯಾಣದ ರಾಜಕೀಯದ ಬುನಾದಿ ಹೊಂದಿರುವ ಜಾತ್ಯತೀತ ಮತ್ತು ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಎತ್ತಿ ಹಿಡಿಯುವುದರಿಂದ ಮಾತ್ರವೇ ಇಡೀ ದಕ್ಷಿಣ ಏಷ್ಯಾದ ಉತ್ತಮ ಭವಿಷ್ಯ ಮತ್ತು ಪ್ರಗತಿಯ ಹಾದಿಯನ್ನು ತೆರೆಯಬಹುದಾಗಿದೆ.

ಕಾಶ್ಮೀರ ಕಣಿವೆಯಲ್ಲಿ ಭಯೋತ್ಪಾದಕ ಗುಂಪುಗಳು ಅಲ್ಪಸಂಖ್ಯಾತರು ಮತ್ತು ವಲಸೆ ಕಾರ್ಮಿಕರ ಮೇಲೆ ಗುರಿಯಿಟ್ಟು ಕೊಲ್ಲುತ್ತಿರುವುದು ಈಗಾಗಲೇ ಸಂಕಟಕ್ಕೆ ಒಳಗಾಗಿರುವ ಜಮ್ಮು ಮತ್ತು ಕಾಶ್ಮೀರವನ್ನು ಹತಾಶೆ ಮತ್ತು ಕತ್ತಲಿನ ಹೊಸ ಆಳಕ್ಕೆ ತಳ್ಳಿದೆ. ಕೋಮು ವಿಭಜನೆ ಉಂಟು ಮಾಡುವುದು ಹಾಗೂ ಜನರು ದೊಡ್ಡ ಪ್ರಮಾಣದಲ್ಲಿ ವಲಸೆ ಹೋಗುವಂಥ ವಾತಾವರಣ ಸೃಷ್ಟಿಸುವುದು ಶಾಲಾ ಶಿಕ್ಷಕರು, ಬೀದಿ ವ್ಯಾಪಾರಿಗಳು ಮತ್ತು ವಲಸೆ ಕಾರ್ಮಿಕರನ್ನು ಕೊಲ್ಲುವ ಪೈಶಾಚಿಕ ಕೃತ್ಯದ ಹಿಂದಿನ ಉದ್ದೇಶವಾಗಿದೆ.

2019ರ ಆಗಸ್ಟ್ ನಿಂದ ಕೇಂದ್ರಾಡಳಿತ ಪ್ರದೇಶವಾಗಿ ನೇರವಾಗಿ ಕೇಂದ್ರ ಸರ್ಕಾರದ ಆಡಳಿತದಲ್ಲಿರುವ ಜಮ್ಮು ಮತ್ತು ಕಾಶ್ಮೀರದಲ್ಲಿ ಇದು ಸಂಭವಿಸುತ್ತಿದೆ ಎಂಬುದು ಜಮ್ಮು ಮತ್ತು ಕಾಶ್ಮೀರ, ಅದರಲ್ಲೂ ವಿಶೇಷವಾಗಿ ಕಣಿವೆಯ ಜನರನ್ನು ಕೇಂದ್ರ ಸರ್ಕಾರ ನೋಡಿಕೊಂಡ ರೀತಿಗೆ ಪ್ರಬಲ ಛೀಮಾರಿಯಂತೆ ಇದೆ. ಸಂವಿಧಾನದ 370 ಮತ್ತು 35ಎ ವಿಧಿಗಳನ್ನು ತೆಗೆದು ಹಾಕಿದ್ದು ಮತ್ತು ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಬರ್ಖಾಸ್ತುಗೊಳಿಸಿದ್ದು ಭಾರತದೊಂದಿಗೆ ದೃಢವಾಗಿ ನಿಂತ ಕಣಿವೆಯ ಜನರು ಹಾಗೂ ಜಾತ್ಯತೀತ ರಾಜಕೀಯ ಶಕ್ತಿಗಳನ್ನು ಶಿಕ್ಷಿಸಲು ಕೈಗೊಂಡ ಪ್ರತೀಕಾರದ ಕ್ರಮಗಳಾಗಿವೆ.

ಭದ್ರತಾ–ಪ್ರಭುತ್ವದ ಧೋರಣೆಗಳಿಂದಾಗಿ

ಜಮ್ಮು ಮತ್ತು ಕಾಶ್ಮೀರವನ್ನು ಕೋಮು ಆಧಾರದಲ್ಲಿ ವಿಭಜಿಸುವ, ಕಣಿವೆಯಲ್ಲಿ ಮುಸ್ಲಿಂ ಬಹುಸಂಖ್ಯಾತ ಜನಸಂಖ್ಯೆಯನ್ನು ಅಂಚಿಗೆ ತಳ್ಳುವ ಹಾಗೂ ಕಾಶ್ಮೀರಿಯತ್ (ಕಾಶ್ಮೀರಿ ಅಸ್ಮಿತೆ) ಅನ್ನು ನಾಶ ಮಾಡುವ ಕ್ರಮಗಳನ್ನು ಕೈಗೊಳ್ಳುವ ತನ್ನ ಉದ್ದೇಶವನ್ನು ಮೋದಿ–ಅಮಿತ್ ಷಾ ಆಡಳಿತ ಯಾವತ್ತೂ ಮುಚ್ಚಿಟ್ಟಿಲ್ಲ. ಕಣಿವೆಯ ಮುಖ್ಯವಾಹಿನಿ ರಾಜಕೀಯ ಪಕ್ಷಗಳ ಮೇಲಿನ ದಬ್ಬಾಳಿಕೆ ಈ ಅಜೆಂಡಾದ ಭಾಗವಾಗಿದೆ.

ಎಲ್ಲ ಭಿನ್ನಾಭಿಪ್ರಾಯಗಳನ್ನು ಬಗ್ಗುಬಡಿದು ಹಾಗೂ ಮಾಧ್ಯಮದ ಕತ್ತು ಹಿಸುಕುವ ಮೂಲಕ ಜಮ್ಮು ಮತ್ತು ಕಾಶ್ಮೀರದ ರಾಜಕೀಯದಲ್ಲಿ ಪ್ರಜಾಸತ್ತಾತ್ಮಕ ದನಿಗಳಿಗೆ ಅವಕಾಶವಿಲ್ಲದಂತೆ ಮಾಡಿದ್ದು ಹಾಗೂ ಕಠಿಣ ಭದ್ರತಾ–ಪ್ರಭುತ್ವದ ಧೋರಣೆಗಳಿಂದಾಗಿ ಪಾಕಿಸ್ತಾನದಿಂದ ಪೋಷಣೆ ಪಡೆಯುತ್ತಿರುವ ಅತ್ಯುಗ್ರ ಭಯೋತ್ಪಾದಕ ಶಕ್ತಿಗಳಿಗೆ ಹಿಂಸಾತ್ಮಕ ಚಟುವಟಿಕೆಗಳನ್ನು ನಡೆಸಲು ಹಾದಿಯನ್ನು ತೆರೆದಂತಾಗಿದೆ.

2019ರಲ್ಲಿ
ಕಲಮು 370 ಹೋಯಿತು
ಕಾಶ್ಮೀರಕ್ಕೆ ನಿಮಗೆ ಸ್ವಾಗತ

2021ರಲ್ಲಿ
ವಲಸೆ ಕಾರ್ಮಿಕರು ಕಣಿವೆಯಿಂದ ಹೋಗುತ್ತಿದ್ದಾರೆ



"ಮತ್ತು ಇದು ವಲಸೆ ಭೂಮಾಲಕರನ್ನು ತರಬೇಕಿತ್ತು!
ವ್ಯಂಗ್ಯಚಿತ್ರ: ಆರ್.ಪ್ರಸಾದ್, ಇಕನಾಮಿಕ್ ಟೈಮ್ಸ್"

ಬಲಪ್ರಯೋಗದಿಂದ ಭಯೋತ್ಪಾದನೆ ಜಾಲಗಳನ್ನು ಮಟ್ಟ ಹಾಕಲಾಗಿದೆ ಎಂಬ ಸರ್ಕಾರದ ಹೇಳಿಕೆಗಳು ಭಾಗಶಃ ಸತ್ಯ ಎನ್ನುವುದು ಸ್ಪಷ್ಟವಾಗಿದೆ. ಭಯೋತ್ಪಾದಕ ಶಕ್ತಿಗಳು ಮುಗ್ಧ ನಾಗರಿಕರನ್ನು ಇನ್ನಿಲ್ಲದಂತೆ ಕಾಡಿಸಿ ಹತ್ಯೆ ಮಾಡುತ್ತಿರುವ ಘಟನೆಗಳು ಇದಕ್ಕೆ ಸಾಕ್ಷಿಯಾಗಿದೆ. ಮೋದಿ ಸರ್ಕಾರದ ವಿಭಜನಕಾರಿ ಹಾಗೂ ಹಿಂದುತ್ವ–ಕೇಂದ್ರಿತ ನೀತಿಗಳು ಕೂಡ ಜನರನ್ನು ಪ್ರತ್ಯೇಕಗೊಳಿಸಿವೆ. ಅದರಿಂದ ಉಗ್ರಗಾಮಿ ಶಕ್ತಿಗಳಿಗೆ ಹೆಚ್ಚಿನ ನೆರವು ಸಿಕ್ಕಿದೆ. ಈ ಪ್ರವೃತ್ತಿಗಳನ್ನು ಎದುರಿಸಲು ಪ್ರಜಾಸತ್ತಾತ್ಮಕ ಚಟುವಟಿಕೆಗೆ ಅವಕಾಶವೇ ಇಲ್ಲದಂತಾಗಿದೆ. ಉಗ್ರಗಾಮಿಗಳು ಮತ್ತು ಭಯೋತ್ಪಾದಕರ ವಿರುದ್ಧ ಭದ್ರತಾ ಪಡೆಗಳ ಸತತ ಕಾರ್ಯಾಚರಣೆಗಳ ಹೊರತಾಗಿಯೂ ಪರಿಸ್ಥಿತಿ ಹದಗೆಡುತ್ತಿರುವುದನ್ನು ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಪುನರ್ ಪ್ರತಿಷ್ಠಾಪಿಸುವುದು, ರಾಜಕೀಯ ಚಟುವಟಿಕೆಗಳ ಮೇಲಿನ ಎಲ್ಲ ನಿರ್ಬಂಧಗಳನ್ನು ತೆಗೆದು ಹಾಕುವುದು, ರಾಜಕೀಯ ಸಂವಾದದ ಪುನರಾರಂಭ ಮತ್ತು ಮಾಧ್ಯಮ ಸ್ವಾತಂತ್ರ್ಯ –ಇವುಗಳ ಮೂಲಕ ಮಾತ್ರವೇ ಬದಲಾಯಿಸಬಹುದು. ಆ ಮೂಲಕ ಉಗ್ರಗಾಮಿ ಶಕ್ತಿಗಳನ್ನು ಪ್ರತ್ಯೇಕಿಸಲು ಮತ್ತು ಭಯೋತ್ಪಾದಕರ ಹಿಂಸಾಚಾರವನ್ನು ನಿಭಾಯಿಸಲು ಸಾಧ್ಯವಾಗುತ್ತದೆ. ಜಮ್ಮು ಮತ್ತು ಕಾಶ್ಮೀರದಲ್ಲಿ ಅಲ್ಪಸಂಖ್ಯಾತರನ್ನು ಗುರಿಯಾಗಿಸಿ ಹಿಂಸಾಚಾರ ನಡೆಸುವ ಸರಣಿ ದುಷ್ಕೃತ್ಯಗಳನ್ನು ದೇಶದ ಬೇರೆ ಭಾಗಗಳಲ್ಲಿನ ಘಟನೆಗಳಿಂದ ಪ್ರತ್ಯೇಕಗೊಳಿಸಿ ನೋಡಲು ಸಾಧ್ಯವಿಲ್ಲ.

ಮುಸ್ಲಿಂ–ವಿರೋಧಿ ಅಜೆಂಡಾ ಹರಡಲು ಬಿಜೆಪಿ–ಆರ್ಎಸ್ಎಸ್ ಕೂಟ ವ್ಯವಸ್ಥಿತವಾಗಿ ಕೆಲಸ ಮಾಡುತ್ತಿದೆ. ಮುಸ್ಲಿಮರ ಮೇಲಿನ ದಾಳಿ ನಡೆಯದ ಒಂದು ದಿನವೂ ಕಾಣ ಸಿಗುವುದಿಲ್ಲ. ಮತ್ತು ಸಾಮಾಜಿಕ ಮಾಧ್ಯಮದಲ್ಲಿ ಪ್ರತಿದಿನವೂ ಅಲ್ಪಸಂಖ್ಯಾತರ ವಿರುದ್ಧ ದ್ವೇಷ ಪ್ರಚಾರಗಳು ನಡೆಯುತ್ತಿವೆ. ಬಿಜೆಪಿ ಆಡಳಿತದ ರಾಜ್ಯಗಳಲ್ಲಿ ಇಂಥ ಚಟುವಟಿಕೆಗಳಲ್ಲಿ ತೊಡಗಿರುವ ಹಿಂದುತ್ವ ಸಂಘಟನೆಗಳಿಗೆ ರಕ್ಷಣೆ ನೀಡಲಾಗುತ್ತಿದೆ. ಕರ್ನಾಟಕದಂಥ ಕೆಲವು ರಾಜ್ಯಗಳಲ್ಲಿ ಕ್ರೈಸ್ತರ ಪ್ರಾರ್ಥನಾ ಸ್ಥಳಗಳು ಮತ್ತು ಪ್ರಾರ್ಥನಾ ಸಭೆಗಳ ಮೇಲೆ ದಾಳಿಗಳು ನಡೆದಿವೆ. ಆಳುವ ಪಕ್ಷ ಮತ್ತು ಹಿಂದುತ್ವ ಸಂಘಟನೆಗಳ ಅಲ್ಪಸಂಖ್ಯಾತ–ವಿರೋಧಿ ಅಜೆಂಡಾಗಳು ಕಾಶ್ಮೀರದಲ್ಲಿ ಮೂಲಭೂತವಾದಿ–ಉಗ್ರಗಾಮಿ ಶಕ್ತಿಗಳಿಗೆ ಹೆಚ್ಚಿನ ಪ್ರಚೋದನೆ ಒದಗಿಸುತ್ತವೆ.

ಆಳುವ ವರ್ಗಗಳ ಪಕ್ಷಗಳ ಪೋಷಣೆ

ಇತ್ತೀಚೆಗೆ ಬಾಂಗ್ಲಾದೇಶದಲ್ಲಿ ಮೂಲಭೂತವಾದಿ ಶಕ್ತಿಗಳು ಹಿಂದೂ ಸಮುದಾಯ ಮತ್ತು ದೇವಸ್ಥಾನಗಳ ಮೇಲೆ ದಾಳಿಗಳನ್ನು ನಡೆಸಿದ್ದು ಕಳವಳದ ಸಂಗತಿಯಾಗಿದೆ. ದಕ್ಷಿಣ ಏಷ್ಯಾ ದೇಶಗಳಲ್ಲಿ ಕೋಮುವಾದಿ ರಾಜಕಾರಣ ಮತ್ತು ಮೂಲಭೂತವಾದದ ನಡುವೆ ಅಂತರ್–ಸಂಬಂಧ ಇರುವುದನ್ನು ಇದು ನೆನಪಿಸುತ್ತದೆ. ಕುರಾನ್‌ಗೆ ಅವಮಾನ ಮಾಡಲಾಗಿದೆ ಎಂದು ಸಾಮಾಜಿಕ ಮಾಧ್ಯಮ ಮೂಲಕ ಪ್ರಚಾರ ನಡೆಸಿದ್ದು ದುರ್ಗಾ ಪೂಜಾ ವೇಳೆ ಹಿಂದೂ ಸಮುದಾಯದ ವಿರುದ್ಧ ಭಾವನೆಗಳನ್ನು ಕೆಣಕಲು ನಡೆಸಿದ ಒಂದು ವ್ಯವಸ್ಥಿತ ಯೋಜನೆಯಂತೆ ಕಾಣುತ್ತದೆ. ಬಾಂಗ್ಲಾ ದೇಶದಾದ್ಯಂತ ನಡೆದ ಕೋಮು ಹಿಂಸಾಚಾರದ 17 ಘಟನೆಗಳಲ್ಲಿ ಆರು ಜನರು ಮೃತಪಟ್ಟಿದ್ದಾರೆ. ಕೋಮು ಸಮಸ್ಯೆ ಸೃಷ್ಟಿಸುವವರ ಬಗ್ಗೆ ದೃಢವಾಗಿ ವರ್ತಿಸುವುದಾಗಿ ಶೇಖ್ ಹಸೀನಾ ಸರ್ಕಾರ ಹೇಳಿದೆ. ಈಗಾಗಲೇ ನೂರಾರು ದೊಂಬಿಕೋರರನ್ನು ಬಂಧಿಸಲಾಗಿದೆ. ಭಾರತದಲ್ಲಿ ನಡೆಯುತ್ತಿರುವ ಮುಸಿಂ–ವಿರೋಧಿ ಹಿಂಸಾಚಾರಗಳು ಬಾಂಗ್ಲಾದೇಶದೊಳಗಿನ ಮೂಲಭೂತವಾದಿ ಶಕ್ತಿಗಳಿಗೆ ಪ್ರೇರಣೆ ನೀಡಿವೆ ಎಂದು ಬಾಂಗ್ಲಾದ ರಾಜಕೀಯ ವಿಶ್ಲೇಷಕರು ಅಭಿಪ್ರಾಯ ಪಟ್ಟಿದ್ದಾರೆ.

ದಕ್ಷಿಣ ಏಷ್ಯಾದ್ಯಂತ ಧಾರ್ಮಿಕ ಹಾಗೂ ಜನಾಂಗೀಯ ಅಲ್ಪಸಂಖ್ಯಾತರು ಬಹುಸಂಖ್ಯಾತ ಸಮುದಾಯಗಳ ಮೂಲಭೂತವಾದಿ ಹಾಗೂ ಕೋಮುವಾದಿ ಶಕ್ತಿಗಳ ಆಕ್ರಮಣಗಳಿಗೆ ತುತ್ತಾಗುತ್ತಿದ್ದಾರೆ. ಶ್ರೀಲಂಕಾದಲ್ಲಿ ಬೌದ್ಧ ಧರ್ಮದ ಮತಾಂಧ ಶಕ್ತಿಗಳು ಅಲ್ಲಿನ ಅಲ್ಪಸಂಖ್ಯಾತರನ್ನು ಗುರಿ ಮಾಡುತ್ತಿವೆ; ಪಾಕಿಸ್ತಾನದಲ್ಲಿ ಧಾರ್ಮಿಕ ಅಲ್ಪಸಂಖ್ಯಾತರು ಮಾತ್ರವಲ್ಲದೆ ಅಲ್ಪಸಂಖ್ಯಾಕ ಷಿಯಾಗಳು ಕೂಡ ನಿರಂತರವಾಗಿ ಹಿಂಸಾಚಾರದ ಭಯದ ವಾತಾವರಣದಲ್ಲಿ ಬದುಕುತ್ತಿದ್ದಾರೆ. ತಾಲಿಬಾನ್ ಆಡಳಿತಕ್ಕೆ ಬಂದಿರುವ ಅಫ್ಘಾನಿಸ್ತಾನದಲ್ಲಿ ಧಾರ್ಮಿಕ ಮತ್ತು ಜನಾಗೀಯ ಅಲ್ಪಸಂಖ್ಯಾತರು ನೆಮ್ಮದಿಯಿಂದ ಬದುಕುವಂತಿಲ್ಲ.

ದಕ್ಷಿಣ ಏಷ್ಯಾ ದೇಶಗಳ ಆಳುವ ವರ್ಗಗಳ ಪಕ್ಷಗಳು ಮತಾಂಧತೆಯನ್ನು ಮತ್ತು ಜನಾಂಗೀಯ ರಾಷ್ಟ್ರವಾದವನ್ನು ಪೋಷಿಸುತ್ತಿವೆ. ಈ ಪೈಕಿ ಅತಿ ದೊಡ್ಡ ಹಾಗೂ ಬಲಿಷ್ಠ ದೇಶವಾಗಿರುವ. ಭಾರತದಲ್ಲಿನ ಹಿಂದುತ್ವ ಕೋಮುವಾದ ಮತ್ತು ಹಿಂದೂ ರಾಷ್ಟ್ರವಾದವು ನೆರೆಯ ದೇಶಗಳಲ್ಲಿ ಅನಿವಾರ್ಯವಾಗಿ ಸಮಾನಾಂತರ ಸ್ಪಂದನೆಯನ್ನು ಹುಟ್ಟುಹಾಕುತ್ತದೆ. ಈ ಸಮಾಜಗಳಲ್ಲಿನ ಸಂಕೀರ್ಣ ಧಾರ್ಮಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಪ್ರದಾಯಗಳು ಅಂಥದ್ದಕ್ಕೆ ಅವಕಾಶ ಕಲ್ಪಿಸುತ್ತವೆ

ಸಮತ್ವಪೂರ್ಣ ಅಭಿವೃದ್ಧಿಯ ಮತ್ತು ಜನರ ಕಲ್ಯಾಣದ ರಾಜಕೀಯದ ಬುನಾದಿ ಹೊಂದಿರುವ ಜಾತ್ಯತೀತ ಮತ್ತು ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಎತ್ತಿ ಹಿಡಿಯುವುದರಿಂದ ಮಾತ್ರವೇ ಇಡೀ ದಕ್ಷಿಣ ಏಷ್ಯಾದ ಉತ್ತಮ ಭವಿಷ್ಯ ಮತ್ತು ಪ್ರಗತಿಯ ಹಾದಿಯನ್ನು ತೆರೆಯಬಹುದಾಗಿದೆ.

'ಪೀಪಲ್ಸ್ ಡೆಮಾಕ್ರಸಿ' ಅನು: ವಿಶ್ವ

ಬೆಲೆ ಏರಿಕೆ ವಿರುದ್ಧ ಗ್ರಾಮಗಳಿಂದ ನಗರಗಳ ವರೆಗೆ ವ್ಯಾಪಕ ಪ್ರತಿಭಟನೆಗೆ ಸಿಪಿಐ(ಎಂ) ಕೇಂದ್ರ ಸಮಿತಿ ಕರೆ



ಪುಟ 2 ರಿಂದ

ಭಾರತದ ರಾಷ್ಟ್ರೀಯ ಸೊತ್ತುಗಳ ಲೂಟಿ

ಎಲ್ಲಾ ರಾಷ್ಟ್ರೀಯ ಸೊತ್ತುಗಳ/ಸಾರ್ವಜನಿಕ ವಲಯದ ಉದ್ದಿಮೆಗಳ ಸಾರಾಸಗಟು ಖಾಸಗೀಕರಣದ ಹತಾಶ ಕಸರತ್ತು ನಡೆಯುತ್ತಿದೆ. ರಾಷ್ಟ್ರೀಯ ನಗದೀಕರಣ ಕ್ರಮಾಚರಣೆ(ಎನ್.ಎಂ.ಪಿ.) ಖಾಸಗಿ ಕಾರ್ಪೊರೇಟ್‌ಗಳಿಗೆ ವಿಶಾಲವಾದ ಮೂಲಸೌಕರ್ಯ ಸೊತ್ತುಗಳು/ಯಂತ್ರೋಪಕರಣಗಳನ್ನು ವರ್ಗಾಯಿಸುವ ಮೂಲಕ, ಸುಮಾರಾಗಿ ಪುಕ್ಕಟೆಯಾಗಿಯೇ ಭಾರತದ ಮಾರಾಟ ನಡೆಯುತ್ತದೆ ಎಂದೇ ಹೇಳಬಹುದಾಗಿದೆ. ಇದರಲ್ಲಿ ಇತ್ತೀಚಿನದು ಟಾಟಾಗಳಿಗೆ ನೀಡುತ್ತಿರುವ ಏರ್ ಇಂಡಿಯಾದ ಉಚಿತ ಉಡುಗೊರೆ. ಸಾರ್ವಜನಿಕ ವಲಯದ ಬ್ಯಾಂಕ್‌ಗಳ ಖಾಸಗೀಕರಣಕ್ಕೆ ಅನುಕೂಲವಾಗುವಂತೆ ಬ್ಯಾಂಕ್ ರಾಷ್ಟ್ರೀಕರಣ ಕಾಯ್ದೆಗೆ ತಿದ್ದುಪಡಿ ಮಸೂದೆಗಳನ್ನು ತರುವಲ್ಲಿ ಸರ್ಕಾರ ಈಗಾಗಲೇ ಮುಂದುವರಿದ ಹಂತದಲ್ಲಿದೆ.

ಈ ವಿನಾಶಕಾರಿ ಕ್ರಮಗಳ ವಿರುದ್ಧ ವಿವಿಧ ವಲಯಗಳಲ್ಲಿ ಕಾರ್ಮಿಕ ಸಂಘಟನೆಗಳ ಆಂದೋಲನಗಳು ನಡೆಯುತ್ತಿವೆ. ಕೇಂದ್ರ ಕಾರ್ಮಿಕ ಸಂಘಟನೆಗಳು/ ಒಕ್ಕೂಟಗಳು ಈ ವಿಷಯಗಳ ಕುರಿತು ದೇಶವ್ಯಾಪಿ ಹೋರಾಟಗಳನ್ನು ಆರಂಭಿಸಲು ಮುಂದಾಗುತ್ತಿವೆ.

ಕೇಂದ್ರ ಸಮಿತಿಯು ಹೀಗೆ ನಡೆಯುತ್ತಿರುವ ಕಾರ್ಮಿಕ ವರ್ಗದ ಈ ಐಕ್ಯ ಹೋರಾಟಗಳಿಗೆ ತನ್ನ ಸಂಪೂರ್ಣ ಬೆಂಬಲವನ್ನು ನೀಡುತ್ತದೆ.

ಕೊವಿಡ್ ಮಹಾ ಸಾಂಕ್ರಾಮಿಕ

ಕೋವಿಡ್ ಮಹಾಸಾಂಕ್ರಾಮಿಕದ ತನ್ನ ಅಸಮರ್ಪಕ ನಿರ್ವಹಣೆಯನ್ನು ಮತ್ತು ಲಸಿಕೀಕರಣದಲ್ಲಿ ಮುಗ್ಗರಿಸಿರುವುದನ್ನು ಮುಚ್ಚಿಹಾಕಲು, ಮೋದಿ ಸರ್ಕಾರವು ನೂರು ಕೋಟಿ ಲಸಿಕೆಗಳನ್ನು ನೀಡುವ 'ಆಚರಣೆ'ಗಳನ್ನು ಆಯೋಜಿಸುವ ಮೂಲಕ ಜನರ ಗಮನವನ್ನು ಬೇರೆಡೆಗೆ ಸೆಳೆಯಲು ಪ್ರಯತ್ನಿಸಿದೆ. ಈ ಮೈಲಿಗಲ್ಲನ್ನು, ವಿಳಂಬವಾಗಿಯಾದರೂ ತಲುಪಿರುವುದು ಶ್ಲಾಘನೀಯವಾಗಿದ್ದರೂ, ನಮ್ಮ ಜನಸಂಖ್ಯೆಯಲ್ಲಿ ಕೇವಲ 21% ಮಾತ್ರ ಸಂಪೂರ್ಣ ಲಸಿಕೆ ಹಾಕಲಾಗಿದೆ ಎಂಬುದನ್ನು ಗಮನಿಸಬೇಕು. ವರ್ಷಾಂತ್ಯದ ವೇಳೆಗೆ ಭಾರತದ ವಯಸ್ಕ ಜನಸಂಖ್ಯೆಗೆ ಸಂಪೂರ್ಣವಾಗಿ ಲಸಿಕೆ ಹಾಕುವುದಾಗಿ ಮೋದಿ ಸರ್ಕಾರವು ನೀಡಿದ ಭರವಸೆಯನ್ನು ಸ್ಪಷ್ಟವಾಗಿ ಕೈಬಿಟ್ಟು, ಗುರಿಯನ್ನು ಈಗ ಜನಸಂಖ್ಯೆಯ 60 ಶೇಕಡಾಕ್ಕೆ ಎಂದು ಪರಿಷ್ಕರಿಸಲಾಗಿದೆ. ಇದು ಸಹ ಪ್ರತಿದಿನ 1.5 ಕೋಟಿ ಲಸಿಕೆಗಳನ್ನು ನೀಡದ ಹೊರತು ಸಾಧ್ಯವಿಲ್ಲ. ಲಸಿಕೀಕರಣ ದರವು ಇಳಿಯುತ್ತಿದೆ, ಪ್ರಸ್ತುತ ದಿನಕ್ಕೆ 40 ಲಕ್ಷಕ್ಕಿಂತ ಕಡಿಮೆ ಇದೆ.

ಹೊಸ ಕೋವಿಡ್ ಪ್ರಕರಣಗಳು ಮತ್ತೊಮ್ಮೆ ಹೆಚ್ಚುತ್ತಿರುವಾಗ ಇದು ಆತಂಕಕಾರಿಯಾಗಿದೆ. ಪ್ರತಿದಿನ ಸುಮಾರು 16,000 ಹೊಸ ಪ್ರಕರಣಗಳು ವರದಿಯಾಗುತ್ತಿದ್ದು, 650 ಕ್ಕೂ ಹೆಚ್ಚು ಸಾವುಗಳು ಸಂಭವಿಸುತ್ತಿವೆ.

ಜನರ ಮೇಲೆ ಇನ್ನೂ ಹೆಚ್ಚು ಸಂಕಟಗಳನ್ನು ಉಂಟುಮಾಡುವ ಯಾವುದೇ ಮತ್ತಷ್ಟು ಆರೋಗ್ಯ ಅನಾಹುತ ಸಂಭವಿಸದಂತೆ ತಡೆಗಟ್ಟಲು ಲಸಿಕೀಕರಣದ ವೇಗವನ್ನು ಹೆಚ್ಚಿಸಬೇಕೆಂದು ಕೇಂದ್ರ ಸಮಿತಿಯು ಆಗ್ರಹಿಸುತ್ತದೆ.

ಜಮ್ಮು ಮತ್ತು ಕಾಶ್ಮೀರ

ಕೇಂದ್ರ ಗೃಹ ಸಚಿವರು ನೂರಾರು ಜನರನ್ನು ದಸ್ತಗಿರಿ ಮಾಡಿ ಬೃಹತ್ ಮಿಲಿಟರಿ ಕೋಟೆ ನಿರ್ಮಿಸಿಕೊಂಡು ಅದರ ಮರೆಯಲ್ಲಿ ಜಮ್ಮು ಮತ್ತು ಕಾಶ್ಮೀರಕ್ಕೆ ಭೇಟಿ ನೀಡಿದ್ದಾರೆ. ಕಲಮು 370 ರದ್ದು ಮತ್ತು ಹಿಂದಿನ ಜಮ್ಮು ಮತ್ತು ಕಾಶ್ಮೀರದ ರಾಜ್ಯದ ವಿಸರ್ಜನೆಯೊಂದಿಗೆ ಪರಿಸ್ಥಿತಿ ಸುಧಾರಿಸಿದೆ ಎಂಬ ನಗೆಪಾಟಲಿನ ದಾವೆ ಹೂಡಿದ್ದಾರೆ.

ಇತ್ತೀಚೆಗೆ ನಾಗರಿಕರನ್ನು ಗುರಿಯಿಟ್ಟು ನಡೆದಿರುವ ಸರಣಿ ಹತ್ಯೆಗಳು 1990 ರ ದಶಕದಲ್ಲಿ ಇದ್ದಂತಹ ಪರಿಸ್ಥಿತಿಯನ್ನು ಹೋಲುವಂತದ್ದು.. ಇದು ಆತಂಕಕಾರಿಯಾಗಿದೆ.

ಪ್ರಜಾಪ್ರಭುತ್ವ ರಾಜಕೀಯ ಪ್ರಕ್ರಿಯೆಯ ಮರುಸ್ಥಾಪನೆಯೊಂದಿಗೆ ಜನರ ಸಹಭಾಗಿತ್ವವನ್ನು ಸ್ಥಾಪಿಸದ ಹೊರತು, ಈ ಹೆಚ್ಚುತ್ತಿರುವ ಉಗ್ರಗಾಮಿ ಹಿಂಸಾಚಾರವನ್ನು ಎದುರಿಸುವುದು ಕಷ್ಟಕರವಾಗುತ್ತದೆ.

ಕೇಂದ್ರ ಸಮಿತಿಯು ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ತಕ್ಷಣವೇ ಮರುಸ್ಥಾಪಿಸಬೇಕು, ಎಲ್ಲಾ ರಾಜಕೀಯ ಬಂಧಿಗಳನ್ನು ಬಿಡುಗಡೆ ಮಾಡಬೇಕು, ಮಾಧ್ಯಮಗಳ ಮೇಲಿನ ನಿರ್ಬಂಧಗಳನ್ನು ಕೊನೆಗೊಳಿಸಬೇಕು ಮತ್ತು ನಿರ್ದಿಷ್ಟವಾಗಿ ಜಮ್ಮು ಮತ್ತು ಕಾಶ್ಮೀರದಲ್ಲಿ ಯುವಕರನ್ನು ಮನಬಂದಂತೆ ಬಂಧಿಸುವುದನ್ನು ನಿಲ್ಲಿಸಬೇಕು ಎಂದು ಆಗ್ರಹಿಸುತ್ತದೆ.

ಸಿಪಿಐ (ಎಂ)ನ ಅರ್ಜಿ ಸೇರಿದಂತೆ ಭಾರತೀಯ ಸಂವಿಧಾನದ 370 ಮತ್ತು 35 ಎ ವಿಧಿಗಳನ್ನು ರದ್ದುಗೊಳಿಸುವ ಸಾಂವಿಧಾನಿಕ ಸಿಂಧುತ್ವವನ್ನು ಪ್ರಶ್ನಿಸಿರುವ ಅರ್ಜಿಗಳನ್ನು ಪರಿಗಣಿಸುವುದನ್ನು ಆರಂಭಿಸಬೇಕು ಎಂದು ಕೇಂದ್ರ ಸಮಿತಿಯು ಸುಪ್ರೀಂ ಕೋರ್ಟನ್ನು ಒತ್ತಾಯಪೂರ್ವಕವಾಗಿ ವಿನಂತಿಸುತ್ತದೆ.

ವಿದ್ಯುತ್ ಬೆಲೆಗಳನ್ನು ನಿಯಂತ್ರಿಸಿ

ಆಮದು ಮಾಡಿದ ಕಲ್ಲಿದ್ದಲನ್ನೇ ಅವಲಂಬಿಸಿರುವ ಖಾಸಗಿ ಕಾರ್ಪೊರೇಟ್ ಗಳ ಒಡೆತನದ ವಿದ್ಯುತ್ ಉತ್ಪಾದಿಸುವ ಘಟಕಗಳು ಅಂತಾರಾಷ್ಟ್ರೀಯ ಕಲ್ಲಿದ್ದಲು ಬೆಲೆ ಏರಿಕೆಯ ಹೊರೆಯನ್ನು ಪ್ರತಿ ಯೂನಿಟ್ ವಿದ್ಯುತ್ ಗೆ ಹೆಚ್ಚಿನ ದರಗಳನ್ನು ವಿಧಿಸುವ ಮೂಲಕ ಗ್ರಾಹಕರ ತಲೆಯ ಮೇಲೆ ವರ್ಗಾಯಿಸುತ್ತಿದೆ. ದೇಶದೊಳಗೆ ಕಲ್ಲಿದ್ದಲಿನ ಕೊರತೆ ಇಲ್ಲ. ಮೋದಿ ಸರ್ಕಾರದ ಖಾಸಗೀಕರಣ, ನಿಯಂತ್ರಣ ರದ್ಧತಿ ಮತ್ತು ವಿದ್ಯುತ್/ ಇಂಧನ ಕ್ಷೇತ್ರದ ಸಂಪೂರ್ಣ ಕಳಪೆ ನಿರ್ವಹಣೆ ಈ ಬಿಕ್ಕಟ್ಟನ್ನು ಸೃಷ್ಟಿಸಿದೆ. ಇದು ತೀವ್ರ ವಿದ್ಯುತ್ ಕೊರತೆಗಳಿಗೂ ಕಾರಣವಾಗುತ್ತಿದೆ. ಈಗಾಗಲೇ ನರಳುತ್ತಿರುವ ಜನರ ಮೇಲೆ ಇನ್ನಷ್ಟು ಸಂಕಷ್ಟಗಳನ್ನು ಉಂಟುಮಾಡುವ ಮತ್ತು ಆರ್ಥಿಕ ಚಟುವಟಿಕೆಯ ಮೇಲೆ ಪ್ರತಿಕೂಲ ಪರಿಣಾಮ ಬೀರುವ ಯಾವುದೇ ವಿದ್ಯುತ್ ಕಡಿತವಾಗದಂತೆ ಖಾತ್ರಿಪಡಿಸುವುದು ಕೇಂದ್ರ ಸರ್ಕಾರದ ಜವಾಬ್ದಾರಿಯಾಗಿದೆ.

ಇದನ್ನು ಖಚಿತಪಡಿಸಲು ಕೇಂದ್ರ ಸರ್ಕಾರವು ಸರಿಯಾದ ನಿಯಮಾವಳಿಗಳನ್ನು ಮತ್ತು ತುರ್ತು ಕ್ರಮಗಳನ್ನು ಕೈಗೊಳ್ಳಬೇಕು ಎಂದು ಕೇಂದ್ರ ಸಮಿತಿ ಆಗ್ರಹಿಸುತ್ತದೆ.

ಜಾತಿ ಗಣತಿ

2021 ರ ಜನಗಣತಿಯೊಂದಿಗೆ ಜಾತಿ ಗಣತಿಯನ್ನು ನಡೆಸಬೇಕೆಂಬ ಪಕ್ಷದ ಬೇಡಿಕೆಯನ್ನು ಕೇಂದ್ರ ಸಮಿತಿಯು ಪುನರುಚ್ಚರಿಸಿದೆ.

ಅಂತಹ ಜನಗಣತಿಯನ್ನು ನಡೆಸಲು ಸಂಸತ್ತು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವಂತೆ ಕೇಂದ್ರ ಸರಕಾರ ಖಚಿತಪಡಿಸಬೇಕು,



ಸಿಪಿಐ(ಎಂ)ನ 23ನೇ ಮಹಾಧಿವೇಶನ

ಏಪ್ರಿಲ್ 2022 ರಲ್ಲಿ ಕೇರಳದ ಕಣ್ಣೂರಿನಲ್ಲಿ ನಡೆಯಲಿರುವ ಪಕ್ಷದ 23 ನೇ ಮಹಾಧಿವೇಶನದ ಮುಂದೆ ಮಂಡಿಸಬೇಕಾದ ಕರಡು ರಾಜಕೀಯ ನಿರ್ಣಯದ ರೂಪುರೇಷೆಯನ್ನು ಕೇಂದ್ರ ಸಮಿತಿಯು ಚರ್ಚಿಸಿತು. ಪಕ್ಷದ ಮಹಾಧಿವೇಶನದ ಮುಂದೆ ಮಂಡಿಸಲು ಕೇಂದ್ರ ಸಮಿತಿಯು ಪರಿಗಣಿಸಿ ಅಂತಿಮಗೊಳಿಸಬೇಕಾದ ಕರಡನ್ನು ಪೊಲಿಟ್‌ಬ್ಯುರೊ ಸಿದ್ಧಪಡಿಸುತ್ತದೆ.



ತ್ರಿಪುರಾ ಎಡರಂಗ ಅಧ್ಯಕ್ಷ ಬಿಜನ್ ಧರ್ ನಿಧನ

ತ್ರಿಪುರಾದ ಎಡರಂಗ ಸಮಿತಿಯ ಅಧ್ಯಕ್ಷರೂ, ಸಿಪಿಐ(ಎಂ) ಕೇಂದ್ರ ಸಮಿತಿಯ ಸದಸ್ಯರೂ ಹಾಗೂ ತ್ರಿಪುರಾ ರಾಜ್ಯ ಸಮಿತಿಯ ಮಾಜಿ ಕಾರ್ಯದರ್ಶಿಯೂ ಅಗಿದ್ದ ಬಿಜನ್ ಧರ್ ಅಕ್ಟೋಬರ್ 11ರ ಬೆಳಿಗ್ಗೆ ನಿಧನರಾಗಿದ್ದಾರೆ. ಸಿಪಿಐ(ಎಂ) ಪೊಲಿಟ್‌ಬ್ಯುರೊ ಅವರ ನಿಧನಕ್ಕೆ ತೀವ್ರ ಆಘಾತ ಮತ್ತು ದುಃಖವನ್ನು ವ್ಯಕ್ತಪಡಿಸಿದೆ. ಅವರು ಕೋಲ್ಕತಾ ಆಸ್ಪತ್ರೆಯಲ್ಲಿ ಕೋವಿಡ್‌ಗೆ ಚಿಕಿತ್ಸೆ ಪಡೆಯುತ್ತಿದ್ದರು. ಅವರಿಗೆ 70 ವರ್ಷ ವಯಸ್ಸಾಗಿತ್ತು.

1970 ರ ದಶಕದಲ್ಲಿ ವಿದ್ಯಾರ್ಥಿ ಚಳವಳಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದ ಬಿಜನ್ ಧರ್ 1978 ರಲ್ಲಿ ಪಕ್ಷದ 10 ನೇ ರಾಜ್ಯ ಸಮ್ಮೇಳನದಲ್ಲಿ ಪಕ್ಷದ ರಾಜ್ಯ ಸಮಿತಿಗೆ ಆಯ್ಕೆಯಾದರು ಮತ್ತು 1995 ರಲ್ಲಿ ರಾಜ್ಯ ಕಾರ್ಯದರ್ಶಿ ಮಂಡಳಿಯ ಸದಸ್ಯರಾದರು. 2008 ರಲ್ಲಿ 19 ನೇ ರಾಜ್ಯ ಸಮ್ಮೇಳನದಲ್ಲಿ ಅವರು ಪಕ್ಷದ ತ್ರಿಪುರಾ ರಾಜ್ಯ ಸಮಿತಿಯ ಕಾರ್ಯದರ್ಶಿಯಾಗಿ ಆಯ್ಕೆಯಾದರು ಮತ್ತು ಆ ಹುದ್ದೆಯಲ್ಲಿ 2018 ರವರೆಗೆ ಮುಂದುವರಿದರು. ಅವರು 2002ರಲ್ಲಿ ಸಿಪಿಐ(ಎಂ)ನ 17 ನೇ ಮಹಾಧಿವೇಶನದಲ್ಲಿ ಕೇಂದ್ರ ಸಮಿತಿಗೆ ಆಯ್ಕೆಯಾದರು. ಸುಮಾರು ಒಂದು ದಶಕದ ಕಾಲ ರಾಜ್ಯ ಸಮಿತಿಯ ಕಾರ್ಯದರ್ಶಿಯಾಗಿ, ಪಕ್ಷದ ಸಂಘಟನೆಯನ್ನು ಕಟ್ಟುವಲ್ಲಿ ಅವರು ಮಹತ್ವದ ಕೊಡುಗೆ ನೀಡಿದರು. 2018 ರಿಂದ ಅವರು ರಾಜ್ಯದಲ್ಲಿ ಎಡ ರಂಗ ಸಮಿತಿಯ ಸಂಚಾಲಕರಾಗಿದ್ದರು.

1975–77 ರಲ್ಲಿ ತುರ್ತುಪರಿಸ್ಥಿತಿಯ ಸಮಯದಲ್ಲಿ, ಅವರು ಒಂದು ವರ್ಷಕ್ಕೂ ಹೆಚ್ಚು ಕಾಲ ಭೂಗತರಾಗಿದ್ದರು ಮತ್ತು ನಂತರ ಅವರನ್ನು ಬಂಧಿಸಲಾಯಿತು, ಐದು ತಿಂಗಳು ಜೈಲು ಶಿಕ್ಷೆ ವಿಧಿಸಲಾಯಿತು

ವಿದ್ವಾಂಸರೂ ಮತ್ತು ಮಾರ್ಕ್ಸ್‌ವಾದಿ ಸಿದ್ಧಾಂತವನ್ನು ಚೆನ್ನಾಗಿ ತಿಳಿದಿದ್ದವರೂ ಆಗಿದ್ದ ಬಿಜನ್ ಧರ್ ರಾಜ್ಯದಲ್ಲಿ ಪಕ್ಷದ ಕಾರ್ಯಕರ್ತರಿಗೆ ಶಿಕ್ಷಣ ನೀಡುವಲ್ಲಿ ಅಪಾರ ಕೊಡುಗೆ ನೀಡಿದರು.

ವಿವಿಧ' ಆರೋಗ್ಯ ತೊಡಕುಗಳ ಹೊರತಾಗಿಯೂ, ಬಿಜನ್ ಧರ್, ಉನ್ನತ ಮಟ್ಟದ ಬದ್ಧತೆಯೊಂದಿಗೆ ಅವಿರತವಾಗಿ ಕೆಲಸ ಮಾಡುವುದನ್ನು ಮುಂದುವರೆಸಿದರು., ಪಕ್ಷವು ತ್ರಿಪುರಾದಲ್ಲಿ ದುಷ್ಟ ಮತ್ತು ಹಿಂಸಾತ್ಮಕ ದಾಳಿಗಳನ್ನು ಎದುರಿಸುತ್ತಿರುವ ಸಮಯದಲ್ಲಿ, ಕಳೆದ ತಿಂಗಳು ಗೌತಮ್ ದೇಬ್‌ವರ ನಿಧನದ ಬೆನ್ನಲ್ಲೇ ಧರ್ ಅವರ ನಿರ್ಗಮನ ಪಕ್ಷಕ್ಕೆ ಒಂದು ಬಹು ದೊಡ್ಡ ನಷ್ಟ ಎಂದಿರುವ ಪೊಲಿಟ್‌ಬ್ಯೂರೊ, ಅವರ ತನ್ನ ಪತ್ನಿ ಇಳಾ ದಾಸ್‌ಗುಪ್ತ, ಮಗಳು ಗೋಪಾ ಧರ್ ಮತ್ತು ಅವರ ಕುಟುಂಬದ ಇತರ ಸದಸ್ಯರಿಗೆ ಹೃತ್ಪೂರ್ವಕ ಸಂತಾಪವನ್ನು ವ್ಯಕ್ತಪಡಿಸಿದೆ.

JANASHAKTHI KANNADA VARA PATRIKE NOVEMBER 1-7, 2021 Price: Rs. 10/- Date of Publication: 29 October 2021 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21

ಖಾಸಗಿ ಮತ್ತು ಸಾರ್ವಜನಿಕ ಉದ್ಯಮಗಳು, ಸರ್ಕಾರದ ಧೋರಣೆಗಳು ಹಾಗೂ ರಾಜಕೀಯ ಪರಿಹಾರ – ವಿಚಾರ ಸಂಕಿರಣ



ಬೆಂಗಳೂರು ಉತ್ತರ 23 ನೇ ಜಿಲ್ಲಾ ಸಮ್ಮೇಳನದ ಭಾಗವಾಗಿ 27 ಅಕ್ಟೋಬರ್ ರಂದು ಫೆಡರಲ್ ಮೊಗಲ್ ಕಾರ್ಮಿಕರ ಸಂಘದ ಕಛೇರಿಯಲ್ಲಿ ಖಾಸಗಿ ಮತ್ತು ಸಾರ್ವಜನಿಕ ಉದ್ಯಮಗಳು, ಸರ್ಕಾರದ ಧೋರಣೆಗಳು ಹಾಗೂ ರಾಜಕೀಯ ಪರಿಹಾರ ವಿಚಾರ ಸಂಕಿರಣ ನಡೆಯಿತು. ಸಿಪಿಐಎಂ ರಾಜ್ಯ ಮುಖಂಡರಾದ ಕಾಮ್ರೇಡ್ ಮೀನಾಕ್ಷಿ ಸುಂದರಂ ರವರು ವಿಷಯ ಮಂಡಿಸಿದರು. ಪಕ್ಷದ ಬೆಂ.ಉ. ಜಿಲ್ಲಾ ಕಾರ್ಯದರ್ಶಿ ಕಾಮ್ರೇಡ್ ಪ್ರತಾಪ್ ಸಿಂಹ, BELEU ಮುಖಂಡರಾದ ಕಾಮ್ರೇಡ್ ಸುಬ್ರಮಣ್ಯಮ್, ಫೆಡರಲ್ ಮೊಗಲ್ ಕಾರ್ಮಿಕರ ಮುಖಂಡರಾದ ಕಾಮ್ರೇಡ್ ಮಲ್ಲಿಕಾರ್ಜುನ, ಐಟಿಸಿ ಕಾರ್ಮಿಕರ ಸಂಘದ ಮುಖಂಡರಾದ ಬಾಲಕೃಷ್ಣೇಗೌಡ ರವರು ಮಾತನಾಡಿದರು. ಆರ್.ಎಲ್ ಫೈನ್ ಕೆಮ್ ಕಾರ್ಮಿಕರ ಮುಖಂಡರಾದ ಬಿದ್ಯುತ್ ಭಟ್ಟಾಚಾರ್ಯ, ಸಿಪಿಐಎಂ ವಲಯ ಕಾರ್ಯದರ್ಶಿ ಹುಳ್ಳಿ ಉಮೇಶ್ ರವರು ಮಾತನಾಡಿದರು. ವಿಚಾರ ಸಂಕಿರಣದಲ್ಲಿ ಭಾಗವಹಿಸಿದ್ದ ಯಾರ್ನ್ ಫ್ಲಾಕ್ಸ್ ಕಾರ್ಮಿಕರ ಸಂಘದ ಮುಖಂಡರಾದ ನರಸಿಂಹ ಮೂರ್ತಿ, ಬೆಂಗಳೂರು ಜಿಲ್ಲಾ ಅಸಂಗಟಿತ ಕಾರ್ಮಿಕ ಸಂಘದ ಮುಖಂಡರಾದ ಸೇರಿದಂತೆ ಮುಂತಾದವರು ಭಾಗವಹಿಸಿದ್ದರು.

ಪಕ್ಷದ ಜಿಲ್ಲಾ ಸಮಿತಿ ಸದಸ್ಯರಾದ ಕಾಮ್ರೇಡ್ ಹನುಮಂತರಾವ್ ಹವಲ್ದಾರ್ ರವರು ಅಧ್ಯಕ್ಷತೆ ವಹಿಸಿದರು. ಸಿಪಿಐಎಂ ಯಲಹಂಕ ಶಾಖೆ ಸದಸ್ಯರಾದ ಕಾಮ್ರೇಡ್ ಪುಷ್ಪಲತ ವಂದಿಸಿದರು.



ಹಗರಿಬೊಮ್ಮನಹಳ್ಳಿ ತಾಲ್ಲೂಕು ಸಮ್ಮೇಳನ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಹಗರಿಬೊಮ್ಮನಹಳ್ಳಿ ತಾಲ್ಲೂಕಿನ 9 ನೇ ತಾಲೂಕು ಸಮ್ಮೇಳನವನ್ನು ಪಕ್ಷದ ಜಿಲ್ಲಾ ಕಾರ್ಯದರ್ಶಿ ಅರ್. ಎಸ್. ಬಸವರಾಜ ಉದ್ಘಾಟಿಸಿದರು. ಪಕ್ಷದ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಅರ್. ಬಾಸ್ಕರ ರೆಡ್ಡಿ ಮಾತನಾಡಿ, ಜಿಲ್ಲಾ ಕಾರ್ಯದರ್ಶಿ ಮಂಡಳಿಯ ಸದಸ್ಯರಾದ ಬಿ. ಮಾಳಮ್ಮ, ತಾಲೂಕು ಸಮಿತಿ ಸದಸ್ಯರಾದ ಚಾಂದ್ ಬಿ, ಗಾಳೆಪ್ಪ.ಕೆ ವರದಪುರ ಇವರುಗಳು ವೇದಿಕೆಯಲ್ಲಿ ಇದ್ದರು. ಅಧ್ಯಕ್ಷತೆಯನ್ನು ಕೊಟಗಿ ಮಲ್ಲಿಕಾರ್ಜುನ ವಹಿಸಿದ್ದರು. ತಾಲೂಕು ಕಾರ್ಯದರ್ಶಿ ಎಸ್. ಜಗನ್ನಾಥ ಸ್ವಾಗತಿಸಿದರು. ತಾಲೂಕು ಸಮಿತಿ ಸದಸ್ಯರಾದ ಸರೋಜಮ್ಮ ವಂದನಾರ್ಪಣೆ ಮಾಡಿದರು. ತಾಲ್ಲೂಕು ಕಾರ್ಯದರ್ಶಿಯಾಗಿ ಮಾಳಮ್ಮ ಆಯ್ಕೆಯಾದರು.





ಸಿಪಿಐ(ಎಂ) ಹೊಸಪೇಟೆ ತಾಲ್ಲೂಕು 11 ನೇ ಸಮ್ಮೇಳನವನ್ನು ಪಕ್ಷದ ರಾಜ್ಯ ಕಾರ್ಯದರ್ಶಿ ಯು. ಬಸವರಾಜು ಉದ್ಘಾಟನೆ ಮಾಡಿ ಮತನಾಡಿದರು, ಸಭೆಯಲ್ಲಿ ಜಿಲ್ಲಾ ಕಾರ್ಯದರ್ಶಿ ಅರ್. ಎಸ್.ಬಸವರಾಜ ಮುಖಂಡರಾದ ಅರ್.ಬಾಸ್ಕರಡ್ಡಿ, ಕರುಣಾನಿಧಿ, ಕೆ.ನಾಗರತ್ನಮ್ಮ ಇವರುಗಳು ಮಾತನಾಡಿದರು ಹಾಗೂ ವೇದಿಕೆಯಲ್ಲಿ ಸ್ವಪ್ನ, ಶಾಕುಂತಲಮ್ಮ, ಗೊಪಾಲ, ಇದ್ದರು ಸ್ವಾಗತವನ್ನು ಸ್ವಾಮಿ ವಂಡ್ರಹಳ್ಳಿ ಮಾಡಿದರು, ಸಭೆಯ ಅಧ್ಯಕ್ಷತೆಯನ್ನು ಎಂ.ಜಂಬಯ್ಯ ನಾಯಕ ವಹಿಸಿದ್ದರು.



ಗಂಗಾವತಿ ತಾಲೂಕು ಸಿಪಿಐಎಂ 8 ನೇ ತಾಲ್ಲೂಕು ಸಮ್ಮೇಳನದ ದ್ವಜಾರೋಹಣವನ್ನು ಕಾಂ.ಹುಲಗಪ್ಪ ಹೊಸಪೇಟೆ ಅವರು ಮಾಡಿದರು.



ಹೊನ್ನಾವರ ತಾಲ್ಲೂಕು ಸಮ್ಮೇಳನ

ಸಿಪಿಐಎಂ ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲೂಕಿನ ನಾಲ್ಕನೇ ಸಮ್ಮೇಳನ ಯಶಸ್ವಿಯಾಗಿ ಜರುಗಿತು. ಜನತೆಯನ್ನು ಬಾಧಿಸುತ್ತಿರುವ ಕಷ್ಟದ ದಿನಗಳನ್ನು ಎದುರಿಸಲು ಪಕ್ಷದ ಹೋರಾಟ ಬಲಗೊಳಿಸಲು, ಸಂಘಟನೆ ಬಲಗೊಳಿಸಲು ಚರ್ಚೆ ನಡೆಯಿತು. ಪಕ್ಷದ ತಾಲೂಕಿನ ಕಾರ್ಯದರ್ಶಿಯಾಗಿ ತಿಮ್ಮಪ್ಪ ಗೌಡ ಆಯ್ಕೆಯಾದರೂ.



JANASHAKTHI KANNADA VARA PATRIKE: Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **NITYANANDASWAMI**